ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆ

(ಸಂಶೋಧನ ಲೇಖನಗಳು)

ಸಂಪಾದಕರು

ಪ್ರೊ. ಷಪಾನ



ಪ್ರೊ. ಷಪಾನ

ಕನ್ನಡ ಸಾಹಿತ್ಯವು ಜಗತ್ತಿನ ಇತರೆ ಸಾಹಿತ್ಯಗಳಂತೆ ತನ್ನ ಅಂತಃಸತ್ವದ ಉದ್ದೇಶವು ಮಾನವೀಯತೆಯ ಪ್ರಚಾರವೇ ಆಗಿತ್ತು. ಪಂಪಾದಿ ಕವಿಗಳಲ್ಲಿ ಈ ಸಂದೇಶವು ಅನುರಣಿತವಾಗಿದೆ. ಇತಿಹಾಸದಲ್ಲಿ ಹನ್ನೆರಡನೆಯ ಮತ್ತು ಹದಿನೈದನೇಯ ಶತಮಾನ ಒಂದು ವಿಶಿಷ್ಟ ಕಾಲಘಟ್ಟ. ವಚನಗಳ ಯುಗವಿರಬಹುದು, ಕೀತನಯುಗವಿರಬಹುದು ಇವೆರೆಡು ಐತಿಹಾಸಿಕ ಪುಟಗಳಲ್ಲಿ ಗುರುತಿಸಬಹುದಾಗಿದೆ. 'ಜಿಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕತೆಯ ಸ್ಪರ್ಶ ನೀಡುವ ಮೂಲಕ ಒಂದು ಹೊಸ ಸಮಾಜದ ಸೃಷ್ಟಿಯ ಕನಸನ್ನು' ಕಂಡಂತಹವರು ಶರಣರು. ಬಸವಣ್ಣ ವಚನ ಸಾಹಿತ್ಯಕ್ಕೆ ಹೊಸ ಭಾಷ್ಯ ಬರೆದಿರುವುದರ ಜೊತೆಗೆ ನಾಯಕದ ನೇತೃತ್ವವಹಿಸಿ ಶರಣರ ಜೊತೆಗೂಡಿ ನಡೆಸಿದಂತಹ ಕ್ರಾಂತಿ ಅಪೂರ್ವವಾದುದು. ಕಲುಷಿತಗೊಂಡಿದ್ದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ದಿಕ್ಕರಿಸಿ, ಘನ ಬದಲಾವಣೆಯನ್ನು ಆರಿಸಿ ಹೊರಟ ದಾರ್ಶನಿಕರು. ತನ್ನ ವಚನಗಳ ಮೂಲಕ ಕಾಯಕವೇ ಕೈಲಾಸ ತತ್ವದ ತಿರುಳು ಹಾಗೂ ಮಹಿಳಾ ಸ್ವಾತಂತ್ರ್ಯಕ್ಕೂ ಅವಕಾಶ ಕಲ್ಪಿಸಿಕೊಟ್ಟರು. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯು ಸಾಮಾಜಿಕ ಚಳುವಳಿಯಾಗಿ ರೂಪುಗೊಂಡು, ಸಾಮಾನ್ಯ ಬದುಕಿನ ಎಲ್ಲಾ ಸ್ತರಗಳು ಆ ಚಳವಳಿಯ ಒಂದು ಭಾಗವಾಗಿದ್ದು ಶರಣರ ಪೂರ್ಣದೃಷ್ಟಿಯ ಸಂಕೇತ. ಅದುವೇ 'ವಿಶ್ವಮಾನವ ಸಂದೇಶದ ಒಳನೋಟ' ಒದಗಿಸಿದೆ. ಸಾಮಾಜಿಕ ಸಮಾನತೆಯೇ ಸಾಹಿತ್ಯದ ಧ್ಯೇಯ ಉದ್ದೇಶವಾಗಿರುವುದು ಗಮನಾರ್ಹವಾಗಿದೆ,.

ಗೌಹರ್ ಪ್ರಕಾಶನ,
ಬೆಂಗಳೂರು

9 789334 268843

ವರ್ತಮಾನದ ಕನ್ನಡ ಸಣ್ಣ ಕಥಾ ಸಾಹಿತ್ಯ ಮತ್ತು ಪ್ರತಿಸ್ಪಂದನೆ.

ಹೊನ್ನರಾಜು ಎಸ್ ವಿ,

ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ,

ಕೆಎನ್‌ವಿವಿಎಸ್ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ,

ಕಿತ್ತೂರು, ಬೆಳಗಾವಿ. ಕರ್ನಾಟಕ.

ಕಥೆ ಎಂಬ ಪದ 'ಕಥಾ' ಎಂಬ ಸಂಸ್ಕೃತ ಪದದಿಂದ ಬಂದಿದೆ. 'ಕಥಾ' ಎಂಬ ಪದ ಕಥ್ ಎಂಬ ಧಾತುವಿನಿಂದ ಬಂದಿದೆ. ಕಥ್ ಎಂದರೆ ಹೇಳು ಎಂದರ್ಥ. ಕಥಾ ಎಂಬ ಶಬ್ದದ ಪ್ರಥಮ ಪ್ರಯೋಗ ವೇದಗಳಲ್ಲಿಯೇ ಇದೆ. ಕಥೆಯನ್ನು ಕುರಿತು ಪಾಣಿನಿಯು ಕಥೆ ಎಂಬುದು ಸತ್ಯವನ್ನೊಳಗೊಂಡ ಕಲ್ಪನಾ ಪ್ರಬಂದ ಎಂದಿದ್ದಾನೆ. ಕಥಾ ಎಂಬ ಸಂಸ್ಕೃತ ಪದ ಕನ್ನಡಕ್ಕೆ ಬರುವಾಗ ಅಂತ್ಯವ್ಯಂಜನದ ದೀರ್ಘವನ್ನು ಕಳೆದುಕೊಂಡು 'ಎ' ಸ್ವರ ಸೇರಿಕೊಳ್ಳುವುದರ ಮೂಲಕ ಕಥೆ ಆಗಿದೆ.

ಸಣ್ಣಕಥೆ ಎಂಬುದು ಇತರ ಸಾಹಿತ್ಯ ಪ್ರಕಾರಗಳಂತೆ ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯಿಂದಲೇ ಕನ್ನಡಕ್ಕೆ ಬಂತು. ಇಂಗ್ಲೀಷ್‌ನ ಶಾರ್ಟ ಸ್ಟೋರಿ ಕನ್ನಡದಲ್ಲಿ 'ಸಣ್ಣಕಥೆ' ಎಂದು ಅನುವಾದಗೊಂಡು ಬಳಕೆಯಲ್ಲಿ ಬಂದಿದೆ. ಈ ಸಣ್ಣಕಥೆ ಎಂಬುದನ್ನು ಮೊದಲು ಬಳಸಿದವರು ಮಾಸ್ತಿ ವೆಂಕಟೇಶ ಅಯ್ಯಾಂಗಾರ್. ಸಣ್ಣಕಥೆ ಕಾದಂಬರಿಯ ಸಂಕ್ಷಿಪ್ತ ಆವೃತ್ತಿಯೂ ಅಲ್ಲ. ಭಾವಗೀತೆಯ ಗದ್ಯರೂಪವೂ ಅಲ್ಲ. ಅದಕ್ಕೆ ತನ್ನದೇ ಆದ ಅಸ್ತಿತ್ವವಿದೆ. ಲಕ್ಷಣಗಳಿವೆ. ಇದನ್ನು ಕಥನ ಸಾಹಿತ್ಯದ ಒಂದು ಅಂಗವೆಂದೇ ನೋಡಬೇಕಾಗುತ್ತದೆ.

ರೂಪ ಗಾತ್ರದ ದೃಷ್ಟಿಯಿಂದ ಸಣ್ಣಕಥೆ ಕಾದಂಬರಿಗಿಂತ ತುಂಬಾ ಚಿಕ್ಕದು. ಆದರೆ ಕಾದಂಬರಿ ಮಾಡಬಲ್ಲ ಕಾರ್ಯವನ್ನು ಕಥಾಸಾಹಿತ್ಯವು ಮಾಡಬಲ್ಲದು. ಕಡಿಮೆ ಅವಧಿಯಲ್ಲಿ ಓದಿ ಮುಗಿಸುವ ಇದರ ಪರಿಣಾಮ ಮಹಾಕಾವ್ಯದ ಓದಿಗೆ ಸಮಾನವಾದುದೆಂಬ ಅಭಿಪ್ರಾಯವೂ ಇದೆ. ಒಂದು ವಸ್ತು, ಘಟನೆಯನ್ನೊ ಇಟ್ಟುಕೊಂಡು ನಾಲ್ಕಾರು ಪಾತ್ರಗಳ ಮೂಲಕ ಪರಿಣಾಮಕಾರಿಯಾಗಿ ಮೂಡಿಬರುವ ಕತೆಯ ಕಲಾತ್ಮಕತೆ ತುಂಬಾ ಕುಸುರಿನಿಂದ ಕೂಡಿದ್ದಾಗಿರುತ್ತದೆ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯರಿಂದ ಪ್ರೇರಣೆ ಹೊಂದಿ ಕನ್ನಡದಲ್ಲಿ ಬೇರೊಂದು ಮೈಯ್ಯನ್ನು ಪಡೆದುಕೊಂಡು ಸಾಹಿತ್ಯರಂಗ ಪ್ರವೇಶಿಸಿದ ಸಣ್ಣಕಥೆಯನ್ನು ಕುರಿತು ಪಾಶ್ಚಾತ್ಯ -

ISBN Number : 978-93-342-6884-3

ಪೌರ್ವಾತ್ಯ ವಿದ್ವಂಸರೂ ಚಿಂತನೆ ಮಾಡುತ್ತಾ ಬಂದಿದ್ದಾರೆ. ಅದರ ಸ್ವರೂಪ ಲಕ್ಷಣಗಳನ್ನು ಸೂತ್ರಬದ್ದವಾಗಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಹೀಗೆ ಸೂತ್ರೀಕರಿಸಿದ ಹಲವು ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ.

ಪಿ ವಿ ಶಾಸ್ತ್ರಿಯವರು ಹೇಳುವಂತೆ 'ಸಣ್ಣಕಥೆ ಕಾದಂಬರಿಯ ಒಂದು ಪ್ರಕಾರವಲ್ಲ, ಅದು ಕಾದಂಬರಿಯ ಸಂಕ್ಷೇಪಿಕರಣವೂ ಅಲ್ಲ, ಅದು ಚಿಕ್ಕ ಕಾದಂಬರಿಯೂ ಅಲ್ಲ' ಎಂದಿದ್ದಾರೆ. ಎಸ್ ವಿ ರಂಗಣ್ಣ ಅವರು 'ಸಣ್ಣಕಥೆಯೆಂಬುದು ಸ್ವಾಭಾವಿಕವಾಗಿ ಇಚ್ಚೆ ಬಂದಂತೆ, ಲವಲವಿಕೆಯಿಂದ ನಡೆದಾಡುತ್ತಿರುವ ಸಾಹಿತ್ಯ ವಿಷೇಷ. ನಿರ್ಧಿಷ್ಟ ನಿಯಮಗಳ ಹಂಗೇ ಅದಕ್ಕೆ ಇಲ್ಲ. ಅಂದಮೇಲೆ ಸೂತ್ರಗಳ ಸಂಕಲೆಗಳನ್ನು ಹಾಕಿ ಅದರ ಸ್ವಾತಂತ್ರ್ಯವನ್ನು ಏತಕ್ಕೆ ಊನ ಮಾಡುವಿರಿ'? ಎಂದಿದ್ದಾರೆ. ಅಲ್ಲದೇ ಸಣ್ಣಕತೆಯನ್ನು 'ಲಂಗತೊಟ್ಟ ದೊರೆಸಾನಿ; ಸೀರೆಯುಟ್ಟು ಮುತ್ತೈದೆಯಾಗಬಯಸುತಿದ್ದಾಳೆ. ಎಂದಿದ್ದಾರೆ.

'ಸಣ್ಣಕಥೆ ಸ್ವತಂತ್ರವಾದದ್ದು. ತನ್ನದೇ ಆದ ಒಂದು ಶಿಸ್ತನ್ನು ಪಾಲಿಸಿಕೊಂಡಿರತಕ್ಕದ್ದು. ಭಾರತೀಯ ಸಂಸಾರದಲ್ಲಿ ಹತ್ತು ವರ್ಷದಿಂದ ಹದಿನಾಲ್ಕು ವರ್ಷದ ಕನ್ಯೆಯರಿಗೆ ಯಾವ ಸ್ಥಾನವಿದಿಯೋ ಅದೇ ಸ್ಥಾನ ಸಣ್ಣಕಥೆಗೆ ಇದೆ. ಎಂಬುದು ಆರ್ ಬವರಾಜ್ ಅವರ ವಾದವಾಗಿದೆ. ಬೇಂದ್ರೆಯವರು 'ಸಣ್ಣಕಥೆಯು ಅಲ್ಪಜೀವಿಗಳ ಮಹಾಕಾವ್ಯ ಎಂದಿದ್ದಾರೆ. 'ಸಣ್ಣಕಥೆ ಎಂಬುದು ಒಂದು ರಸಬಿಂದು, ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ. ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತೀಸ್ವಲ್ಪ. ತೋರಿಸುವ ಸತ್ಯ ಅದ್ಭುತ. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ, ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಚತುರ ಕ್ರಿಯೆ ಅದರದು. 'ಸಣ್ಣಕಥೆಯಲ್ಲಿ ಭವದ ಹಿರಿಮೆ ಇರಬೇಕು. ಭಾವದ ನಿರೂಪಣೆ ಸುಂದರವಾಗಿರಬೇಕು. ಎಂದು ಕೃಷ್ಣಮೂರ್ತಿ ಪುರಾಣಿಕರು ಅಭಿಪ್ರಾಯಪಡುತ್ತಾರೆ. ಹೇಗೋ ಕನ್ನಡದಲ್ಲಿ ಸಣ್ಣಕತೆ ಬೆಳೆದಿದೆ. ಅದು ಆಕಾರದಲ್ಲಿ ಚಿಕ್ಕದಾದರೂ ಪರಿಣಾಮದಲ್ಲಿ ಮಹತ್ವದ್ದಾಗಿದೆ.

ಸುಮಾರು ೫೦-೬೦ ವರ್ಷಗಳಲ್ಲಿ ಅದ್ಭುತವಾದ ಮೆಚ್ಚುಗೆಯನ್ನು ಪಡೆದಿದೆ. ವಿಶಿಷ್ಟವಾದ ತಂತ್ರವನ್ನು ರೂಪಿಸಿಕೊಂಡಿದೆ. ಘಟನಾ ಪ್ರಧಾನ, ವಾತಾವರಣ ಪ್ರಧಾನ, ಸ್ವಭಾವ ದರ್ಶನಾತ್ಮಕ ಸಣ್ಣಕಥೆಗಳೇ ಅಲ್ಲದೇ ಫಲದೃಷ್ಟಿಯಿಂದ ಸಾಮಾಜಿಕ, ಐತಿಹಾಸಿಕ, ತಾತ್ವಿಕ ರಸೋತ್ಪಾದಕ, ಮನೋವಿಶ್ಲೇಷಣಾತ್ಮಕ ಕಥೆಗಳು ಹೇರಳವಾಗಿ ರಚಿತವಾಗಿವೆ. ಇದಿಷ್ಟು ಕಥಾ ಸಾಹಿತ್ಯಕ್ಕೆ ಸಂಬಂಧಿಸಿದ ಹಿನ್ನೆಲೆಯಾದರೆ ವರ್ತಮಾನದಲ್ಲಿ ಕನ್ನಡ

ISBN Number : 978-93-342-6884-3

ಸಣ್ಣ ಕಥಾ ಸಾಹಿತ್ಯ ಮತ್ತು ಅದಕ್ಕೆ ಪ್ರತಿಸ್ಪಂದನೆ ಹೇಗಿದೆ ಎಂಬುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಈವತ್ತು ಕನ್ನಡ ಕಥಾ ಜಗತ್ತು ತುಂಬಾ ಪ್ರಜ್ವಲವಾದ ಸ್ಥಿತಿಯಲ್ಲಿದ್ದರೂ ಮತ್ತು ಸಾಹಿತ್ಯ ಪ್ರಕಾರಗಳಲ್ಲಿ ತುಂಬಾ ದೊಡ್ಡದಾಗಿ ಬೆಳೆದಿದ್ದರೂ ಸಹ ಎಷ್ಟು ಜನರಿಗೆ ಕಥೆಗಳು ತಲುಪಿವೆ? ಎನ್ನುವ ಪ್ರಶ್ನೆ ಬರುತ್ತದೆ. ಇಂದಿನ ಕಥಾಪ್ರಪಂಚ ಎಲ್ಲರಿಗೂ ತಲುಪುವ ದಿಸೆಯಲ್ಲಿ ಬೇಳೆಯುತ್ತಿಲ್ಲವೇನೊ ಎಂದು ಕೆಲವೊಮ್ಮೆ ಎನಿಸದಿರದು. ನವೋದಯದ ಸರಳ ಮಾದರಿ, ಆಮೇಲೆ ಬಂದ ನವ್ಯದ ಮನೋವಿಶ್ಲೇಷಣಾತ್ಮಕ ಕಥಾ ಪ್ರಪಂಚ, ಪ್ರಗತಿಶೀಲದ ಎಡ ಪಂಥೀಯ ಚಿಂತನೆಗಳು, ದಲಿತ ಬಂಡಾಯಪಂಥಗಳ ಖಡ್ಗವಾಗುವ ಕಥಾಪರಂಪರೆಗಳು ಸುಮಾರು ಅರವತ್ತು ವರ್ಷಗಳ ಕಾಲ ಕನ್ನಡ ಜಗತ್ತನ್ನು ಆಳಿದವು. ಇದರಿಂದಾಗಿ ಕಥೆಗಾರನಿಗೆ ಪೂರ್ವಾಗ್ರಹ ಚಷ್ಮಗಳಿಲ್ಲದೇ ನೋಡಬಹುದಾದ ನೇರ ಗ್ರಹಿಕೆಯ ಕಥಾ ಪ್ರಪಂಚ ವೀಕ್ಷಣೆಗೆ ಸಾಧ್ಯವಾಗಲಿಲ್ಲವೇನೋ ಎನಿಸುತ್ತದೆ. ಈ ಪ್ರತಿಯೊಂದು ಚಳವಳಿಗಳ ಹಿಂದೆ 'ಇಸಂ'ಗಳು ಕೆಲಸ ಮಾಡಿವೆ. ಜನರ ನೋವಿಗೆ ಮಿಡಿವ ಪ್ರಾಣಮಿತ್ರ ಆಗಿವೆ. ಆದರೆ 'ಇಸಂ'ಗಳು ಕಥೆಗಳನ್ನು ನೇರವಾಗಿ ಪ್ರವೇಶಿಸಿದ್ದರಿಂದ ಕಥೆಯ ಕುಸುರಿ ಕುಸಿದು ಆಶಯಗಳೇ ಪ್ರಾಬಲ್ಯ ಗಳಿಸಿದವೆಯೇನೋ ಎಂದು ಅನ್ನಿಸದಿರದು.

ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕಾಳಜಿಗಳು ಸೇರ್ಪಡೆಯಾದವು. ಪಂಜೆ ಮಂಗೇಶರಾಯರು, ಮಾಸ್ತಿ, ಸಿ. ಕೆ ವೆಂಕಟರಾಮಯ್ಯ, ಗೊರೂರು, ಸೇಡಿಯಾಪು ಕೃಷ್ಣಭಟ್ಟ, ಎಮ್ ಎನ್ ಕಾಮತ್, ಮುಂತಾದವರು ತಮ್ಮ ಆಕೃತಿಗಳಲ್ಲಿ ಮಾನವೀಯ ಸಂಬಂಧದ ಹುಡುಕಾಟ ನಡೆಸಿದರು. ನಮ್ಮ ಆದರ್ಶಗಳೇನೆಂಬುದನ್ನು ಚಿತ್ರಿಸುವಲ್ಲಿ ಯಶಸ್ಸನ್ನು ಸಾಧಿಸಿದರು. ಹಾಗಾಗಿ ಆ ಕಾಲಘಟ್ಟದ ಕಥಾ ಸಾಹಿತ್ಯದಲ್ಲಿ ಆಕ್ರೋಶ ಅಬ್ಬರ ಕೇಳಿಸಿತು. 'ನವೋದಯ ಕಥಾಸಾಹಿತ್ಯದಲ್ಲಿ ಪ್ರಕಟವಾದ ಉತ್ಕಟತೆ, ಕಲಾತ್ಮಕತೆ, ಪ್ರಗತಿಶೀಲ ಕಾಲಘಟ್ಟದಲ್ಲಿ ಕಂಡುಬರುವುದಿಲ್ಲ. ಆದರೆ ವಾಸ್ತವವಾದ ತನ್ನ ನೆಲೆಯಲ್ಲಿ ಮತ್ತಷ್ಟು ವಿಸ್ತರಿಸಿಕೊಂಡಿದ್ದು ಪ್ರಗತಿಶೀಲ ಕಥಾಸಾಹಿತ್ಯದ ಮಹತ್ವದ ಅಂಶವಾಗಿದೆ. ಮುಖ್ಯವಾಗಿ ಲೇಖಕ ಮತ್ತು ಓದುಗರ ನಡುವೆ ಸಾಮಾಜಿಕ ಪ್ರಜ್ಞೆಯನ್ನು ತೀವ್ರಗೊಳಿಸಿದ್ದು ಪ್ರಗತಿಶೀಲ ಕಥಾಸಾಹಿತ್ಯ. ಆದರ್ಶ ಹಾಗೂ ಅದರ ವ್ಯಕ್ತಿತ್ವ ನಿರ್ಮಾಣ ನವೋದಯ ಸಾಹಿತ್ಯದಲ್ಲಿ ಹೆಚ್ಚು ಪ್ರಾಮುಖ್ಯವನ್ನು ಪಡೆದಿದ್ದರೆ ಸಾಮಾಜಿಕ ಪ್ರತಿಪಾದನೆ ಪ್ರಗತಿಶೀಲ ಕಥಾಸಾಹಿತ್ಯದಲ್ಲಿ ಪ್ರಾಮುಖ್ಯವಾಯಿತು. ಅದರಿಂದಾಗಿ ಬದುಕಿನ ಆದರ್ಶಮಯತೆ ಮತ್ತು ಸಾಮಾಜಿಕ ಪ್ರಜ್ಞೆ- ಇವೆರಡನ್ನೂ ಒಳಗೊಂಡಂತಹ ಕಥಾಸಾಹಿತ್ಯ ನವೋದಯ ಮತ್ತು ಪ್ರಗತಿಶೀಲರ ಕಾಲಘಟ್ಟದಲ್ಲಿ ಮೂಡಿಬಂದಿತು.

ISBN Number : 978-93-342-6884-3

ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕಥಾಸಾಹಿತ್ಯವೆಂದರೆ ನವ್ಯ ಮತ್ತು ನವ್ಯೋತ್ತರದ್ದು. ಕನ್ನಡ ಭಾಷೆಯನ್ನು ಸೊಗಸಾಗಿ ದುಡಿಸಿಕೊಂಡು ಅಷ್ಟೇ ಮಾದರಿಯ ಕಥೆಗಳನ್ನು ನೀಡಿದವರೆಂದರೆ ನವ್ಯರು. ಅನಂತಮೂರ್ತಿ, ಯಶವಂತಚಿತ್ತಾಲ, ಶಾಂತಿನಾಥದೇಸಾಯಿ, ರಾಮಚಂದ್ರಶರ್ಮ, ಲಂಕೇಶ್ , ತೇಜಸ್ವಿ, ಸದಾಶಿವ, ಬೆಸಗರಹಳ್ಳಿ ರಾಮಣ್ಣ, ಶ್ರೀ ಕೃಷ್ಣ ಆಲನಹಳ್ಳಿ, ಬರಗೂರು, ಟಿ ಎಂ ಸುಬ್ಬರಾಯ, ಜಯಂತ್ ಕಾಯ್ಕಿಣಿ, ಸದಾಶಿವ, ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ನವ್ಯತೆ ಕನ್ನಡ ಸಣ್ಣಕಥೆಯ ವಸ್ತು ಶೈಲಿಯಲ್ಲಿ ಬದಲಾವಣೆ ತಂದಿತು. ತಂತ್ರದಲ್ಲೂ ಅನೇಕ ಬದಲಾವಣೆಗಳನ್ನು ಮೂಡಿಸಿತು. ಭಾಷೆಯ ಬಳಕೆಯ ದೃಷ್ಟಿಯಿಂದ ಈ ಕಥೆಗಾರರು ಅಗಾಧವಾದ ಕೆಲಸವನ್ನು ಮಾಡಿದ್ದಾರೆ. ಇವರ ಕೃತಿಗಳಲ್ಲಿ ತಂತ್ರ ಅಭಿವ್ಯಕ್ತಿ, ಅನಿವಾರ್ಯವಾಗಿದೆ. ಅನುಭವವನ್ನು ಅರಗಿಸಿಕೊಂಡು ಅದರಿಂದ ದೂರನಿಂತು ತದಾತ್ಮ್ಯವನ್ನು ಸಾಧಿಸಿ ವಿಮರ್ಶಕ ಪ್ರಜ್ಞೆಯನ್ನು ಇಟ್ಟುಕೊಂಡು ಕೃತಿ ರಚನೆಗೆ ತೊಡಗಿದರು. ವೀರ್ಯವತ್ತಾದ ಶೈಲಿ ಇವರದು. ಜೀವನದಲ್ಲಿ ಮಾರ್ಗದರ್ಶಕವಾಗುವ ಮೌಲ್ಯಗಳುಂಟೇ ಎಂಬುದೇ ಇವರ ಪ್ರಶ್ನೆ. ಆದ್ದರಿಂದ ಸಮಾಜದ ಸಮಸ್ಯೆಗಳಿಗಿಂತ ವಯುಕ್ತಿಕ ಸಮಸ್ಯೆಗಳಿಗೇ ಇವರ ಕಥೆಗಳಲ್ಲಿ ಹೆಚ್ಚು ಒತ್ತು ಬಿತ್ತು. ಇಂತಹ ವಯುಕ್ತಿಕ ಆಲೋಚನೆಗಳು, ಅನುಭವದ ಉತ್ಕಟತೆಯ ಮೂಲಕ ಸಾರ್ವತ್ರಿಕವಾಗಬಲ್ಲುದೆಂಬುದು ಇವರ ಆಶಯವಾಗಿತ್ತು. ಮನಸ್ಸಿನ ಹೊಯ್ದಾಟ-ತೊಯ್ದಾಟಗಳ ರಹಸ್ಯವನ್ನು ಸಂಕೋಚವಿಲ್ಲದೇ ಚಿತ್ರಿಸಿದರು. ಕುತೂಹಲ ಕೆರಳಿಸುವ ನಿರೂಪಣಾ ಕ್ರಮಗಳನ್ನು ಬಿಟ್ಟುಕೊಟ್ಟು ಘಟನೆಗಳ ಹಿಂದಿನ ಧ್ವನಿಯ ಮೇಲೆ ಅನುಭವದ ಅರ್ಥವಿಶ್ಲೇಷಣೆಯ ಮೇಲೆ ಈ ಕಥೆಗಾರರು ತಮ್ಮಗಮನವನ್ನು ಕೇಂದ್ರೀಕರಿಸಿದರು. ಈ ಪ್ರಯತ್ನದಲ್ಲಿ ಘಟನೆಗಳ ತಾರ್ಕಿಕ ಹೊಂದಾಣಿಕೆಯನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿದ್ದರು. ದೇವನೂರು, ಮುಂತಾದವರಲ್ಲಿ ಭಾಷೆಯ ವಿವಿದ ಬಗೆಯ ಲಯಗಳನ್ನು ತಮ್ಮ ಕಥಾಸಾಹಿತ್ಯದಲ್ಲಿ ಅನಾವರಣಗೊಳಿಸಿ ಕೃತಿಗಳಿಗೆ ಅನನ್ಯತೆಯನ್ನು ತಂದುಕೊಟ್ಟರು. ಈ ಕಾಲಘಟ್ಟದಲ್ಲಿ ಕನ್ನಡದ ಸಣ್ಣಕಥೆಗಳ ಸುಗ್ಗಿಯನ್ನೇ ಕಾಣಬಹುದು. ಜ್ಞಾನ ಪ್ರವಾಹ ತಂತ್ರದಮೂಲಕ ಘಟನೆ ಹಾಗೂ ಪರಿಸರದ ವಿವರಗಳನ್ನೆಲ್ಲಾ ಸಾಂಕೇತಿಕವಾಗಿ ಬಳಸಿಕೊಂಡು ಅನುಭವ ಅರ್ಥದ ಪದರುಗಳನ್ನು ವಿಸ್ತರಿಸಿದರು. ಹೀಗಾಗಿ ಸಣ್ಣಕತೆ ಕವಿತೆಗೆ ತೀರಾ ಹತ್ತಿರವಾಯಿತು. ಭಾಷೆಯನ್ನು ಅತ್ಯಂತ ಕಾಳಜಿಯಿಂದ ಬಳಸತೊಡಗಿದರು. ವಾಸ್ತವವಾದ ನಿರ್ಬಂಧವನ್ನು ಮುರಿದು ಮಾನವಶಾಸ್ತ್ರ ಹಾಗೂ ಅಸ್ತಿತ್ವವಾದಗಳ ಪ್ರಭಾವವನ್ನು ಕಥೆಗಳಲ್ಲಿ ಮೂಡಿಸಿದರು.

ದೇವನೂರು ಮಹಾದೇವ ಅವರ ದ್ಯಾವನೂರು ಕಥಾಸಂಕಲನದ ಪ್ರಕಟಣೆಯ ನಂತರ ದಲಿತ ಸಂವೇದನೆಗಳ ಹೊಸ ದನಿಯೊಂದು ಕನ್ನಡ ಸಣ್ಣಕಥಾವಾಹಿನಿಯನ್ನು ಸೇರಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ

ISBN Number : 978-93-342-6884-3

ದಲಿತ ಪ್ರಜ್ಞೆಯ , ತುಳಿತಕ್ಕೊಳಗಾದವರ ಅದುವರೆಗೂ ಅನಾವರಣವಾಗದಿದ್ದ ಬದುಕು, ಆ ಬದುಕಿನ ಸಂಕೀರ್ಣಗಳು, ಕಥೆಯಲ್ಲಿ ಮೈಪಡೆಯತೊಡಗಿದವು. ಹೊಸ ಸಂವೇದನೆಗಳು, ಹೊಸ ಅನುಭವಗಳು, ವಿಶಿಷ್ಟವಾದ ದೇಸೀಯ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಮವನ್ನು ಪಡೆದುಕೊಂಡಿತು. ಕುಂ.ವೀ, ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಮೊದಲಾದವರು ಉತ್ತಮ ಕಥೆಗಳನ್ನು ನೀಡಿದರು. ದಲಿತ ಸಂವೇದನೆಯ ಇನ್ನೊಂದು ಮುಖವೇ ಆದ ಬಂಡಾಯ ಸಂವೇದನೆಯ ಕಥೆಗಳೂ ಆನಂತರದಲ್ಲಿ ಕನ್ನಡದಲ್ಲಿ ಪ್ರಕಟಗೊಂಡವು. ಕನ್ನಡದ ಸಂದರ್ಭದಲ್ಲಿ ಮುಸ್ಲಿಂ ಸಂವೇದನೆಯ ಅನೇಕ ಕಥೆಗಾರರೂ ತಮ್ಮ ಸೃಜನಶೀಲತೆಯಿಂದ ಕನ್ನಡ ಸಣ್ಣಕಥೆಯ ಕ್ಷಿತಿಜವನ್ನು ಹಿಗ್ಗಿಸುವಲ್ಲಿ ತಮ್ಮಕಾಣಿಕೆಯನ್ನು ನೀಡಿದರು. ಹೀಗೆ ಕನ್ನಡ ಸಣ್ಣಕಥಾ ಪ್ರಪಂಚ ಹೊಸ ಸಂವೇದನೆಗಳನ್ನು ಆಯಾ ಕಾಲ ಸಂದರ್ಭದ ಯುಗಧರ್ಮವನ್ನು ಒಳಗೊಳ್ಳುತ್ತ ಶ್ರೀಮಂತವಾಗುತ್ತಾ ಸಾಗುತ್ತಿದೆ. ಹೀಗೆ ಸಣ್ಣಕಥೆಯ ಕ್ಷೇತ್ರದಲ್ಲಿ ಅನೇಕ ಕಥೆಗಾರರು ತಮ್ಮ ಸೃಜನಶೀಲತೆಯಿಂದ ಗಮನ ಸೆಳೆದಿದ್ದಾರೆ. ಅಂಥವರಲ್ಲಿ ಕಾಳೇಗೌಡ ನಾಗವಾರ, ರಾಜಶೇಖರ ನೀರಮಾನ್ವಿ, ಎಂ ಎಸ್ ಕೆ ಪ್ರಭು, ರಾಘವೇಂದ್ರ ಖಾಸನೀಸ, ಎಸ್ ದಿವಾಕರ, ಶಾಂತರಸ, ವೀರಭದ್ರ, ಕರೀಗೌಡ ಬೀಚನಹಳ್ಳಿ, ಕೆ ಸತ್ಯನಾರಾಯಣ, ರಾಘವೇಂದ್ರ ಪಾಟೀಲ, ವಿಏವೇಕ ಶಾನಭಾಗ, ಕೆ ವಿ ತಿರುಮಲೇಶ್, ನಾ. ಡಿಸೋಜಾ, ಬಿ. ಸೋಮಸುಂದರ, ರಮೇಶಹುಲ್ಲೆಕೆರೆ, ಕ್ಯಾತನಹಳ್ಳಿ ರಾಮಣ್ಣ, ಬೋಳುವಾರು ಮಹಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಅಬ್ದುಲ್ ರಶೀದ್, ಬಿ ಎಂ ಬಷೀರ್, ಕುಕ್ಕರಹಳ್ಳಿ ಬಸವರಾಜು ಕೇಶವರೆಡ್ಡಿ ಹಂದ್ರಾಳ, ಜಯಂತ್ ಕಾಯ್ಕಿಣಿ, ವಸುದೇಂದ್ರ, ಮೊದಲಾದವರು. ಪಂಜೆಯವರು, ಶ್ರೀನಿವಾಸರಿಂದ ಹಿಡಿದು ಇಂದಿನವರೆಗೆ ಸುಮಾರು ನೂರುವರುಷಗಳ ಕಥೆಗಾರರ ಕೃತಿಗಳು ಕನ್ನಡ ಸಣ್ಣಕತೆ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಹಾಗೆಂದ ಮಾತ್ರಕ್ಕೆ ಸಣ್ಣಕಥಾ ಪ್ರಪಂಚ ಪರಿಪೂರ್ಣವಾಗಿದೆ ಎಂದಲ್ಲ. ಇತ್ತೀಚೆಗೆ ಇತರ ಭಾಷೆಗಳಿಂದ ಅನೇಕ ಕತೆಗಳು ಅನುವಾದವಾಗಿ ಬರುತ್ತಿರುವುದು ಒಂದು ಸಂತೋಷದಾಯಕ ಸಂಗತಿ. ನವಕರ್ನಾಟಕ ಪ್ರಕಾಶನ ನಿರಂಜನರ ಸಂಪಾದಕತ್ವದಲ್ಲಿ ವಿಶ್ವಕಥಾಕೋಶ ಮಾಲಿಕೆಯಲ್ಲಿ ಅನುವಾದಿತ ಕಥೆಗಳ ೨೫ ಸಂಪುಟಗಳನ್ನು ಪ್ರಕಟಿಸಿರುವುದು ಭಾರತೀಯ ಭಾಷೆಗಳಲ್ಲಿಯೇ ಒಂದು ದಾಖಲೆ. ಹಾಗೆಯೇ ಕನ್ನಡದ ಅನೇಕ ಉತ್ತಮ ಕಥೆಗಳು ಭಾರತೀಯ ಹಾಗೂ ಹೊರ ದೇಶಗಳ ಭಾಷೆಗೆ ಅನುವಾದವಾಗಿರುವುದು ಗಮನಿಸಬೇಕಾದ ಗಮನಿಸಬೇಕಾದ ಅಂಶ. **ವರ್ತಮಾನದಲ್ಲಿ ಕಥಾ ಸಾಹಿತ್ಯವು ನೀಡುತ್ತಿರುವ ಪ್ರತಿಸ್ಪಂದನೆ** ಅಪೂರ್ವವಾದುದೆಂದೇ ಹೇಳಬಹುದು. ಇದು ಮುಂದಿನ ವಿವರಣೆಯಲ್ಲಿ ವೇದ್ಯವಾಗುತ್ತದೆ. ಕನ್ನಡದಲ್ಲಿ ಸಣ್ಣಕಥೆಗಳು ಕೇವಲ ಪತ್ರಿಕೆಗಳಲ್ಲಿ ಕಾಣುತಿದ್ದ ಕಾಲವೊಂದಿತ್ತು. ಪ್ರಸ್ತುತ ಕಥಾಸಾಹಿತ್ಯವು ಹಲವಾರು ರೂಪದ ಸಂಗ್ರಹದಲ್ಲಿ ಕಾಣುತ್ತಿದೆ. ಲೇಖಕರು ಹೊರತರುವ ಸಂಗ್ರಹಗಳಲ್ಲದೇ

ISBN Number : 978-93-342-6884-3

ಪ್ರಸಿದ್ಧ ಲೇಖಕರ ಪ್ರಾತಿನಿಧಿಕ ಕಥೆಗಳ ಸಂಗ್ರಹಗಳೇ ಹೊರಬರುತ್ತಿವೆ. ಪ್ರತೀ ವರ್ಷವೂ ಕನ್ನಡ ಸಾಹಿತ್ಯ ಪರಿಷತ್ತು ಉತ್ತಮ ಕಥೆಗಳನ್ನು ಆಯ್ದು ಪ್ರಕಟಿಸುತ್ತಿದೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಉತ್ತಮ ಸಣ್ಣಕಥೆಗಳ ಸಂಗ್ರಹಗಳನ್ನು ಹೊರತಂದಿವೆ. ಇತ್ತೀಚಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಶತಮಾನದ ಸಣ್ಣ ಕಥೆಗಳು ಎಂಬ ಸಂಕಲನ ಗ್ರಂಥವನ್ನು ಪ್ರಕಟಿಸಿದೆ. ಸಾಲದ್ದಕ್ಕೆ ಒಬ್ಬನೇ ಲೇಖಕನ ಆಯ್ದಕತೆಗಳ ಸಂಕಲನಗಳೂ ಬರುತ್ತಿವೆ. ವಿವಿಧ ಲೇಖಕರ ಕಥೆಗಳನ್ನೊಳಗೊಂಡ ಬೃಹತ್ ಕಥಾಸಂಕಲನಗಳೂ ಈಚೆಗೆ ಬೆಳಕು ಕಂಡಿವೆ. ಇದಲ್ಲದೇ ಕನ್ನಡ ನಾಡಿನ ವಿವಿಧ ಲೇಖಕಿಯರ ಕಥೆಗಳ ಸಂಕಲನಗಳೂ ಹೊರಬಂದಿವೆ ಬರುತ್ತಿವೆ. ಕಥಾ ಸಾಹಿತ್ಯಕ್ಕೆ ಪತ್ರಿಕೆಗಳ ಪ್ರೋತ್ಸಾಹವೂ ನಿರಂತರವಾಗಿ ಮುಂದುವರೆದಿದೆ. ಇಂದು ಯಾವ ಪತ್ರಿಕೆಯೂ ಕಥೆಗಳನ್ನು ಪ್ರಕಟಿಸದೇ ಇಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಸಣ್ಣಕಥಾವಿಭಾಗ ಇದ್ದೇ ಇದೆ. ಒಂದು ದೃಷ್ಟಿಯಿಂದ ಸಣ್ಣಕಥೆಗಳು ಇಷ್ಟೊಂದು ಪ್ರಮಾಣದಲ್ಲಿ ಹೊರಬರಲು ನಾಡಿನ ಪತ್ರಿಕೆಗಳು ಮಹತ್ವಪೂರ್ಣ ಪಾತ್ರವಹಿಸುತ್ತಿವೆ. ಕೆಲವು ಪತ್ರಿಕೆಗಳು ವಿಶೇಷ ಸಂದರ್ಭಗಳಲ್ಲಿ (ದೀಪಾವಳಿ ವಿಶೇಷಾಂಕ, ಯುಗಾದಿ ವಿಶೇಷಾಂಕ, ಇತ್ಯಾದಿ.) ಆಕರ್ಷಕ ಮೊತ್ತದ ಬಹುಮಾನಗಳನ್ನಿಟ್ಟು ಉತ್ತಮ ಸಣ್ಣಕತೆಗಳನ್ನಿಟ್ಟು ಉತ್ತಮ ಸಣ್ಣಕಥೆಗಳನ್ನು ಆಹ್ವಾನಿಸುತ್ತಿವೆ. ಅಲ್ಲದೆ ಹಲವಾರು ಸಾಹಿತ್ಯಕ ಸಂಘಸಂಸ್ಥೆಗಳು ಆಗಾಗ್ಗೆ ಸ್ಪರ್ದೆಯನ್ನು ಏರ್ಪಡಿಸಿ ಸಣ್ಣಕತೆಗಳನ್ನು ಆಹ್ವಾನಿಸುತ್ತಿವೆ. ಈ ಎಲ್ಲಾ ಕಾರಣಗಳಿಂದ ಸಣ್ಣ ಕಥಾಪ್ರಪಂಚ ಸಮೃದ್ದವಾಗುತ್ತಾ ಸಾಗಿದೆ. ಭಾರತದಾದ್ಯಂತ ನಾವು ಕಥಾ ಜಗತ್ತನ್ನು ಅವಲೋಕಿಸಿದಾಗ, ಕಥೆ ಕಟ್ಟುವುದನ್ನು ಕಲಿಸಲು ಶಾಲೆ ಎಂಬುದಿಲ್ಲ. ಕಥೆ ಬರೆಯುವುದನ್ನು ಕ್ಲಾಸಿಕ್ ಆಗಿ ಸೃಷ್ಟಿಮಾಡಲು ಹೇಳಿಕೊಡುವ ಯಾವ ಪರಿಕರವೂ ಇಲ್ಲ. ಕಥೆಗಾರರಲ್ಲಿ ನಾನು ಒಲಿದಂತೆ ಹಾಡುವೆ ಎನ್ನುವ ಮಂತ್ರದೊಂದಿಗೆ ಬರೆದವರೇ ಹೆಚ್ಚು. ಕಥಾಜಗತ್ತನ್ನು ಪ್ರವೇಶಿಸುವ ಮುನ್ನ ತಮ್ಮ ಅನುಭವ ಮತ್ತು ಜ್ಞಾನವನ್ನು ಕಥಾಭಿತ್ತಿಯ ಮುಖಾಂತರ ಹೇಳಲು ಆರಿಸಿಕೊಂಡಿದ್ದು ನಮ್ಮ ಹಿರಿಯರು ಸಾಗಿದ ಮಾರ್ಗವನ್ನ ಮಾತ್ರ.

ಕಥೆಗಾರ ಮತ್ತು ಕವಿ ಯಾವಾಗಲೂ ತಮ್ಮದೇ ಆದ ಭ್ರಮೆಯಲ್ಲಿ ಬದುಕುತ್ತಿರುತ್ತಾರೆ. ತಾವು ಬರೆದುದ್ದೆಲ್ಲ ಸರ್ವಶ್ರೇಷ್ಟ ಎನ್ನುವ ನಂಬಿಕೆ ಅವರದು. ಇದು ಯಾಕೆ ಹೀಗಾಗುತ್ತದೆಯೆಂದರೆ ಅವರಿಗೆ ನೀವು ಎಲ್ಲಿ ತಿದ್ದಿಕೊಳ್ಳಬೇಕು ಎಂದು ಹೇಳುವವರು ಯಾರು? ತಾನು ಬರೆದಿದ್ದೇ ಸರ್ವಶ್ರೇಷ್ಟ ಎಂಬ ಭ್ರಮೆಯಲ್ಲಿ ಬದುಕುವ ಕಥೆಗಾರನ ಕಿರೀಟವನ್ನು ಕೆಳಗೆ ಇಳಿಸುವವರು ಯಾರು? ಕನ್ನಡ ಕಥೆಗಳಿಗೆ ಓದುಗರು ಕಡಿಮೆ. ಕಥೆಗಳನ್ನು ಯಾರು ಓದಬೇಕು? ಓದುವವರು ಯಾರೆಂದರೆ ಅದೇ ಕಥೆಗಾರರು, ಕವಿಗಳು, ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟವರು ಓದಬೇಕು. ಇತ್ತೀಚಿಗೆ ಅವರೂ ಓದುವುದನ್ನು ಬಿಟ್ಟಿದ್ದಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ವಚನಕಾರರು ಮತ್ತು ತತ್ವಪದಕಾರರು ಸೃಷ್ಠಿಸಿದ ಸಾಮೂಹಿಕ ಪ್ರಜ್ಞೆಯ ಜ್ಞಾನವು ಜನಸಾಮಾನ್ಯರನ್ನು

ISBN Number : 978-93-342-6884-3

ತಲುಪಿದಂತೆ ಆಧುನಿಕ ಕನ್ನಡ ಕಥೆ, ಕಾವ್ಯ ಜನಸಾಮಾನ್ಯರನ್ನು ತಲುಪುವಲ್ಲಿ ವಿಫಲವಾಗಿದೆ. ಜನಸಾಮಾನ್ಯರನ್ನು ತಲುಪುವಲ್ಲಿ ತೇಜಸ್ವಿ, ಲಂಕೇಶ್, ಮೊದಲಾದವರು ಈ ನಿಟ್ಟಿನಲ್ಲಿ ಕಥೆ, ವಿಜ್ಞಾನಲೋಕದ ಕುರಿತ ಬರವಣಿಗೆಯನ್ನು ಅತ್ಯಂತ ಸರಳವಾಗಿ ಸುಲಲಿತವಾಗಿ ಅರ್ಥವಾಗುವ ಫಾರ್ಮಾಟ್‌ನಲ್ಲಿ ಬಳಸಿದರು. ಇದರ ಮುಂದಿನ ಹಂತದಲ್ಲಿ ೨ನೇ ಘಟ್ಟದಲ್ಲಿ ಬಂದ ದೇವನೂರು, ಕುಂವೀ, ಮೊಗಳ್ಳಿ, ನುಗಡೋಣಿ, ಹುಳಿಯಾರ್, ಕಾಯ್ಕಿಣಿ, ಅವರ ತಲೆಮಾರಿನ ಕಥೆಗಳು ಕನ್ನಡ ಕಥಾಪರಂಪರೆಯ ಘನತೆಯನ್ನು ಹೆಚ್ಚಿಸಿದವು. ಇಂದು ಕಥಾ ವಿಮರ್ಶೆಯೂ ಸಹ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ನಡೆಯುತ್ತಿರುವುದು ವಿಷಾದದ ಸಂಗತಿಯೇ. ಅಂತೆಯೇ ಕೆಟ್ಟ ಕಥೆಗಳು ಮುಂಚೂಣಿಗೆ ಬರುತ್ತವೆ. ಆದರೆ ಅವುಗಳ ಆಯುಷ್ಯ ತೀರಾ ಕಡಿಮೆ. ಇಂದಿನ ಕಥೆಗಳಲ್ಲಿ ಆದಿಯ ವೇಗ, ತೂಕ, ಆಳ, ಜೀವನದರ್ಶನ, ವೈವಿಧ್ಯಗಳಿಲ್ಲ. ಕಥೆಗಾರರ ವ್ಯಕ್ತಿತ್ವ ಸ್ಫುಟವಾಗಿ ಪ್ರಕಾಶವಾಗುತ್ತಿಲ್ಲ. ತಂತ್ರಗಾರಿಕೆಯಲ್ಲೂ ಏಕಮುಖವಾದ ಅನುಕರಣೆಯೇ ಕಾಣುತ್ತಿದೆ. ಜೀವನ ಶ್ರದ್ಧೆ ಕಡಿಮೆ. ಅಂಧಾನುಕರಣದ ಫಲವಾಗಿ ನೀರಸತೆಗೆ ಎಡೆಯಾಗಿದೆ. ಇಷ್ಟಾದರೂ ಈಗ ರಚಿತವಾಗಿರುವುಗಳಲ್ಲಿಯೇ ಉತ್ತಮ ವರ್ಗದ ಅನೇಕ ಕಥೆಗಳಿವೆ. ವಿಶ್ವದ ಇತರ ಶ್ರೇಷ್ಠ ಕಥೆಗಳೊಂದಿಗೆ ಸ್ಪರ್ದಿಸಬಲ್ಲ ಕಥೆಗಳಿಲ್ಲದಿಲ್ಲ. ಪರಂಪರೆಯನ್ನು ಜೀರ್ಣಮಾಡಿಕೊಂಡು ಬರೆದರೆ ಮತ್ತಷ್ಟು ಸಮರ್ಥ ಕಥೆಗಳು ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಇತ್ತೀಚಿನ ಅನೇಕ ಕಥೆಗಾರರ ಮಹತ್ವಪೂರ್ಣ ಕಥೆಗಳು ಇಂಗ್ಲೀಷ್, ಹಿಂದಿ, ಮರಾಠಿ, ತಮಿಳು, ತೆಲುಗು ಭಾಷೆಗಳಿಗೆ ಪರಿವರ್ತಿತವಾಗಿ ಮನ್ನಣೆ ಪಡೆದುಕೊಂಡಿವೆ. ಒಟ್ಟಿನಲ್ಲಿ ಸಣ್ಣಕಥೆಯು ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಕಾಲಘಟ್ಟ, ಸಂದರ್ಭಗಳಿಗೆ ಅನುಗುಣವಾಗಿ ತನ್ನರೂಪ ದೃಷ್ಟಿ, ಮತ್ತು ಧೋರಣೆಗಳನ್ನು ಬದಲಾಯಿಸಿಕೊಳ್ಳುತ್ತಾ ಬೆಳೆದು ಬರುತ್ತಿದೆ. ಸಮಕಾಲೀನ ಸನ್ನಿವೇಶದಲ್ಲಿಯೂ ಹೊಸ ಹೊಸ ಒಲವುಗಳನ್ನು ಸ್ವೀಕರಿಸುತ್ತಾ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಮುನ್ನಡೆಯುತ್ತಿರುವುದು ಸಣ್ಣಕಥೆಯ ಹೆಗ್ಗಳಿಕೆ.

ಪರಾಮರ್ಶನ ಸಾಹಿತ್ಯ:

೧. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳು- ಲೇಖಕರು: ಡಾ. ಜಿ. ಆರ್. ತಿಪ್ಪೇಸ್ವಾಮಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ, ಮೈಸೂರು.

೨. ಸ್ಪರ್ದಾ ಶ್ರೇಯಸ್ಸು- ಕನ್ನಡ ಉಪನ್ಯಾಸಕರ ನೇಮಕಾತಿ ಕೈಪಿ- ಈರಪ್ಪ ಶಿ ಮಹಾಲಿಂಗಪೂರ,ಅರವಿಂದ್ ಇಂಡಿಯಾ, ಬೆಂಗಳೂರು

 ISBN Number : 978-93-342-6884-3

೩. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ-ಸಂಪಾದಕರು: ಚಿ.ಸಿ. ನಿಂಗಣ್ಣ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಗುಲ್ಬರ್ಗಾ

೪. ಸಾಹಿತ್ಯ ಭಾರತೀ-ಲೇಖಕರು: ಎನ್ ಅನಂತರಂಗಾಚಾರ್ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು.

೫. ಕನ್ನಡ ಸಾಹಿತ್ಯ ಚರಿತ್ರೆ-ಲೇಖಕರು: ತ ಶು ಶಾಮರಾಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ೩ ನೇ ಹಂತ, ಮೈಸೂರು

೬. ಕನ್ನಡ ಸಾಹಿತ್ಯ ಸಂಜೀವಿನಿ-ಲೇಖಕರು: ಶಿವಶರಣಪ್ಪ ಮೋತಕಪಳ್ಳಿ,ಮೋತಕಪಳ್ಳಿ ಪ್ರಕಾಶನ, ಸಿದ್ದೇಶ್ವರ ನಗರ, ಗಾಜಿಪುರ, ಗುಲ್ಬರ್ಗಾ

೭. ಅಂತರ್ಜಾಲದ ಮಾಹಿತಿ

ISBN Number : 978-93-342-6884-3

ವಚನ ಸಾಹಿತ್ಯದಲ್ಲಿ : ವರ್ಗ ಸಮಾನತೆ

1. ಪ್ರೊ.ಶಪಾನ
(ಸಂಶೋಧನಾ ವಿದ್ಯಾರ್ಥಿನಿ,ಸಾಮಾಜಿಕ ಮತ್ತು ಮಾನವಿಕ ವಿಭಾಗ,
ಶ್ರೀನಿವಾಸ ವಿಶ್ವವಿದ್ಯಾಲಯ,
ಪಾಂಡೇಶ್ವರ, ಮಂಗಳೂರು.
ಸಹಾಯಕ ಪ್ರಾಧ್ಯಾಪಕರು,
ಹಸನಾತ್ ಮಹಿಳಾ ಪದವಿ ಕಾಲೇಜು.ಬೆಂಗಳೂರು)

2. ಡಾ.ರಾಜೇಶ್ ಬೆಜ್ಜಂಗಳ
ಸಂಶೋಧನಾ ಮಾರ್ಗದರ್ಶಕರು,
ಶ್ರೀನಿವಾಸ ವಿಶ್ವವಿದ್ಯಾಲಯ,
ಪಾಂಡೇಶ್ವರ, ಮಂಗಳೂರು

ಒಂದು ಆರೋಗ್ಯಪೂರ್ಣವಾದ ಸಮಾಜ ನಿರ್ಮಾಣಗೊಳ್ಳಬೇಕಾದರೆ ಅದಕ್ಕೆ ಸಮಾನತೆಯ ನೆಲೆಗಟ್ಟು ಬಹಳ ಮುಖ್ಯವಾದುದೆಂಬುದನ್ನು ಶರಣರು ಅರಿತಿದ್ದರು. ಜಾತಿವೈಷಮ್ಯ ಸಾಮಾಜಿಕ ವಾತಾವರಣವನ್ನು ಹದಗೆಡಿಸಿದಂತೆ 'ವರ್ಗ' ತಾರತಮ್ಯವೂ ಅದರ ಸ್ವಾಸ್ಥ್ಯವನ್ನು ಹಾಳುಗೆಡುವುತ್ತದೆ. ಬಡವ, ಶ್ರೀಮಂತರ ನಡುವೆ ಇರುವ ಆರ್ಥಿಕ ಅಸಮಾನತೆಯು ಮನುಷ್ಯನನ್ನು ತಲ್ಲಣಗೊಳಿಸುತ್ತಿದೆ.

ಶತಶತಮಾನಗಳಿಂದ ಜಾಗತಿಕ ಇತಿಹಾಸದ ಪುಟಗಳಲ್ಲಿ ವರ್ಗ ಹೋರಾಟದ ಚಿತ್ರವನ್ನು ಕಾಣುತ್ತೇವೆ. ಆರ್ಥಿಕ ವಿಷಮತೆಯೇ ಜಗತ್ತಿನ ಸಂಘರ್ಷಕ್ಕೆ ಕಾರಣವಾಗುತ್ತದೆ. ಅನ್ಯಾಯ ಅಸಮಾನತೆಯೇ ಜಗತ್ತಿನ ಎಲ್ಲ ಕ್ರಾಂತಿಗಳಿಗೆ ಪ್ರಮುಖವಾದ ಕಾರಣವೆಂದು ಅರಿಸ್ಟಾಟಲ್ ಹೇಳಿದ್ದಾನೆ. ಮಾರ್ಕ್ಸ್ ಕೂಡ ಸಂಪತ್ತಿನ ಸರಿಯಾದ ವಿತರಣೆ ಆಗಬೇಕೆಂದು ಹೇಳುತ್ತಾನೆ. ಸಂಪತ್ತಿನ ಸರಿಯಾದ ವಿತರಣೆ ಆಗದೇ ಇರುವುದರಿಂದ ಶ್ರೀಮಂತರು, ಒಡೆಯರು, ಬಡವರನ್ನು ಕೂಲಿ ಕಾರ್ಮಿಕರನ್ನು ಶೋಷಣೆ ಮಾಡುತ್ತಾರೆ. ಈ ಕಾರಣದಿಂದಲೇ 'ವರ್ಗಹೋರಾಟ' ಹುಟ್ಟಿಕೊಂಡಿದೆ. ಮಾರ್ಕ್ಸ್ ತನ್ನ ಕಮ್ಯುನಿಷ್ಟ ಮೆನಿಫೆಸ್ಟೋದಲ್ಲಿ "The history of all hither to existing society is the history of class struggles" ಎಂದು ಹೇಳಿದ್ದಾನೆ.

ಮಾರ್ಕ್ಸ್ ಹೇಳಿದ ವರ್ಗ ಹೋರಾಟವನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಶಿವಶರಣರು ಅವನಿಗಿಂತ ಮುಂಚೆಯೇ, ಹನ್ನೆರಡನೆಯ ಶತಮಾನದಲ್ಲಿಯೇ ಸಾಮಾಜಿಕ ಅಸಮಾನತೆಗೆ ಮುಖ್ಯ ಕಾರಣ ಈ 'ವರ್ಗ'ಗಳು ಎಂಬುದನ್ನು ಗುರುತಿಸಿದ್ದಾರೆ. ಈ ಅಸಮಾನತೆಗೆ ಕಾರಣಗಳೇನು? ಅವುಗಳಿಗೆ ಪರಿಹಾರಗಳಾವವು ಎಂಬುದರ ಕುರಿತು ಅವರು ಚಿಂತನ ಮಾಡಿದ್ದಾರೆ. ಆರ್ಥಿಕ ಅಸಮಾನತೆಗೆ ಪ್ರಮುಖವಾದ ಕಾರಣಗಳು ಎರಡು. ಒಂದು ಉತ್ಪಾದನಾ ಪದ್ಧತಿಯಲ್ಲಿರುವ ದೋಷ, ಇನ್ನೊಂದು ವಿತರಣಾ ಪದ್ಧತಿಯಲ್ಲಿರುವ ದೋಷ.

ISBN Number : 978-93-342-6884-3

ಉತ್ಪಾದನಾ ಪದ್ಧತಿಯಲ್ಲಿರುವ ದೋಷವೆಂದರೆ, ಅನಾವಶ್ಯಕ ವಸ್ತುಗಳನ್ನು ಉತ್ಪಾದನೆ ಮಾಡಿ ಲಾಭ ಪಡೆಯುವುದು. ಈ ಉತ್ಪಾದನೆಯ ಮೂಲಗಳಾದ ಭೂಮಿ, ಕಾರ್ಮಿಕರು, ಸಂಪತ್ತು ಇವು ಶ್ರೀಮಂತರ ಕೈಯಲ್ಲಿ ಇರುವುದರಿಂದ ಶ್ರೀಮಂತರು ಶ್ರೀಮಂತರಾಗುತ್ತ ನಡೆದರು. ದುಡಿಮೆಯ ವಸ್ತುಗಳಿಲ್ಲದೆ ಭೌತಿಕ ಸಂಪತ್ತನ್ನು ಉತ್ಪಾದಿಸುವುದು ಅಸಾಧ್ಯ. ದುಡಿಮೆಯ ವಸ್ತುಗಳು ಕಾರ್ಮಿಕರಲ್ಲಿ, ಬಡವರಲ್ಲಿ ಇಲ್ಲದಿರುವುದರಿಂದ ಅವರು ಬಡವರಾಗಿಯೇ ಉಳಿಯಬೇಕಾಯಿತು. ಕೆಲಸಗಾರರ ಶ್ರಮದ ಫಲದಿಂದ ಶ್ರೀಮಂತರಾದ ಅಣವಂತರು ಸಂಪತ್ತನ್ನು ಸರಿಯಾಗಿ ವಿತರಣೆ ಮಾಡಲಿಲ್ಲ. ಹೀಗಾಗಿ ಉಳ್ಳವರದು ಒಂದು ವರ್ಗ, ಇಲ್ಲದವರದು ಇನ್ನೊಂದು ವರ್ಗವಾಯಿತು. ಇಲ್ಲದವರ ಬಗ್ಗೆ ಇದ್ದವರಲ್ಲಿ ಅನುಕಂಪ ಮೂಡಿದರೆ ಮಾತು ಬೇರೆ. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ಶ್ರೀಮಂತರ 'ಧನ'ದ ಮದ ಅತಿಯಾಗಿ ಬಡವರಿಗೆ ಕವಡೆಕಿಮ್ಮತ್ತೂ ಇರಲಿಲ್ಲ. ಇದನ್ನು ಗುರುತಿಸಿಯೇ ಶರಣರು ಕಾಯಕ ಜೀವಿಗಳನ್ನೆಲ್ಲ ಒಂದುಗೂಡಿಸಿದರು; ಅವರು ಒಂದುಗೂಡಿದರು.

ಸಮಾಜದಲ್ಲಿ ಶ್ರೀಮಂತರಿಗೆ ವಿಶೇಷ ಗೌರವ. ಜನ ವ್ಯಕ್ತಿಯ ಗುಣಸ್ವಭಾವ ನೋಡುವುದಿಲ್ಲ; ಅವನ ಸಂಪತ್ತನ್ನು ಕಂಡು ಗೌರವಿಸುತ್ತಾರೆ. ಶರಣರು ಸಂಪತ್ತಿಗೆ ಶ್ರೀಮಂತಿಕೆಗೆ ಬೆಲೆ ಕೊಡದೆ ವ್ಯಕ್ತಿಯ ಗುಣಸ್ವಭಾವಗಳಿಗೆ ಮನ್ನಣೆ ನೀಡಿ ಬಡವ-ಶ್ರೀಮಂತರಲ್ಲಿ ಒಳ್ಳೆಯ ಗುಣಸ್ವಭಾವ ಕಂಡು ಗೌರವಿಸುವ ಸಮಾನ ದೃಷ್ಟಿಕೋನವನ್ನು ಹೊಂದಿದ್ದರು.

ಕುದುರೆ ಸತ್ತಿಗೆಯವರ ಕಂಡಡೆ ಹೊಗಳಿಬಿದ್ದು ಕಾಲ ಹಿಡಿವರು
ಭಕ್ತರು ಬಂದಡೆ 'ಎಡೆಯಿಲ್ಲ ಅತ್ತ ಸನ್ನಿ' ಎಂಬರು
ಇನ್ನೊಡೆಯ ಕೂಡಲ ಸಂಗಯ್ಯನವರ ತಡಗೆಡಹಿ ಮೂಗ ಕೊಯ್ಯದೆ ಮಾಬನೆ?

ಅಧಿಕಾರ ಸಂಪತ್ತು ಹೇಗೆ ಮನುಷ್ಯರನ್ನು ಗುಲಾಮರನ್ನಾಗಿ ಮಾಡುತ್ತದೆ. ಜನ ತಮಗರಿವಿಲ್ಲದೆಯೇ ಕುದುರೆ, ಸತ್ತಿಗೆಯವರ ಕಂಡಕೂಡಲೆ ಅವರಿಗೆ ಬಾಗಿ ಕಾಲ ಹಿಡಿಯುವರು. ಆದರೆ ಸಾಮಾನ್ಯ 'ಭಕ್ತ'ನನ್ನು ಸಾಮಾನ್ಯನೆಂದು ಪರಿಗಣಿಸಿ ಅತ್ತ ನಡೆಯೆನ್ನುವರು. ಇದು ಬಸವಣ್ಣನ ಕಾಲದ ಸಮಾಜ. ಇಲ್ಲಿ ಶ್ರೀಮಂತರಿಗೊಂದು ದಾರಿ ಬಡವರಿಗೊಂದು ದಾರಿ. ಈ ಅಸಮಾನತೆಯನ್ನು ಶರಣರು ಹೋಗಲಾಡಿಸಲು ಪ್ರಯತ್ನಿಸಿದ್ದಾರಲ್ಲದೆ ಮನುಷ್ಯರೆಲ್ಲ ಒಂದೇ, ಶ್ರೀಮಂತ ಮತ್ತು ಬಡವನೆಂಬ ತಾರತಮ್ಯ ಸಲ್ಲದೆಂದು ಹೇಳುತ್ತ ತಮ್ಮ ಉದಾತ್ತ ಮಾನವೀಯ ಮೌಲ್ಯವನ್ನು ಮೆರೆದಿದ್ದಾರೆ.

ಬಸವಣ್ಣ ಬಿಜ್ಜಳನಲ್ಲಿ ಮಂತ್ರಿಯಾಗಿದ್ದರೂ ಅವನಲ್ಲಿ ಸಿರಿತನದ ಭಾನವಿಲ್ಲ. ತನ್ನ ಸ್ವಭಾವವನ್ನು ಈ ವಚನದಲ್ಲಿ ಅವನು ಹೇಳಿಕೊಂಡಿದ್ದಾನೆ.

"ಅಡ್ಡ ದೊಡ್ಡ ನಾನಲ್ಲಯ್ಯಾ ದೊಡ್ಡ ಬಸುರನಲ್ಲಯ್ಯಾ

 ISBN Number : 978-93-342-6884-3

ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ

ಹಡೆದುಂಬ ಸೂಳೆಯಂತೆ ಧನವುಳ್ಳವರನರ[1] ಅರ[1]

ಬೋಧಿಸಲು ಪ್ರಾರ್ಥಿಸಲು ಮುನ್ನ

ನಾನರಿಯೆನಯ್ಯಾ

ದೊಡ್ಡತನವೆನಗಿಲ್ಲಯ್ಯಾ ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ ಅನಾಥನಾನಯ್ಯಾ

ಕೂಡಲ ಸಂಗಮದೇವಾ"

[1]ರಿವಂತರ ಲಕ್ಷಣ ಮತ್ತು ಸ್ವಭಾವವನ್ನು ಬಸವಣ್ಣ ಹೇಳುವುದರ ಜೊತೆಗೆ [1]ರಿಯ ಆಸೆಗಾಗಿ ತಮ್ಮ ವ್ಯಕ್ತಿತ್ವವನ್ನು ಮಾರಿಕೊಳ್ಳುವವರು ವೇಶ್ಯಯರ ಸಮಾನವೆಂದು ಹೇಳುವುದರ ಮೂಲಕ [1]ರಿತನ ಶಾಶ್ವತವಲ್ಲ; ಅದನ್ನು ನಚ್ಚಲಾಗದೆಂಬ ಸಂದೇಶವನ್ನು ಸಾರಿದ್ದಾನೆ.

[1]ರಿವಂತರಿಗೆ ಧನದ ಮದ ಕಾಡುತ್ತಿದೆ. ಈ ಸಂಪತ್ತು ತಾನೇ ಮಾಡಿದ್ದು; ತಾನೇ ನೀಡಿದ್ದು ಎಂಬ ಭಾವ ಅವರಲ್ಲಿ ಮನೆ ಮಾಡಿಕೊಂಡಿರುತ್ತದೆ. ದಾನ ಧರ್ಮಾದಿ ಕಾರ್ಯಗಳನ್ನು ಮಾಡಿದರೆ ಅದು ಅವರ ಪ್ರ[1]ದ್ಧಿಯ ಇನ್ನೊಂದು ದಾರಿ; ಮುಖ. ಇಂಥ [1]ರಿವಂತರು ಮಾಡಿದ ಧಾರ್ಮಿಕ ಕಾರ್ಯಗಳು ಆತ್ಮತೃಪ್ತಿಯನ್ನು ನೀಡದೆ ಅವು ಪ್ರದರ್ಶನದ ಸರಕಾಗುತ್ತವೆ.

ಅನವರತ ಮಾಡಿಹೆನೆಂದು ಉಪ್ಪರ ಗುಡಿಯ ಕಟ್ಟಿ ಮಾಡುವ

ಭಕ್ತನ ಮನೆಯದು ಲಂದಣಗಿತ್ತಿಯ ಮನೆ ಸರ್ವಜೀವ ದಯಾಪಾರಿಯೆಂದು

ಭೂತದೇಹಕ್ಕಿಕ್ಕುವನ ಮನೆ

ಸಯಿದಾನದ ಕೇಡು

ಸೂಳೆಯ ಮಗ ಮಾಳವ ಮಾಡಿದಡೆ ತಾಯ ಹೆಸರಾಯಿತ್ತು. ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ

ಹೃದಯದಲ್ಲಿ ಭಕ್ತಿಭಾವವಿಲ್ಲದೆ [1]ರಿಯ ಮದದಲ್ಲಿಯೇ ಕಾಲ ಕಳೆವವರನ್ನು ಬಸವಣ್ಣ ಟೀಕಿಸುತ್ತಾನಲ್ಲದೆ ಈ [1]ರಿಯಿಂದಲೇ ತರತಮಭಾವ ಹುಟ್ಟಿ ಅದು ಮಾನವನ ನೆಮ್ಮದಿಯನ್ನು ಹಾಳು ಮಾಡುತ್ತದೆ. ತಮ್ಮ ಸಂಪತ್ತಿನಲ್ಲಿಯೇ ಬೀಗುವವರಿಗೆ ಸ್ವರ್ಗ [1]ಗುವುದು ದುರ್ಲಭ; ಅವರು ನರಕಕ್ಕೆ ಭಾಜನರಾಗುತ್ತಾರೆ.

"ಆನೆಯನೇರಿಕೊಂಡು ಹೋದಿರೇ ನೀವು ಕುದುರೆಯನೇರಿಕೊಂಡು ಹೋದಿರೇ

ನೀವು ಕುಂಕುಮ ಕಸ್ತೂರಿಯ ಹೂ[1]ಕೊಂಡು ಹೋದಿರೇ ಅಣ್ಣಾ

ISBN Number : 978-93-342-6884-3

ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ ನಮ್ಮ
ಕೂಡಲ ಸಂಗಮದೇವರನರಿಯದೆ ನರಕಕ್ಕೆ ಭಾಜನರಾದಿರಲ್ಲಾ"

ವಯಕ್ತಿಕ ಸುಖದಲ್ಲಿಯೇ ಕಾಲಕಳೆವ ಶ್ರೀಮಂತ ವರ್ಗದ ಜನ ಸಾಮಾಜಿಕ ಹಿತಕ್ಕೆ ತುಡಿಯಲೆಂಬ ಕಳಕಳಿ ವಚನಕಾರರಲ್ಲಿತ್ತು. ಸಮಾಜಕ್ಕಾಗಿ ದುಡಿಯದಿದ್ದರೆ ಆ ಶ್ರೀಮಂತರ ಬದುಕು ವ್ಯರ್ಥ. ಇವರು ನರಕಕ್ಕೆ ಭಾಜನರಾಗುವಂಥವರು. ಆದ್ದರಿಂದ ತಾವು ಗಳಿಸಿದ ಸಂಪತ್ತನ್ನು ಇತರರಿಗೂ ಹಂಚಿ ಸಮಾಜದಲ್ಲಿ ಸಮಾನತೆ ನೆಲೆಗೊಳ್ಳುವಂತೆ ನೋಡಿಕೊಳ್ಳಬೇಕೆಂಬ ಸಲಹೆಯನ್ನು ವಚನಕಾರರು ನೀಡುತ್ತಾರೆ.

ಶರಣರು ಸಮಾಜವನ್ನು ತೆರೆದ ಕಣ್ಣಿನಿಂದ ನೋಡಿದವರು, ಅವರಿಗೆ ಬಡವ- ಬಲ್ಲಿದರೆಲ್ಲ ಗೊತ್ತು. ಬಡವನ ಬವಣೆಯನ್ನು ಕಂಡು ಅವನ ನೆಮ್ಮದಿಯ ಬದುಕಿಗೆ ಉಪಾಯ ಹುಡುಕಿದವರೂ ಬಲ್ಲಿದನ ಬಲ್ಲಿಡನ ಕೊಬ್ಬಿಗೆ ಪರಿಹಾರ ಕಂಡುಕೊಂಡವರೂ ಶರಣರು. ಅವರು ಸಿರಿತನದ, ಮದದಲ್ಲಿ ಮೆರೆವನ ಕಂಡು ಹೀಗೆ ನುಡಿದಿದ್ದಾರೆ.

’ಹಾವ ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರವ ಹೊಡೆದವರ ನುಡಿಸಲು ಬಾರದಯ್ಯ
ಬಡತನವೆಂಬ ಮಂತ್ರವಾದಿ ಹೋಗಲು ಒಡನೆಯೇ ನುಡಿವರು....

’ಅನ್ಯಾಯದಿಂದ ಹಣ ಸಂಪಾದನೆ ಮಾಡಿದವರು ಎಂದೂ ಸುಖದಿಂದ ಬಾಳಲಾರರು. ಅವರಿಗೆ ತಮ್ಮ ತಪ್ಪಿನ ಅರಿವು ಆ ಕ್ಷಣಕ್ಕೆ ಆಗದಿದ್ದರೂ ಮುಂದೊಂದು ದಿನ ಅವರು ಪ್ರಾಯಶ್ಚಿತ್ತವನ್ನು ಪಡುತ್ತಾರೆ. ಸಿವಂತರ ಧನಸಂಪಾದನೆ ಮತ್ತು ಪ್ರಾಯಶ್ಚಿತ್ತ ಕುರಿತು ಬಸವಣ್ಣನವರು ಹೀಗೆ ಹೇಳುತ್ತಾರೆ.

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ
ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯಾ

ISBN Number : 978-93-342-6884-3

ಬಸವಣ್ಣ ಹೇಳುವ ಈ ಮಾತುಗಳೆಲ್ಲ ್ರೀಮಂತರನ್ನು ಕುರಿತೇ. ¹ರಿವಂತರ ಸಂಪತ್ತು ಯಾವ ಮಾರ್ಗದಿಂದ ಬಂದಿದೆಯೊ ಅವರಿಗೆ ಗೊತ್ತು. ಎಷ್ಟಾದರೂ ಅದು ಬಚ್ಚಲರಾಡಿ.

’ಬಚ್ಚಲ ನೀರು ತಿಳಿದಡೇನು?

ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು’?

ವಾಮಮಾರ್ಗದಿಂದ ಗಳಿ'ದ ಸಂಪತ್ತು ನಿರುಪಯುಕ್ತವಾದುದೆಂದು ಹೇಳಿದ ಬಸವಣ್ಣ ಇನ್ನೊಂದೆಡೆ ’¹ರಿಯಾದರೇನು ²ವಭಕ್ತಿಯಿಲ್ಲದನಕ್ಕ’ ಎಂದು ಸ್ಪಷ್ಟವಾಗಿ ನುಡಿದಿದ್ದಾನೆ. ಇಲ್ಲಿ ’²ವಭಕ್ತಿಯಿಲ್ಲದನಕ್ಕ’ ಎಂಬ ಮಾತು ತುಂಬ ಔಚಿತ್ಯಪೂರ್ಣವಾಗಿದೆ. ²ವಭಕ್ತಿ ಸತ್ಯಶುದ್ಧ ಕಾಯಕದ ಸಂಕೇತ! ಹಾಗೆ ಬಂದ ಸಂಪತ್ತು ಮಾತ್ರ ’²ವ’ನಿಗೆ ಒಂದರ್ಥದಲ್ಲಿ ಸಮಾಜಕ್ಕೆ ಸತ್ಪಾತ್ರಕ್ಕೆ ಸಲ್ಲುತ್ತದೆಂಬುದು ಬಸವಣ್ಣನವರ ಅಭಿಮತ.

’ಸಮಾಜದಲ್ಲಿ ಕುಲಜಾತಿಗಳಿಂದ ಹೆಚ್ಚು ಒಡಕನ್ನುಂಟು ಮಾಡಬಲ್ಲ ಸಾಮರ್ಥ್ಯ ವರ್ಗಗಳಿಗಿದೆ. ¹ರಿವಂತ ವರ್ಗಕ್ಕೆ ಹಣ ಅಧಿಕಾರ ಸೌಲಭ್ಯಗಳಿವೆ. ಚಾಣಾಕ್ಷತನದಿಂದ ಎಲ್ಲ ಕುಲಜಾತಿಗಳಲ್ಲೂ ಈ ವರ್ಗ ತಾನೇ ತಾನಾಗಿ ತನ್ನ ಪ್ರತಿಷ್ಠೆಯನ್ನು ಉಳಿ'ಕೊಳ್ಳಲು ಬಡವರನ್ನು, ಅಸಹಾಯಕರನ್ನು, ಅಜ್ಞಾನಿಗಳನ್ನು, ದೀನರನ್ನು ಶೋಷಣೆಗೊಳಿಸುತ್ತ ಬದುಕುತ್ತದೆ. ಬಹುಶಃ ಈ ಸಮಸ್ಯೆ ನಾಗರಿಕತೆ ಬೆಳೆದಂದಿನಿಂದ ಇಲ್ಲಿಯವರೆಗೆ ಬೆಳೆದು ಕೊಬ್ಬಿನಿಂತಿದೆ. ಇದನ್ನು ಅರಿತುಕೊಂಡು ²ವಶರಣರು ಶೋಷಣೆಗೆ ಮೂಲವಾದ ಈ ’ವರ್ಗ’ ವಿರುದ್ಧ ತಮ್ಮ ಹೋರಾಟವನ್ನು ಕೈಕೊಂಡರು. ಪ್ರಬಲವಾದ ತಮ್ಮ ಟೀಕೆಗಳಿಂದ ಅವರ ಮನ ಪರಿವರ್ತನಕ್ಕೆ ಕಾರಣರಾದರು. ಶರಣರ ಪ್ರಮುಖವಾದ ಕಾಳಜಿಯೆಂದರೆ

ನೆಮ್ಮದಿಯ ಬದುಕು. ಈ ನೆಮ್ಮದಿಯ ಬದುಕಿಗಾಗಿ ಬಡವ ್ರೀಮಂತರ ಮಧ್ಯದಲ್ಲಿ ಉಂಟಾದ ವರ್ಗ ತಾರತಮ್ಯವನ್ನು ಕಾಯಕ ಮತ್ತು ದಾಸೋಹಗಳ ಮೂಲಕ ನಿರ್ಮೂಲಗೊಳಿ¹ ಶರಣರು ಸಮಾನತೆಯ ನೆಲೆಗಟ್ಟಿನ ಮೇಲೆ ಸುಂದರವಾದ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿ'ದರು.

ವರ್ಗ ಸಮಸ್ಯೆ ಎಲ್ಲ ಶರಣರನ್ನೂ ಕಾಡುತ್ತ ಬಂದಿದೆ. ಮನುಷ್ಯ ಸಹಜವಾದ ಅಷ್ಟಮದಗಳಲ್ಲಿ ’ಧನ’ದ ಮದವೂ ಒಂದು. ದುಡ್ಡಿದ್ದವರ ನಡತೆ ಆಚಾರ ವಿಚಾರಗಳು ಸಾಮಾನ್ಯದಂತೆ ಇರುವುದಿಲ್ಲ. ಅವರಲ್ಲಿ ಅಹಂಮಿಕೆ ತನ್ನ ವಿಕಟ ಅಟ್ಟಹಾಸವನ್ನು ಮೆರೆಯುತ್ತದೆ. ¹ರಿತನದಲ್ಲಿ ಮೆರೆವವರನ್ನು ಕಂಡು ಅಂಬಿಗರ ಚೌಡಯ್ಯಹೀಗೆ ಹೇಳುತ್ತಾನೆ.

ದೊಡ್ಡ ದೊಡ್ಡ ಶೆಟ್ಟಿಗಳ ಕಂಡು

ಅಡ್ಡಗಟ್ಟಿ ಹೋಗಿ, ಶರಣಾರ್ಥಿ ಎಂಬ ಎಡ್ಡುಗಳ್ಳತನಕ್ಕೆ ತಮ್ಮ ಮಠಕ್ಕೆ ಬನ್ನಿ ಹಿರಿಯರೇ ಎಂಬರು.

 ISBN Number : 978-93-342-6884-3

ಹೋಗಿ ಶರಣಾರ್ಥಿ ಭಕ್ತನೆಂದೊಡೆ ಕೇಳದ ಹಾಗೆ

ಅಡ್ಡ ಮೋರೆಯನಿಕ್ಕಿಕೊಂಡು ಸುಮ್ಮನೆ ಹೋಗುವ

ಹೆಡ್ಡ ಮೂಳರಿಗೆ ದುಡ್ಡೇ ಪ್ರಾಣವಾಯಿತ್ತು. ದುಡ್ಡಿಸ್ತರ ಕುರುಹನರಿಯದೆ ಮೊಳಪಾದದ ಮೇಲೆ

ಹೊಡಹೊಡಕೊಂಡು ನಗುತಿರ್ದಾತ ನಮ್ಮ ಅಂಬಿಗರ ಚೌಡಯ್ಯ.

ಸಮಾಜದಲ್ಲಿ ್ರೀಮಂತರಿಗೆ ಜನ ವಿಶೇಷ ಮಾನ್ಯತೆ ಕೊಡುತ್ತಾರೆ. ಆದರೆ ಜನರು ಅವರ ಗುಣಸ್ವಭಾವವನ್ನು ಗಮನಿಸುವುದೇ ಇಲ್ಲ. ಕೆಲವು ಮಠದ ಸ್ವಾಮಿಗಳೂ ಕೂಡ ್ರೀಮಂತರನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ಅವರಿಗೆ ತಾವೇ ನಮಸ್ಕರಿಸುತ್ತಾರೆ. ಆದರೆ ಸಾಮಾನ್ಯ ಭಕ್ತನೊಬ್ಬ ಮಠದ ಜಂಗಮನಿಗೆ ನಮಸ್ಕಾರವನ್ನು ಸಲ್ಲಿ'ದರೂ ಮುಖತಿರುವಿ ನೋಡಲಾರದಂತೆ ಸಮ್ಮನೆ ಹೋಗುವರು. ಇಂಥವರಿಗೆ ದುಡ್ಡೇ ಪ್ರಾಣ. ್ರೀಮಂತ ಮನುಷ್ಯನ ಶ್ರೀಮಂತಿಕೆಗೆ ಜನ ಬೆಲೆ ಕೊಡುವರು. ಅವನ ಗುಣಕ್ಕೆ ಬೆಲೆ ಕೊಡದ ಅಜ್ಞಾನಿಗಳನ್ನು ಕಂಡು ಅಂಬಿಗರ ಚೌಡಯ್ಯ ನಗುತ್ತಾನೆ. ಅವರ ಅಜ್ಞಾನ ಕಂಡು ಹಳಿಯುತ್ತಾನೆ.

ಮನುಷ್ಯ ಎಷ್ಟು ದುಡಿದು ಕೂಡಿಹಾಕಿದರೂ ಅವನಿಗೆ ಸಮಾಧಾನವೆಂಬುದಿಲ್ಲ. ಧನ ಸಂಪಾದನೆಯ ಮೋಹ ನಂದುವಂತಹದಲ್ಲ. ಅದು ಉರಿಯುವ ಬೆಂಕಿ ಇದ್ದಂತೆ. ಅದಕ್ಕೆ ಎಷ್ಟು ವಸ್ತುಗಳನ್ನು ಎಸೆಯುತ್ತೀರೋ ಅಷ್ಟನ್ನು ದಯಿಸುತ್ತದೆ. ಮತ್ತು ಇನ್ನೂ ದಹಿಸಲು ಕಾತರಿಸುತ್ತದೆ. ಆದ್ದರಿಂದ ಮನುಷ್ಯ ತನ್ನ ಬಯಕೆಗಳಿಗೆ ಕಡಿವಾಣ ಹಾಕಬೇಕು. ಅಂದಾಗ ಮಾತ್ರ ಆತ ನೆಮ್ಮದಿಯನ್ನು ಅನುಭವಿಸಬಲ್ಲ. ಶರಣರು ತಮ್ಮ ಬಯಕೆಗಳನ್ನು ಹರಿಬಿಟ್ಟಿರಲಿಲ್ಲ. ಅವರು ಇದ್ದುದರಲ್ಲಿಯೇ ಸಂತೃಪ್ತಿಯಿಂದ ಬಾಳಿದವರು. ಮೋಳಿಗೆಯ ಮಾರಯ್ಯನೆಂಬ ವಚನಕಾರ ಆಸೆಗಳಿಗೆ ಮಿತಿ ಹಾಕಿ ಸಂತೃಪ್ತಿಯಿಂದ ಬದುಕುವುದು ಹೇಗೆ ಎಂಬುದನ್ನು ತಿಳಿಸುತ್ತಾನೆ.

ಆನೆ ಕುದುರೆ ಭಂಡಾರವಿರ್ದಡೇನೊ? ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು,

ಮಲಗುವುದರ್ಧ ಮಂಚ,

ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ,

ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ?

ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.

ಸಾವೆಮಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ.

ISBN Number : 978-93-342-6884-3

ಮನುಷ್ಯನ ಮನಸ್ಸಿಗೆ ನೆಮ್ಮದಿಯೆನ್ನುವುದಿಲ್ಲ. ಆನೆ ಕುದುರೆ ಭಂಡಾರವಿದ್ದರೇನು ನಿತ್ಯ ಅದು ತೃಪ್ತಿಯನ್ನು ಕೊಡಬಲ್ಲುದೆ? ಅವನಿಗೆ ಬೇಕಾದುದು ಪಡಿ ಅಕ್ಕಿ ಒಂದು ಆಕಳಿನ ಹಾಲು, ಮಲಗುವುದಕ್ಕೆ ಅರ್ಧಮಂಚ ಇಷ್ಟಾದರೆ ಸಾಕು. ಉಳಿದುದನ್ನೆಲ್ಲ ಮನುಷ್ಯ ವ್ಯರ್ಥವಾಗಿ ಕೂಡಿಹಾಕುತ್ತಾನೆ.

ಹುರುಳಿಲ್ಲದ ಸಂಸಾರವನ್ನು ನಚ್ಚಿ ಮನುಷ್ಯ ಸುಮ್ಮ ಸುಮ್ಮನೆ ಬದುಕನ್ನು ಹಾಳುಮಾಡಿಕೊಳ್ಳುವನು. ತನ್ನ ಜೊತೆಗೆ ಬರುವ ವಸ್ತು ಯಾವುದೂ ಇಲ್ಲ. ಆದರೂ ಆ ವಸ್ತುವಿಗಾಗಿ ಬಡಿದಾಡುತ್ತಾನೆ. ತನ್ನ ಮಿಕ್ಕಿದ ಆದಾಯವನ್ನು ಸಮಾಜಕ್ಕೆ ಸಲ್ಲಿಸಿ ಸಮಾನತೆ ನೆಲೆಗಟ್ಟಿನ ಮೇಲೆ ಮನುಷ್ಯ ಬದುಕಬೇಕೆಂಬುದನ್ನು ಮೋಳಿಗೆಯ ಮಾರಯ್ಯ ತಿಳಿಸುತ್ತಾನೆ. ಒಡಲು ಮಣ್ಣಿನಲ್ಲಿ ಬೆರೆತು ಹೋಗುವುದು, ಒಡವೆಗಳು ಅವಾದರೇನು? ಶಾಶ್ವತವೆ? ಮಡದಿ ಮತ್ತಾರದೊ ಸಂಗದಲ್ಲಿ ಕಾಲಕಳೆವಂತೆ ಪ್ರಾಣ ಪ್ರಾಣವಾಯುವಿನ ಸಂಗದಲ್ಲಿ ಬೆರೆತು ಬಿಡುವುದು. ಸಾವಿನ ಸಮಯಕ್ಕೆ ಮನುಷ್ಯನಿಗೆ ಯಾರೂ ಬಾರರು. ಆದ್ದರಿಂದ ಮಡದಿ ಮಕ್ಕಳಿಗೆಂದು ಕೂಡಿಡಬಾರದು. ಇದ್ದ ಸಂಪತ್ತನ್ನು ಸಮಾಜಕ್ಕೆ ಸಮರ್ಪಣ ಮಾಡಬೇಕೆಂದು ಮೋಳಿಗೆಯ ಮಾರಯ್ಯನವರು ತಮ್ಮ ವಚನದಲ್ಲಿ ಸ್ಪಷ್ಟಪಡಿ'ದ್ದಾರಲ್ಲದೆ 'ರಿಯೆಂಬುದೊಂದು ಸಂತೆಯ ಮಂದಿಯಂತೆ; ಅದು ಸ್ಥಿರವಾಗಿ ಇರಲಾರದು ಎಂದು ಹೇಳಿ ಇದ್ದುದರಲ್ಲಿಯೇ ಸಂತುಷ್ಟರಾಗಿ ಬದುಕುವ ವಿಧಾನವನ್ನು ತಿಳಿ'ಕೊಡುತ್ತಾರೆ. ಬಡವ ಬಲ್ಲಿದರಲ್ಲಿ ಭೇದಭಾವ ಮೂಡದಂತಹ ಸಮಾನತೆ ನೆಲೆಗಟ್ಟಿನ ಮೇಲೆ ಸಮಾಜವೊಂದರ ಹುಟ್ಟುಹಾಕುವ ಕನಸನ್ನು ಶರಣರು ಕಾಣುತ್ತಾರೆ.

ಅಡಿಟಿಪ್ಪಣಿಗಳು:-

1) Modern polital thought - I.P. Suda. Page-256. 7th edn. 1972-73.

2) ಬಸವಣ್ಣನವರ ವಚನ ಸಂಪುಟ-1. ಪುಟ-100, ವಚನ-414. ಸಂ.ಡಾ.ಎಂ.ಎಂ.ಕಲಬುರ್ಗಿ. ಕ.ಸಂ.ಇ. ಸಂ-1. 1993.

3) ಬಸವಣ್ಣನವರ ವಚನ ಸಂಪುಟ-1. ಪುಟ-100, ವಚನ-413. ಸಂ.ಡಾ.ಎಂ.ಎಂ.ಕಲಬುರ್ಗಿ. 1993.

4) ಬಸವಣ್ಣನವರ ವಚನ ಸಂಪುಟ-1. ಪುಟ-57, ವಚನ-226.ಡಾ. ಎಂ.ಎಂ.ಕಲಬುರ್ಗಿ.

5) ಬಸವಣ್ಣನವರ ವಚನ ಸಂಪುಟ-1. ಪುಟ-160, ವಚನ-638. ಡಾ. ಎಂ.ಎಂ.ಕಲಬುರ್ಗಿ. ಕ.ಸಂ.ಇ.

6) ಬಸವಣ್ಣನವರ ವಚನ ಸಂಪುಟ-1. ಪುಟ-35, ವಚನ-132.

7) ಬಸವಣ್ಣನವರ ವಚನ ಸಂಪುಟ-1. ಎಂ.ಎಂ.ಕಲಬುರ್ಗಿ. ಪುಟ-56, ವಚನ-223. ಕ.ಸಂ.ಇ.ಬೆಂ.

 ISBN Number : 978-93-342-6884-3

8) ಬಸವಣ್ಣನವರ ವಚನಗಳು. ಸಂ-1. ಡಾ. ಎಂ.ಎಂ.ಕಲಬುರ್ಗಿ. ಪುಟ-33. ವಚನ-122.

9) ಸಮಗ್ರ ವಚನ ಸಂಪುಟ-6. ಸಂಕೀರ್ಣ ವ. ಸಂ. ಕಾ. ಪುಟ-56. ವಚನ-169.

10) ಸಮಗ್ರ ವಚನ ಸಂಪುಟ-6. ಸಂಕೀರ್ಣ ಸಂ.33. ಪುಟ-524. ವಚನ-1509.

ಸಾಹಿತ್ಯದಿಂದಲೇ ಸಮಾನತೆಯನ್ನು ಸಾರಿದ ಸಂಚಿಹೊನ್ನಮ್ಮ

ಮಲ್ಲಿಕಾರ್ಜುನ ಎಸ್.ಪೂಜಾರಿ

ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ

ಮೊಬೈಲ್: ೭೩೫೩೨೩೮೬೭೨

ನಮ್ಮ ಕನ್ನಡ ನಾಡು ಹಲವಾರು ಧರ್ಮ, ಜಾತಿ, ಜನಾಂಗ ಮತ್ತು ಸಂಸ್ಕೃತಿಗಳ ನೆಲೆಬೀಡಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಹಲವಾರು ರಾಜಮನೆತನಗಳು ಆಳಿ, ಬಾಳಿ ಬದುಕಿರುವುದು ಹಾಗೂ ಅವರ ಕೊಡುಗೆಗಳು ನೀಡಿರುವುದು ನಮ್ಮ ಇತಿಹಾಸದ ಸತ್ಯಪುಟಗಳಾಗಿವೆ. ಅವೆಲ್ಲ ರಾಜಮನೆತನಗಳು ಅಲ್ಲಿನ ಪ್ರಸಿದ್ಧ ರಾಜರು ತಮ್ಮ ಶೌರ್ಯ, ಸಾಹಸ, ವಿದ್ಯೆ- ಕಲೆಗಳಿಂದ ಸಾಮ್ರಾಜ್ಯ ವಿಸ್ತರಣೆಯ ಜೊತೆಗೆ ತಮ್ಮ ಸಂಸ್ಕೃತಿ ಬೆಳೆಸುವುದು, ಅಂದಿನ ಸಮಕಾಲದ ಜನರುಗಳ ಜ್ಞಾನಕ್ಕೆ ಸಮಾನವಾಗಿ ಸಾಹಿತ್ಯವನ್ನು ಕೂಡ ಬೆಳೆಸಿರುವುದನ್ನು ಕಾಣುತ್ತೇವೆ. ಆ ಮನೆತನಗಳಲ್ಲಿ ಒಂದಾದ ಮೈಸೂರಿನ ಒಡೆಯರು ಕೂಡ ಒಬ್ಬರು. ಮೈಸೂರು ಮನೆತನದ ಸುಪ್ರಸಿದ್ಧ ಅರಸರಲ್ಲಿ ಒಬ್ಬರಾದ ಚಿಕ್ಕದೇವರಾಯ ಒಡೆಯರು ಸ್ವತಃ ಕಲಿಯೂ ಕವಿಯೂ ಆಗಿದ್ದರು. ಸಮಾಜದಲ್ಲಿ ಸಮಾನತೆಯನ್ನು ಕಾಣುತ್ತಾ, ಗಂಡು-ಹೆಣ್ಣು ಎಂಬ ಬೇದ-ಭಾವನ್ನರಿಯದ ವಿಶಾಲ ಮನಸ್ಸುಳ್ಳ ಒಡೆಯರಾಗಿದ್ದರು. ಇವರ ಆಸ್ಥಾನದಲ್ಲಿ ಸುಪ್ರಸಿದ್ಧ ಕವಿಯತ್ರಿಯಾದ ಸಂಚಿಹೊನ್ನಮ್ಮಳನ್ನು ಆಶ್ರಯ ನೀಡಿ ಬೆಳೆಸಿದ್ದರು.

ಸಂಚಿಹೊನ್ನಮ್ಮಳ ಜೀವನ: (೧೬೭೨)

ಮೈಸೂರು ಜಿಲ್ಲೆಯ ಚಾಮರಾಜನಗರ ಯಳಂದೂರು ಇವರ ಜನ್ಮಸ್ಥಳವಾಗಿದ್ದು, ಇವಳು ೧೬೭೨ನೇ ಸಾಲಿನಲ್ಲಿ ಜನಿಸಿರುವುದು ಎಂಬ ಪ್ರತೀತಿ ಇದೆ. ಇವರು ಚಿಕ್ಕದೇವರಾಯ ಒಡೆಯರ ಅತ್ಯಂತ ಪ್ರೀತಿಯ ಮಹಾರಾಣಿಯಾದ ದೇವರಾಜಮಣ್ಣಿಯವರ ಬಾಲ್ಯದ ಸ್ನೇಹಿತೆಯಾಗಿದ್ದಳು. ಇದೇ ಕಾರಣಕ್ಕಾಗಿ ಹೊನ್ನಮ್ಮಳನ್ನು ರಾಣಿಯು ತನ್ನ ಜೊತೆಗೆ ಅರಮನೆಗೆ ಕರೆದುಕೊಂಡು ಹೋದಳು. ಹೊನ್ನಮ್ಮಳು ಬಾಲ್ಯದಿಂದಲೇ ಬಹಳ ಸೌಂದರ್ಯ ರೂಪಿಣಿ, ಮಾತಿನಲ್ಲಿ ತೀಕ್ಷ್ಣತೆಯಾಗಿರುವುದರಿಂದ ರಾಣಿಯ ಜೊತೆಗಿರುವ ಕಾರ್ಯವನ್ನು ನೀಡಿದ್ದರು. ರಾಣಿಯ ಉಪಚಾರಗೋಸ್ಕರ ಇವಳನ್ನು ಸಂಚೆಯ ಕಾರ್ಯ (ಅಂದರೆ ಎಲೆ ಅಡಿಕೆ ಇರುವ ಚೀಲ) ನೀಡಿದ್ದರು. ಅಂದಿನಿಂದ ಹೊನ್ನಮ್ಮಳನ್ನು ಸಂಚಿಯ ಹೊನ್ನಮ್ಮ ಎಂದು ಕರೆಯಲು ಆರಂಭಿಸಿದರು.

ರಾಜಾ-ರಾಣಿಯರ ಪ್ರತಿಕಾಲಕ್ಕೂ ಸಮೀಪವೇ ಇರುವುದರಿಂದ ಆಸ್ಥಾನದ ಮಂತ್ರಿಗಳ ಹಾಗೂ ಅತ್ಯಂತ ಹಿರಿಯ ಸಾಹಿತಿಗಳ ಒಡನಾಟ ಹಾಗೂ ಚರ್ಚೆಯ ವಿಷಯಗಳನ್ನು ಗ್ರಹಿಸಲು ಸಾಧ್ಯವಾಯಿತು. ಹೀಗಾಗಿ ಇವಳು ಸಾಹಿತ್ಯದ ಕಡೆಗೆ ಹೆಚ್ಚು ವಾಲುವಂತೆ ಮಾಡಿತು. ಇವಳ ತೀಕ್ಷ್ಣ ಬುದ್ಧಿಯನ್ನು ಕಂಡು ಚಿಕ್ಕದೇವರಾಯರು

ISBN Number : 978-93-342-6884-3

ಇವಳನ್ನು ಓದಲು ಬರೆಯಲು ಪ್ರೋತ್ಸಾಹಿಸಿದ್ದರು. ಇವಳು ಸಿಂಗಾರಾರ್ಯ ಮತ್ತು ತಿರುಮಲಾರ್ಯ ಎಂಬ ಗುರುಗಳಲ್ಲಿ ವಿದ್ಯೆ ಕಲಿತರು. ಸಿಂಗಾರಾರ್ಯರು ಬರೆದ 'ಮಿತ್ರ ವಿಂದ ಗೋವಿಂದ' ಎಂಬ ಪ್ರತಿಯು ಸುಪ್ರಸಿದ್ಧವಾಗಿದ್ದು, ಈ ಕೃತಿಯು ಶ್ರೀಕೃಷ್ಣ ಮತ್ತು ಆಸ್ಥಾನದ ರಾಣಿಯರ ಚರಿತ್ರೆಯನ್ನು ಹೇಳುವ ಕೃತಿಯಾಗಿದೆ. ಈ ಮಹಾನ ಪಂಡಿತರ ಆಶ್ರಯದಲ್ಲಿ ವಿದ್ಯೆ ಪಡೆದ ಹೊನ್ನಮ್ಮಳನ್ನು ಕಂಡು ಅಂದಿನ ಪ್ರಸಿದ್ಧ ಮಂತ್ರಿಯಾದ ಆಳಸಿಂಗಾಚಾರ್ಯ ಎಂಬುವವರು 'ಸರಸ ಸಾಹಿತ್ಯದ ವರದೇವತೆ' ಎಂಬ ಬಿರುದನ್ನು ನೀಡಿದರು. ಇವಳು ಬರೆದ ಕೃತಿ 'ಹದಿಬದೆಯ ಧರ್ಮ' ಎಂಬುದು.

'ಹದಿಬದೆಯ ಧರ್ಮ':

ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನದ ಶರಣೆ ಅಕ್ಕಮಹಾದೇವಿಯನ್ನು ನೆನಪಿಸಿದಂತೆ ಇನ್ನುಳಿದ ಮಹಾನ್ ಕವಿಯತ್ರಿಯರ ಸಾಲಿನಲ್ಲಿ ಮೇಲ್ವರ್ಗಕ್ಕೆ ಕಾಣಸಿಗುವುದು ಸುಪ್ರಸಿದ್ಧ ಹೆಸರು ನಮ್ಮ ಸಂಚಿಯ ಹೊನ್ನಮ್ಮನವರದು. ಕಾರಣ ಇವಳು ಬರೆದ 'ಹದಿಬದೆಯ ಧರ್ಮ' ಎಂಬ ಕೃತಿ. ಅಕ್ಕಮಹಾದೇವಿಯು ೧೨ನೇ ಶತಮಾನದಲ್ಲಿ ತನ್ನ ವಚನಗಳಲ್ಲಿ ಸಮಾನತೆಯನ್ನು ಸಾರಿದ ಹಾಗೆ ಹೊನ್ನಮ್ಮಳು ಕೂಡ ಈ ಕೃತಿಯಲ್ಲಿ ಸಮಾನತೆಯಲ್ಲಿ ಸಾರಿದ್ದಾಳೆ. ಈ ಕೃತಿಯು ೯ ಸಂದಿಗಳು, ೪೭೭ ಪದ್ಯಗಳನ್ನು ಒಳಗೊಂಡ ಸಾಂಗತ್ಯ ರೂಪದ ಕೃತಿಯಾಗಿದೆ.

ಈ ಕೃತಿಯು ಹೆಣ್ಣಿನ ಜನ್ಮಕ್ಕೆ ಕಣ್ಣಾಗಿದೆ. ಹೆಣ್ಣು ತನ್ನ ಕುಟುಂಬವನ್ನು ನಡೆಸುವ ತನ್ನ ಪಾತ್ರದ ಬಗ್ಗೆ ಕೂಲಂಕೂಷವಾಗಿ ಹೇಳುತ್ತದೆ. ಒಂದು ಹೆಣ್ಣು ಸಮಾಜದಲ್ಲಿ ಯಾವ ಯಾವ ಪಾತ್ರ ನಿರ್ವಹಿಸುತ್ತಾಳೆ ಎಂಬುದು ತಾಯಿ, ಅಕ್ಕ, ತಂಗಿ, ಅತ್ತೆ, ಸೊಸೆ, ಅತ್ತಿಗೆ, ನಾದಿನಿ, ಮುಖ್ಯವಾಗಿ ಹೆಂಡತಿ ಹೀಗೆ ಹಲವಾರು ಪಾತ್ರಗಳನ್ನು ನಿಭಾಯಿಸುತ್ತಾಳೆ. ಈ ಪಾತ್ರಗಳನ್ನು ಹೇಗೆ ನಿಭಾಯಿಸಬೇಕು, ಸಮಾಜದ ಜೊತೆ ಹೇಗೆ ನಡೆದುಕೊಳ್ಳಬೇಕು, ಅಸಮಾನತೆಯನ್ನು ಹೇಗೆ ಎದುರಿಸಬೇಕು ಎಂಬುದು ಈ ಕೃತಿ ತಿಳಿಸುತ್ತದೆ. ಸಮಾಜದಲ್ಲಿ ಹೆಣ್ಣನ್ನು ಕೀಳಾಗಿ ಕಾಣುವ ಜನರಿಗೆ ತನ್ನ ಕೃತಿಯ ಮೂಲಕ ಹೊನ್ನಮ್ಮಳು ಈ ರೀತಿಯಾಗಿ ಪ್ರಶ್ನಿಸಿದ್ದಾಳೆ.

'ಪೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ನಮ್ಮನ್ನೆಲ್ಲ ಪೊರೆದವಳು
ಪೆಣ್ಣು ಪೆಣ್ಣೆಂದು ಬೀಳುಗಳೆವರೇಕೆ?
ಕಣ್ಣು ಕಾಣದ ಗಾವಿಲ್ಲರು
ಕುವರನಾದೊಡೆ ಬಂದ ಗುಣವೆನ್ನದರಿಂದ
ಕುವರಿಯಾದೊಡೆ ಕುಂದೇನು?'

ISBN Number : 978-93-342-6884-3

ಹೊನ್ನಮ್ಮಳು ಈ ಸಮಾಜಕ್ಕೆ ಕೇಳುವ ಪ್ರಶ್ನೆಗಳು ನಿಮ್ಮನ್ನು ಹಡೆದವಳು ಹೆಣ್ಣಲ್ಲವೇ, ನಿಮ್ಮನ್ನು ಪಡೆದವಳು ಹೆಣ್ಣಲ್ಲವೇ. ಹೆಣ್ಣನ್ನು ಕೀಳಾಗಿ ಕಾಣುವ ಧಡ್ಡರೇ ಮೂರ್ಖರೆ ಹೆಣ್ಣು-ಗಂಡು ಎಂಬ ಭೇದ-ಭಾವವೇಕೆ? ಎಂದು ಕೇಳುವರು. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರ ಮಾತಿಗೆ ಮನ್ನಣೆ ನೀಡುವುದು ಅವರ ಆಡಿದ ಮಾತೇ ಮುತ್ತು ಅವರ ಹೇಳುವ ಮಾತೇ ಅಂತಿಮ ನಿರ್ಧಾರ. ಹೀಗೆ ಎಲ್ಲದಕ್ಕೂ ಪುರುಷರೇ ಮೇಲುಗೈ, ಹೆಣ್ಣನ್ನು ಕೇವಲ ೪ ಗೋಡೆಗಳ ಮಧ್ಯೆ ಇರುವ ಯಂತ್ರದಂತೆ ಕೆಲಸ ಮಾಡುವುದು ಹೇಳಿದ ಮಾತನ್ನು ವೇದವಾಕ್ಯವಾಗಿ ಪಾಲಿಸುವುದು ಈ ರೀತಿಯಾದ ಸಮಾಜವನ್ನು ಕುರಿತು ಹೊನ್ನಮ್ಮಳು ಈ ಕೆಳಗಿನಂತೆ ಹೇಳಿರುತ್ತಾರೆ.

'ಕುವರನಾದೊಡೆ ಬಂದ ಗೊಡವೇನು?
ಅದರಿಂದ ಕುವರಿಯಾದೊಡೆ ಕುಂದೇನು?'
ಇವರೀರ್ವರಗೊಡೆ ಹೇಗೆ ಪಡೆದವರಿಂದ
ಸಂಭವ ನಿಪ್ರದು ಇಹಪರ ಸುಖ'

ಗಂಡು ಮಗು ಜನನದಿಂದ ಸಿಗುವ ಸಂತೋಷ, ಖುಷಿಯು ಹೆಣ್ಣುಮಗುವಿನ ಜನನದಿಂದ ದುಃಖಿಸುವ ಜನರು, ಇವರಿಬ್ಬರಿಂದ ಆಗುವ ಲಾಭ-ನಷ್ಟ ಚಿಂತಿಸುವಿರಾ? ಎಂದು ಪ್ರಶ್ನಿಸುತ್ತಾ ಸಮಾಜದಲ್ಲಿ ಸಮಾನತೆಯನ್ನು ಕಾಣಲು ತನ್ನ ಸಾಹಿತ್ಯದ ಮುಖೇನ ಪ್ರಯತ್ನಿಸಿದರು.

ಹೆಣ್ಣಿನ ಬಗ್ಗೆ ಅತೀ ಹೆಮ್ಮೆಯ ವಿಷಯ ಮಾತುಗಳನ್ನಾಡಿದ ಹೊನ್ನಮ್ಮನವರು ಹೆಣ್ಣುಮಗುವಿನಿಂದ ಸಮಾಜದಲ್ಲಿ ಎಷ್ಟು ಇತಿಹಾಸ ಪುರುಷರ ಹೆಸರುಗಳು ಏಳಿಗೆಗೆ ಬಂದಿವೆ ಎಂಬುದು ಲೆಕ್ಕಕ್ಕೆ ಇಲ್ಲ. ಅದರಲ್ಲಿ ಕೆಲವು ಪ್ರಸಿದ್ಧ ಹೆಸರುಗಳನ್ನು ಮತ್ತೊಂದು ಕಾವ್ಯದಿಂದ ತಿಳಿಹೇಳಿದ್ದಾರೆ.

'ಪೆಣ್ಣಿಂದ ಪರಮೆಗೊಂಡನು ಹಿಮವಂತನು
ಪೆಣ್ಣಿಂದ ಭೃಂಗು ಬೆಚ್ಚಿದನು
ಪೆಣ್ಣಿಂದ ಜನಕ ರಾಜನು ಜಸ ಪಡೆದನು
ಪೆಣ್ಣಿನಿಂದ ಜಸ ಲೇಕಪೆಂಗು'

ಎಂದು ಹೇಳುತ್ತಾ, ಹೆಣ್ಣಿನ ಹೆಸರಿನಿಂದ ಎಷ್ಟು ಜನ ತಮ್ಮ ಹೆಸರುಗಳನ್ನು ಬೆಳಕಿಗೆ ತಂದಿದ್ದಾರೆ ಎಂಬುದು ಇತಿಹಾಸ ಪುರುಷನಾದ ಹಿಮವಂತನು. ಇವನು ಪಾರ್ವತಿಯ ತಂದೆ. ಪಾರ್ವತಿಯಿಂದಲೇ ಹಿಮವಂತನ ಹೆಸರು ಬೆಳಕಿಗೆ ಬಂದಿದ್ದನ್ನು ಕಾಣುತ್ತೇವೆ. ಜನರು ಉನ್ನತಿಯನ್ನು ಕಾಣುವ ಅತೀ ಕರುಣೆಯಿಂದ ಪೂಜಿಸುವ ಲಕ್ಷ್ಮೀದೇವಿಯ ತಂದೆ ಭೃಂಗುಮಹಾರಾಜನು ಕೂಡ ತನ್ನ ಮಗಳ ಸಾಹಸದಿಂದಲೇ

ISBN Number : 978-93-342-6884-3

ಹೆಸರುವಾಸಿಯಾದನು. ಸೀತೆಯ ತಂದೆ ಜನಕ ಮಹಾರಾಜನು ಕೂಡ ತನ್ನ ಮಗಳಿಂದಲೇ ಸುಪ್ರಸಿದ್ಧನಾದನು. ಹೀಗೆ ಇತಿಹಾಸ ಪುರುಷರೆಲ್ಲ ತನ್ನ ಹೆಣ್ಣುಮಕ್ಕಳಿಂದಲೇ ಹೆಸರುವಾಸಿಯಾಗಿದ್ದಾರೆ ಎಂದು ಸಮಾಜಕ್ಕೆ ತಿಳಿಹೇಳುವ ಕೆಲಸ ಮಾಡಿರುತ್ತಾರೆ.

ಒಬ್ಬ ಮಹಾನ್ ಪುರುಷನ ಹಿಂದೆ ಒಬ್ಬ ಮಹಾನ್ ಸ್ತ್ರೀಯಳ ಕೈ ಇರುವುದು ಅಥವಾ ಸಹಾಯ ಇರುವುದು ಸಹಕಾರ ಇರುವುದು ಕಾಣುತ್ತೇವೆ. ಆದರೆ ಸಮಾಜಕ್ಕೆ ಹೆಣ್ಣು ಒಂದು ಕಂಠಕ ಎಂದು ತಿಳಿಯುವ ಮೂರ್ಖರು ಹೆಣ್ಣಿನ ಬಗ್ಗೆ ಅತೀ ಕರುಣೆ ಮಮತೆ ವಿನಯದಿಂದ ವರ್ತಿಸಲು ಇವಳು ತನ್ನ ಕೃತಿಯಲ್ಲಿ ಅನೇಕ ಪದ್ಯಭಾಗಗಳಲ್ಲಿ ತಿಳಿಹೇಳಿರುತ್ತಾಳೆ.

ಇವಳು ತನ್ನ ಕೃತಿಯಲ್ಲಿ ಸಾಲು ಸಾಲು ಸಮಾನತೆಯನ್ನು ಮೇಲು ಕೀಳು ಗಂಡು ಹೆಣ್ಣು ಎಂಬ ಭೇದ ಭಾವ ಹೋಗಲಾಡಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಒಬ್ಬ ಹೆಣ್ಣು ಸಮಾಜದ ಬದಲಾವಣೆಗೆ ಪ್ರಯತ್ನಿಸಿರುವುದು ಅತೀ ಪ್ರಾಯಸದ ವಿಷಯವಾಗಿರುತ್ತದೆ. ೧೨ನೇ ಶತಮಾನದ ಅಕ್ಕಮಹಾದೇವಿಯನ್ನು ಬಿಟ್ಟರೆ, ನಮಗೆ ಸಿಗುವುದು ಸಾಹಿತ್ಯದಲ್ಲಿ ಮಾಣಿಕ್ಯದ ಮುತ್ತಿನಂತೆ ಸಂಚಿ ಹೊನ್ನಮ್ಮನವರು ಎಂಬುದನ್ನು ಕಾಣುತ್ತೇವೆ.

ಪರಾಮರ್ಶನ ಗ್ರಂಥಗಳು:

೧) ಕರ್ನಾಟಕ ಕವಿಚರಿತೆ- ಸಂಪುಟ ೧,೨,೩

೨) ಕನ್ನಡ ಸಾಹಿತ್ಯಚರಿತೆ- ರಂ. ಶ್ರೀ. ಮುಗಳಿ

೩) ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಮೀಮಾಂಸೆ- ಸಿ.ಬಿ. ಹೊನ್ನಯ್ಯ

೪) ಕನ್ನಡ ಸಾಹಿತ್ಯ ಕೋಶ- ರಾಜಪ್ಪ ದಳವಾಯಿ

ISBN Number : 978-93-342-6884-3

ಜನಪದ ಸಾಹಿತ್ಯದಲ್ಲಿ ಮಹಿಳೆ

ಡಾ. ಮಂಜುಳಾಕ್ಷಿ ಎಲ್.

ಸಹಾಯಕ ಪ್ರಾದ್ಯಾಪಕಿ

ಭಾಷಾವಿಜ್ಞಾನ ವಿಭಾಗ,

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಕಲಬುರಗಿ-585367

ಸಾಹಿತ್ಯದ ತಾಯಿ ಬೇರು ಜನಪದ ಸಾಹಿತ್ಯ . ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯ ಪುರಾತನವಾದದು. ಅಕ್ಷರ ಲೋಕದಿಂದ ಅಪರಿಚಿತವಾಗಿದ್ದರೂ ತಮ್ಮ ಸೃಜನಶೀಲ ಸೃಷ್ಟಿಯಿಂದ ಅತ್ಯನ್ನತವಾದ ಸಾಹಿತ್ಯ ಪರಂಪರೆಯನ್ನು ಕಟ್ಟಿದವರು ಜನಪದರು. ಈ ಸಾಹಿತ್ಯದಲ್ಲಿ ತತ್ವಜ್ಞಾನವಿದೆ. ಬದುಕಿನ ಅವಿನಾಭಾವ ಸಂಬಂಧವಿದೆ. ಧರ್ಮಿಕ ಆಯಾಮವಿದೆ. ನಾಡಿನ ಪರಂಪರಾನುಗತ ಸಂಸ್ಕೃತಿಯ ಸತ್ವವೆಲ್ಲವನ್ನು ತುಂಬಿಕೊಂಡಿರುವ ಈ ಸಾಹಿತ್ಯವು ಸಾವಿರಾರು ವರ್ಷಗಳಿಂದ ತ್ರಿಪದಿಗಳ ಮೂಲಕ ಪ್ರಖ್ಯಾತಿ ಹೊಂದಿದ್ದೂ ಇಂದು ಇದು ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. ಅಕ್ಷರದ ಅರಿವು ಆರಂಭವಾಗುವುದಕ್ಕೂ ಮುನ್ನ ಹುಟ್ಟಿಕೊಂಡ ಈ ಸಾಹಿತ್ಯ ಯಾರನ್ನು ಮೆಚ್ಚಿಸಲಿಕ್ಕಾಗಿ ಹುಟ್ಟಿದ್ದಲ್ಲ. ಜನಪದರು ತಾವು ಅನುಭವಿಸಿದ ನೋವು-ನಲಿವು, ದುಃಖ-ದುಮ್ಮಾನ, ಆಶೆ-ನಿರಾಶೆಗಳನ್ನು ಹೃದಯದಿಂದ ಹಾಡಿದರು, ಹೇಳಿದರು. ಅದು ಕಿವಿಯಿಂದ ಕಿವಿಗೆ ಹಾಡಾಗಿ, ಗೀತೆ, ಕಥೆ, ನೀತಿ, ಲಾವಣಿ, ಒಗಟು, ನಾಟಕ, ಚಿತ್ರ, ಶಿಲ್ಪ, ನಂಬಿಕೆ, ಆಚಾರ-ವಿಚಾರ ಸಂಪ್ರದಾಯ ಈ ರೀತಿ ವ್ಯಾಪಕವಾಗಿದೆ. ಇವರಲ್ಲಿ ಗ್ರಾಮೀಣ ಜನರ ಬದುಕು, ಜೀವನ, ಸಂಸ್ಕೃತಿ, ನಿಸರ್ಗ ಇವೆಲ್ಲವನ್ನು ಒಳಗೊಂಡಿದೆ.

ISBN Number : 978-93-342-6884-3

ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ 20ನೆಯ ಶತಮಾನದವರೆಗೂ ಮಹಿಳಾ ಸಾಹಿತ್ಯವೆಂಬ ಹೆಸರಿನಲ್ಲಿ ಗುರುತಿಸಬಹುದಾದಂಥದ್ದು ಹೆಚ್ಚು ಕಂಡುಬರುವುದಿಲ್ಲ. ಇದಕ್ಕೆ ಕಾರಣ ಸ್ತ್ರೀಯರು ಶ್ಕ್ಷಣದಿಂದ ವಂಚಿತರಾದದ್ದು, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ, ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳು ಸೃಷ್ಟಿಯಾಗದೇ ಹೋದದ್ದು, ಸ್ವಾತಂತ್ರ್ಯವಿರದ ಅವಲಂಬನೆಯ ಜೀವನವೇ ಪ್ರಧಾನವಾದದ್ದು - ಇಂಥ ಅನೇಕ ಕಾರಣಗಳಿಂದಾಗಿ ಮಹಿಳೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಬಹುಕಾಲದವರೆಗೆ ಅನನ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳಿರಬಹುದು. ಗುರುತಿಸುವಂಥ ಸೃಜನಶೀಲತೆ ನಮಗೆ ಕಾಣುವುದು 20ನೆಯ ಶತಮಾನದಲ್ಲಿಯೇ ಎನ್ನಬಹುದು. ಪ್ರಸ್ತುತ ಲೇಖನವು ಜನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಕಾವ್ಯ, ತ್ರಿಪದಿ, ಗಾದೆ ಒಗಟು, ಲಾವಣಿ ಇವುಗಳಲ್ಲಿ ಮಹಿಳೆಯು ಚಿತ್ರಿತಗೊಂಡಿರುವುದನ್ನು ಕೆಲವು ಪ್ರಕಾರವನ್ನು ಮಾತ್ರ ಕೇಂದ್ರವಾಗಿಟ್ಟುಕೊಂಡು ಋಿಸಲಾಗಿದೆ.

ಗ್ರಂಥಸ್ಥ ಅಕ್ಷರದ ಅರಿವು ಆರಂಭವಾಗುವ ಅವಕಾಶಕ್ಕೂ ಮುನ್ನ ಹುಟ್ಟಿಕೊಂಡ ಈ ಜನಪದ ಸಾಹಿತ್ಯ ಇತರರನ್ನು ಮೆಚ್ಚಿಸಲಿಕ್ಕಾಗಿ ಹುಟ್ಟಿದ್ದಲ್ಲ. ಜನಪದರು ತಾವು ಅನುಭವಿ'ದ ನೋವು-ನಲಿವು, ದುಃಖ-ದುಮ್ಮಾನ, ಆಶೆ-ನಿರಾಶೆಗಳನ್ನು ಹೃದಯದಿಂದ ಹಾಡಿದರು, ಹೇಳಿದರು. ಅದು ಕಿವಿಯಿಂದ ಕಿವಿಗೆ ಹಾಡಾಗಿ, ಗೀತೆ, ಕಥೆ, ನೀತಿ, ಲಾವಣಿ, ಒಗಟು, ನಾಟಕ, ಚಿತ್ರ, ಶಿಲ್ಪ, ನಂಬಿಕೆ, ಆಚಾರ-ವಿಚಾರ ಸಂಪ್ರದಾಯ ಈ ರೀತಿ ವ್ಯಾಪಕವಾಗಿದೆ. ಇವರಲ್ಲಿ ಗ್ರಾಮೀಣ ಜನರ ಬದುಕು, ಜೀವನ, ಸಂಸ್ಕೃತಿ, ನಿರ್ಗ ಇವೆಲ್ಲ ಒಳಗೊಂಡಿರುತ್ತದೆ. ಜನಪದ ಸಾಹಿತ್ಯದಲ್ಲಿ ಮಹಿಳೆಗೆ ಪ್ರಮುಖ ಸ್ಥಾನ. ಮಹಿಳೆ ಪತಿವ್ರತೆ, ಗರತಿ, ಉದಾರಿ, ತ್ಯಾಗಿಯ ಸ್ಥಾನದಲ್ಲಿ ಚಿತ್ರಿತಳಾಗಿದ್ದಾಳೆ. ಇವೆಲ್ಲವನ್ನು ಮಹಿಳೆ ತಾಯಿಯಾಗಿ, ಪತ್ನಿಯಾಗಿ, ಸಹೋದರಿಯಾಗಿ, ಮುತ್ತೈದೆಯಾಗಿ, ದೇವತೆಯಾಗಿ ಹಲವು ರೂಪಗಳ ಮುಖಾಂತರ ಅಭಿವ್ಯಕ್ತಳಾಗುತ್ತಾಳೆ. ಹಾಗೆ ಮಹಿಳೆಯ ತಾಯ್ತನ, ಮುತ್ತೈದೆತನ, ದಾಪಂತ್ಯಜೀವನ, ತವರಿನ ಹಂಬಲ, ಸಹೋದರರ ವಾತ್ಸಲ್ಯ ಇವು ಒಂದು ಮುಖವಾದರೆ, ಬಂಜೆತನ, ವೈಧವ್ಯ, ವೇಶ್ಯಾತನ ಇವುಗಳ ಮುಖವೂ ಕಾಣುತ್ತದೆ. ಇವೆಲ್ಲ ಗರತಿಯ ಹಾಡುಗಳು. ಮಹಿಳೆ

ISBN Number : 978-93-342-6884-3

ತನ್ನ ಹಲವಾರು ಕಾಯಕಗಳಲ್ಲಿ ದಣಿವು ಆರಿಸಿಕೊಳ್ಳಲು ನಿವಾರಿಸಲು ಅನೇಕ ಹಾಡುಗಳನ್ನು ಹಾಡುತ್ತಿದ್ದಳು. ಅವು ತ್ರಿಪದಿಗಳಲ್ಲಿ ದಾಖಲಾಗಿವೆ. ಇದರಲ್ಲಿ ಆ ಕಾಲದ ಅವಳ ದೈನಂದಿನ ಬದುಕು, ಕೌಟುಂಬಿಕ ಚಿತ್ರಣ, ಸಾಮಾಜಿ ಹಾಗೂ ಧರ್ಮಿಕ ವ್ಯವಸ್ಥೆ, ನಂಬಿಕೆ, ಆಚರಣೆ ಎಲ್ಲವೂ ಅನಾವರಣಗೊಂಡಿದೆ. ಸಮಾಜ ಕೇಂದ್ರಬಿಂದುವಾದ ಕುಟುಂಬದಲ್ಲಿ ಹೆಣ್ಣೇ ಕೇಂದ್ರ ಬಿಂದುವಾಗಿದ್ದೂ ಅವಳ ಅವಳ ಕಾಯಕ ಪ್ರಾರಂಭವಾಗುವುದು ತ್ರಿಪದಿಯಲ್ಲಿ ದಾಖಲಾಗಿರುವಂತೆ---

ಮುಂಗೋಳಿ ಕೂಗುವ ಮುನ್ನ ಎದ್ದು ನೆಲ ಸಾರಿಸಿ ರಂಗವಲ್ಲಿ ಇಟ್ಟು ತನ್ನ ಕೆಲಸಕ್ಕೆ ಹೋಗುವ ಮುನ್ನ ಕುಲದೈವ, ಭೂತಾಯಿಯನ್ನು ಸ್ಮರಣೆ ಮಾಡುತ್ತಾಳೆ. "ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆಯೋಳೆ। ಭೂಮಿತಾಯಿ। ಎದ್ದೊಂದು ಗಳಿಗೆ ನೆನೆದೇನು" ತನ್ನ ಕೆಲಸ ಪ್ರಾರಂಭಿಸುವಳು ನಂತರ ಅಂದಿನ ಆಹಾರ-ಊಟ ತಯಾರಿಸುವ ಸಲುವಾಗಿ ಬೀಸುವ ಕರ್ಯ ಆರಂಭವಾಗುವುದು. "ಶರಣೆಂಬೆ ಶಿವನಿಗೆ ಶರಣೆಂಬೆ ಗುರುವಿಗೆ, ಶರಣೆಂಬೆ ಶಿವನ ಮಡದಿಗೆ। ಗೌರಮ್ಮಗೆ ಶರಣೆಂದು ಕಲ್ಲು ಹಿಡಿದೇನ॥" ಎನ್ನುವಳು. ಅಂದು ಹೆಣ್ಣಿಗೆ ಕುಟುಂಬವೇ ಕೇಂದ್ರವಾಗಿದು ಅವಳ ಎಲ್ಲಾ ಕರ್ಯ ಚಕುವಟಿಕೆ ಪ್ರಾರಂಭವಾಗುವುದು ಅಲ್ಲಿಯ ಸಂಬಂಧಗಳಿಂದ ಹೆಣ್ಣು ತಾಯಿ, ಮಗಳು, ಹೆಂಡತಿ, ಅತ್ತೆ, ಅಕ್ಕ ಹಾಗೂ ಸೊಸೆಯಾಗಿ ಹೀಗೆ ಎಲ್ಲಾ ಪಾತ್ರಗಳಲ್ಲೂ ಅವಳದು ಪ್ರಮುಖವಾದುದಾಗಿದೆ ಮೊದಲು ಹೆಣ್ಣುಮಗಳು ಮದುವೆ ಆಗಿ ಗಂಡನ ಮನೆಗೆ ಹೋಗುವ ಸಂರ್ಭದಲ್ಲಿ ತಾಯಿ ತನ್ನ ಮಗಳಿಗೆ ಕೆಲವು ಜೀವನ ಮೌಲ್ಯಗಳನ್ನು ಉಪದೇಶಿಸುವಳು. ಎಷ್ಟೇ ಕಷ್ಟಗಳು ಬಂದರೂ ತಾಳ್ಮೆಯಿಂದ ಸಹಿಸಿಕೊಳ್ಳಬೇಕು ಎಂದು ತಿಳುವಳಿಕೆ ಹೇಳುವಳು. ಇದರ ಜೊತೆಗೆ ಕೆಲವು ನೀತಿ ಮಾತುಗಳನ್ನು ಹೇಳುತ್ತಾಳೆ.ಅವೆಲ್ಲಾ ತ್ರಿಪದಿಯಲ್ಲಿ ದಾಖಲಾಗಿರುವುದನ್ನು ನೋಡಬಹುದು

"ಮಾತ್ಗಂಟಿ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲಧೂಪರದ ಚಕ್ಕಿ ಒಲೆಗಲ್ಲ। ತವರಿಗೆ, ಮಾತು ತಂದೋಳಲ್ಲ ಮಗಳಲ್ಲ ಹಾಗೇ ಅತ್ತೆ ಮಾವನಿಗೆ ಗೌರವಿಸುವ ಬಗ್ಗೆ ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ, ಮತ್ತೆ ಆಳುವ ದೊರೆಗಂಜಿ। ನನ ಮಗಳೆ, ಅತ್ತೀ ಮನೆಯೊಳಗ ಬಾಳವ್ವ ಎಂದು ಹೇಳಿಕೊಡುತ್ತಾಳೆ. ಕರಿಸೀರೆ ಉಡಬ್ಯಾಡ ಕಡಿವಾಣ

ISBN Number : 978-93-342-6884-3

ಬಿಡಬೇಡ, ನಡು ಓಣ್ಯಾಗ ನಿಂತು ನಗಬೇಡ। ನನ ಮಗಳೆ ತವರಿಗೆ ಮಾತ ತರಬೇಡ" ಎನ್ನುವ ಉಪದೇ಼ಸುವಳು" ಅತ್ತೆ ಮನೆಯಲಿ ಮುತ್ತಾಗಿ ಇರಬೇಕು ಹೊತ್ತಾಗಿ ನೀಡಿದರೂ ಉಣಬೇಕು। ಮಗಳೆ, ತವರಿಗೆ ಹೆಸರು ತರಬೇಕು" ನೆರೆಮನೆಯ ಸಿರಿದೇವಿ ನೀನಾಗು ಮಗಳೆಮನೆಯಾಗ ಭೇದಬಗಿಬಾಡ। ಮಗಳೆ ತುಂಬಿದ ಮನೆಯ ಒಡಿಬಾಡ॥ ಎಂದು ತವರು ಮನೆಗೆ ಒಳ್ಳೆಯ ಕರ್ತಿ ತರುವಂಥ ಮಗಳಾಗು ಎನ್ನುತ್ತಾರೆ. ಇದಕ್ಕೆ ಉತ್ತರವಾಗಿ... "ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾಗಿನಾಹುಟ್ಟಿ ಮನೆಗೆ ಎರವಾದೆ। ಹಡೆದವ್ವ ನೀ ಕೊಟ್ಟ ಮನೆಗೆ ಹೆಸರಾದೆ" ಎಂದು ಹೇಳಿ ಆ ರೀತಿ ಬಾಳಲು ಆ಼ಸುವಳು. ಗಂಡನ ಮನೆಗೆ ಹೊರಡುವ ಮುನ್ನ ತಾಯಿ ಕೊಟ್ಟ ಹೊಸ ಸೀರಿ ಉಟಗೊಂಡು ಇದ್ದಷ್ಟು ಬಂಗಾರದ ಆಭರಣ ಹಾಕಿಕೊಂಡು ತವರಿನ ಹೊಸ್ತಿಲಿಗೆ ನೀರು ಹಾಕಿ ಬಾಗಿ ಶರಣೆಂದು 'ತವರಿಗೆ ಯಶಸ್ಸು ಸಿಗಲಿ' ಅಂತ ಹರಕೆ ಕೊಟ್ಟು ಹೋಗುತ್ತಾಳೆ. ಆಗ ತಾಯಿ ತನ್ನ ಮಗಳಿಗೆ ಸಂಸ್ಕಾರಯುತವಾದ ಮಾತುಗಳನ್ನು ಹೇಳುತ್ತಾಳೆ. ಆದರೆ ಇಂದಿನ ಸಂರ್ಭದಲ್ಲಿ ಇವೆಲ್ಲ ಮರೆಯಾಗಿವೆ, ಮನಸ್ಸು ಮನೆಯನ್ನು ಒಡೆಯುವ ಉಪದೇಶವನ್ನು ಮಾಡುವುದನ್ನು ಕಾಣಬಹುದು.

ಪ್ರಾಪ್ತ ವಯಸ್ಕಳಾದೊಡನೆ ಗಂಡನ ಮನೆ ಪ್ರವೇ಼ಸುವ ಹೆಣ್ಣು ತನ್ನ ತವರು ಮನೆ ಅಗಲಿ, ತನ್ನ ನೋವನ್ನು ನುಂಗಿಕೊಂಡು ಹೊಸ ಮನೆಗೆ ಬಂದು, ಮಡದಿಯಾಗಿ, ಸೊಸೆಯಾಗಿ, ಅತ್ತಿಗೆ-ನಾದಿನಿ-ನೆಗಣ್ಣಿಯಾಗಿ, ಕುಟುಂಬದ ಸದಸ್ಯೆಯಾಗುತ್ತಾಳೆ. ತನ್ನ ಕೈ ಹಿಡಿದ ಗಂಡನ ಬಗ್ಗೆ ಅವಳಿಗೆ ಅಪಾರ ಗೌರವ "ಎಲ್ಲೆಲ್ಲಿ ನೋಡಿದರ ನಲ್ಲನಂಥವರಿಲ್ಲ ,ಹಲ್ಲು ನೋಡಿದರ ಹವಳವ। ನಲ್ಲನಸೊಲ್ಲು ಕೇಳಿದರ ಸಮಾಧಾನ", ಕೂಲಿ ಮಾಡಿದರೇನ ಕೋರಿ ಹೊತ್ತರೇನ, ನಮಗ ನಮರಾಯ ಜಡಮೇನ। ಬಂಗಾರ ಮಾಲ ಇದ್ಹಾಂಗ ಮನಿಯಾಗ" ಗಂಡನ ಮನೆಯಲ್ಲಿ ಪ್ರೀತಿ ವಿಶ್ವಾಸದ ಕೊರತೆಯಾಗದಿದ್ದರೆ ಅವಳ ಜೀವನಕ್ಕೆ ನೆಮ್ಮದಿ. ಕುಟುಂಬದ ನೆಮ್ಮದಿಯ ವಾತಾವರಣವಿದ್ದಾಗ ತವರ ಮನೆಯ ಕರೆ ಬಂದಾಗ ಅಗಲಿಕೆಯ ಅನಿವರ್ಯ ಪ್ರಸಂಗ ಬಂದಾಗ ಅವಳು ಹೀಗೆ ಹೇಳುತ್ತಾಳೆ- "ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ ಬಿಚ್ಚಿ ನನಮ್ಯಾಗ ಒಗೆವಂಥ। ರಾಯರನ ಬಿಟ್ಹಾಂಗ

ISBN Number : 978-93-342-6884-3

ಬರಲೇ ಹಡೆದವ್ವ ಎನ್ನುವಳು. ಆದರೆ ದಾಂಪತ್ಯ ಜೀವನದಲ್ಲಿ ವಿರಸ ಸಹಜ. 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗ' 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ' ಈ ಗಾದೆಗಳು ಬಹಳ ಹಿಂದಿನಿಂದಲೂ ಪ್ರಚಲಿತವಾಗಿವೆ. ಈಗ "ಗಂಡ ಹೆಂಡಿರ ಜಗಳ ಡೈವರ್ಸ್ ತನಕ" ಆಗ ಗಂಡ 'ಟ್ಟು ಮಾಡಿದಾಗ ಜನಪದ ಹೆಣ್ಣು ಅವನನ್ನು ಸಮಾಧಾನ ಮಾಡುವ ರೀತಿ "ಬಟ್ಟಲಗಣ್ಣೀಲಿ ದಿಟ್ಟಿ' ನೋಡ್ಯಾರ 'ಟ್ಯಾಕೋ ರಾಯ ನನಮ್ಯಾಗ। ನಾ ಅಂಥ ಹುಟ್ಟಿಸ್ಯಾಡವರ ಮಗಳಲ್ಲ ತಾನೂ ಪ್ರಾಮಾಣಿಕ ಮನೆತನದಿಂದ ಬಂದವಳು ಅನುಮಾನ ಇರಬಾರದು ಎಂದು ಭಾವ ವ್ಯಕ್ತವಾಗುವುದು. ಆದರೂ 'ಟ್ಟು ಇಳಿಯದಿದ್ದಾಗ- ಕಟ್ಟಾಣಿ ಗುಂಡೀಗಿ ಸಿಟ್ಟು ಮಾಡಲಿ ಬೇಡ ಬಿಟ್ಟು ಬಂದದೆ ಬಳಗೆಲ್ಲ। ಪತಿರಾಯ ಕಟ್ಟ್ಯಾರ ತಮ್ಮ ಪದರಾಗ" ಎನ್ನುವಳು. ಹೀಗೆ ಗಂಡನೇ ದೇವರು ರ್ವಸ್ವವಾಗಿರುತ್ತಾನೆ.

ಒಂದು ವೇಳೆ ಗಂಡ ತಪ್ಪು ಮಾಡಿ ಬೇರೆಯವಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದರೆ ಆಗ ಗಂಡನಿಗೆ ಸತ್ಯ ಹೇಳಲು ಒತ್ತಾಯಿಸುತ್ತಾಳೆ. ಹಾಗೆ ಅಂಥ ಪ್ರಸಂಗ ಬಂದಾಗ ಗಂಡನಿಗೆ ನೀತಿ ಪಾಠ ಹೇಳುವಳು- "ಅಂಗಿಯ ಮ್ಯಾಲಂಗಿ ಛಂದೇನೋ ನನರಾಯ ರಂಭೀಯ ಮ್ಯಾಲ ಪ್ರತಿರಂಭಿ । ಬಂದಾರ ಛಂದೇನೋ ರಾಯ ಮನಿಯಾಗ" ತಾನೇ ರಂಭೆ, ಊರ್ವಶಿ ಎಂಬುದನ್ನು ಒತ್ತಿ ಹೇಳುತ್ತ 'ರಂಭಿಯ ಮ್ಯಾಗ ಪ್ರತಿರಂಭಿ ಏಕೆ ಎನ್ನುವಳು. ಗಂಡನನ್ನು ಸರಿ ದಾರಿಗೆ ತರಲು ಪ್ರೀತಿ-ಶಾಸ್ತ್ರ ಮೇಲು ಎಂಬುದು ಇಲ್ಲಿ ವ್ಯಕ್ತವಾಗಿದೆ. ಹಣ್ಣ ಹಾಗಲಕಾಯಿ ಎಣ್ಣ್ಯಾಗ ಕರಿದೀನಿ ಉಂಡಾರೆ ನೋಡು ಸವಿಗಾರ। ನನಮ್ಯಾಗ ತಂದರೆ ನೋಡು ಸವತೀನ"ಇಲ್ಲಿ ಸವತಿ ಎಂದರೆ ವಿಷದ ಮರಿ ಹಾವು ಎಂಬ ಅಭಿಪ್ರಾಯ. ಹಾಗೆ ಪರ್ತ್ರೀ ಸಹವಾಸ ಮಾಡಿದ ಗಂಡಿನ ಕುರಿತು ಹಳ್ಳಿಯ ಜನಪದರು-"ವಾರಿ ರುಂಬಾಲು ಸುತ್ತಿ ದಾರ್‍ಯಾಗ ನಿಂತಿದ್ದು ಹ್ವಾರ್‍ಯಾ (ಕೆಲಸ) ಇಲ್ಲೇನೋ ಮನಿಯಾಗ। ನನ ತಮ್ಮನಾರಿಯಿಲ್ಲೋನೋ ಮನಿಯಾಗ" ಎಂದು ಹೆಂಡತಿಯ ನೆನಪು ಮಾಡುವರು. ಕೆಲಸದ ನೆನಪು

ISBN Number : 978-93-342-6884-3

ಮಾಡುವರು. ಮತ್ತು ಒಂದು" ನೀತಿ ಮಾತು ಹೇಳುವರು. "ಹೆಣ್ಣಿಂದು ರಾವಣ ಮಣ್ಣು ಮುಕ್ಕಿದವನಯ್ಯ ಹೆರವರ ಹೆಣ್ಣು ಬಯಸದೆ। ಲಗ್ನದ ಸತಿಯೊಡನೆ ಸುಖದಿ ಬಾಳಣ್ಣ" ಎನ್ನುವರು.

ಹೀಗೆ ಕೌಟುಂಬಿಕ ಸಮಸ್ಯೆಗಳನ್ನು ಜನಪದರು ಬಗೆಹರಿಸಿಕೊಳ್ಳುವ ಮೆಚ್ಚುವಂಚದ್ದು ಅವಳ ಪಾಲಿಗೆ ಮದುವೆಯಾದ ಮೇಲೆ ಗಂಡನೇ ಸರ್ವಸ್ವವಾಗಿರುತ್ತದೆ ಅದಕ್ಕೆ ಸಾಕ್ಷಿಯಾಗಿ . ಗಂಜೀಯ ಕುಡಿದರೂ ಗಂಡನ ಮನೆ ಲೇಸು ಅಂದಣದ ಮೇಲೆ ಚವರವೆ ಸಾರಿದರೂ ಹಂಗಿನ ತವರ ಮನಿಸಾಕ" ಎನ್ನುವಳು ಹಾಗೇ ಗಂಡನೂ ಕೂಡ 'ಟ್ಟಿನ ಸಂರ್ಭದಲ್ಲಿ ಪತ್ನಿಗೆ ಹೊಡೆದು ನಂತರ ಮನದಲ್ಲಿ ಮರುಗಿರುವುದನ್ನು ಈ ತ್ರಿಪದಿಯ ಮೂಲಕ ಗುರುತಿಸಬಹುದು "ಮಡದಿಯ ಬಡದಾನ ಮನದಾಗ ಮರುಗ್ಯಾನ ಒಳಗ್ಹೋಗಿ ಸೆರಗ ಹಿಡಿದು। ತಾ ಕೇಳ್ಯಾನ ನಾ ಹೆಚ್ಚೋ ನಿನ್ನ ತವರ್‍ಹೆಚ್ಚೋ" ಎಂದು ಹೇಳುತ್ತಾನೆ ಅವರಿಬ್ಬರ ಬಾಂಧವ್ಯ ಎಷ್ಟು ಅನುನ್ಯವಾಗಿತ್ತದೆ ಎಂದೆರೆ ತಾಯಿ ತವರಿಗೆ ಕರೆಯಲು ಬಂದಾಗ ತನ್ನ ಪ್ರೀತಿಯ ಪತಿ ಬಿಟ್ಟು ಬರಲಾರೆ ಎನ್ನುವಳು. "ಹಚ್ಚಡದ ಪದರಾಗ ಅಚ್ಚಮಲ್ಲಿಗಿ ಹೂವ ಬಿಚ್ಚಿ ನನ ಮೇಲೆ ಬಗೆವಂಥ ರಾಯರನ ಬಿಟ್ಹಾಂಗ ಬರಲೇ ಹಡೆದವ್ವ ಎನ್ನುವ ಹೆಣ್ಣು ತನ್ನ ಗಂಡನ ಬಗ್ಗೆ ಎಷ್ಟು ಒಲವು ಪ್ರೀತಿ ಅನ್ಯನ್ಯತೆ ಇತ್ತೆಂಬುದು ವ್ಯಕ್ತವಾಗುತ್ತದೆ.

ಸಂಬಂಧಗಳ ಬಗ್ಗೆ ಕೂಡ ಜನಪದರಲ್ಲಿ ಗೌರವವಿದೆ ತಾಯಿ ಇದ್ದರೆ ತವರು। ತಂದೆ ಇದ್ದರೆ ಬಳಗ ಪತಿ ಇದ್ದರೆ ಮುತ್ತೈದೆತನ' ಎಂಬ ಮಾತುಗಳಿವೆ. 'ತಾಯಿಯೇ ದೇವರು' ಈ ವೇದವಾಕ್ಯ ಗೃಹಿಣಿ ಕಂಡ ಸತ್ಯ. "ಕಾಗೆ ಹೋಗಾಕ ಏಸೊಂದ ದಿನ ಬೇಕ ತಾಸ್ಹೊತ್ತಿನ್ಹಾದಿ ತವರೂರ। ಮನಿಯಾಗ ಕಾದಿ ಕುಂತಾಳ ಹಡೆದವ್ವ ತವರು ಮನೆ ಅವಳಿಗೆ ಕಾಯ ಪುಣ್ಯಕ್ಷೇತ್ರ. ಎಂದೆಸುತ್ತಾರೆ. ಹೆಣ್ಣು ಮಗಳು ತನ್ನ ತವರಮನಿ ತನ್ನ ರಕ್ತಸಂಬಂಧ ಸುಖವಾಗಿರಲೆಂದು ಆಸುವಳು. "ತವರ ಮನಿಯ ದೀಪ ತವಕೇರಿ ನೋಡೇನ ಹತ್ತು ಬೆರಳ್ಹಚ್ಚಿ ಶರಣೆಂದೆ। ತಮ್ಮಂದಿರು ಜಯವಂತರಾಗಿ ಇರಲೆಂದೆನಿಸುತ್ತಾ ತಾಯಿಗೆ ಯಾರೂ ಸರಿಯಿಲ್ಲವೆಂದು "ಯಾರೂ

ISBN Number : 978-93-342-6884-3

ಇದ್ದರು ನನ್ನ ತಾಯವ್ವನ್ನೋಲಾರ ಸಾವಿರ ಕೊಳ್ಳಿ ಒಲಿಯಾಗ। ಇದ್ದರು ಜ್ಯೋತಿ ನೀನ್ಯಾರು ಹೋಲರು" ಜ್ಯೋತಿ ಸ್ವರೂಪಳಾದ ತಾಯಿಗೆ ಯಾರೂ ಸಮನಲ್ಲ. ತವರಿನ ತುಂಬಿದ ಮಾವಿನ ಮರ ಎಂದರೆ ತಾಯಿ. ತಾನು ತಾಯಿಯ ಕರುಳಿನ ಕುಡಿ ಎಂದು ಭಾವಿಸುತ್ತಾಳೆ. ಪ್ರತಿಯೊಂದು ಹೆಣ್ಣಿಗೂ ತಾನು ಹುಟ್ಟಿ ಬೆಳೆದು ಆಡಿದ ತವರಿಗೆ ಹೆಸರು ತರಬೇಕೆಂಬ ಆಶೆ- "ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾಗಿ ನಾ ಹುಟ್ಟಿ ಮನೆಗೆ ಎರವಾದೆ। ಹಡೆದವ್ವ ನೀ ಕೊಟ್ಟ ಮನೆಗೆ ಹೆಸರಾದೆ" ಎನ್ನುವಳು. ಆ ರೀತಿ ಬಾಳಲು ಅಪೇಕ್ಷಿಸುತ್ತಾಳೆ. ಹೆಣ್ಣು ಮಕ್ಕಳಿಗೆ ಅವಳ ಬದುಕಿನಲ್ಲಿ 'ತಾಯ್ತನ' ಪಟ್ಟ [1]ಕ್ಕಾಗ ಬದುಕು ಸರ್ಥಕವಾಗುತ್ತದೆ. ಮಕ್ಕಳನ್ನು ಪಡೆಯುವುದೇ ಅಂತಿಮಗುರಿ. ಹೆಣ್ಣು ಹೆತ್ತಾಗಲೇ ಬಂಜೆತನ ನೀಗುತ್ತದೆ. ಎಂಬುದು ಅವಳ ನಂಬಿಕೆ ಅಗು ಅಂದಿಗಲ್ಲ ಪ್ರಸ್ತತದಲ್ಲಿಯೂ ಈ ನೋವು ಹೆಣ್ಣು ಮಕ್ಕಳಲ್ಲಿ ಕಾಡುತ್ತಿರುವುದನ್ನು ಕಾಣಬಹುದು. ಅದಕ್ಕಾಗಿ ಮಕ್ಕಳಿಗಾಗಿ [2]ವನನ್ನು ಈ ರೀತಿ ಪ್ರರ್ಥಿಸುವಳು "ಮಕ್ಕಳ ಕೊಡು [2]ವನೇ ಬಾಳ ಮಕ್ಕಳಿರಲಿ ಮ್ಯಾಗ ಗುರುವಿನ ದಯವಿರಲಿ। ನನ ಗುರುವೆ ಬಡತನದ ಚಿಂತೆ ನನಗಿರಲಿ॥ ಮಕ್ಕಳಿದ್ದರೆ ಗರತಿಗೆ ಮತ್ತೇನೂ ಬೇಡ- "ಕೂ[1]ದ್ದ ಮನೆಗೆ ಬೀಸಣಿಕೆ ಯಾತಕ ಕೂಸು ಕಂದಯ್ಯ ಒಳಹೊರಗ। ಸುಳಿದಾರೆಬೀಸಣಿಕೆ ಗಾಳಿ ಸುಳಿದಾಂಗ" ಎಂಥ ಸುಂದರಗೀತೆ. ಹೆಣ್ಣಿನ ಜನುಮಕ ಬಂಜೆತನ ಶಾಪ ಎಂಬುದನ್ನುಅರಿತ ಹೆಣ್ಣು ತನ್ನ ನೋವನ್ನು ಹೀಗೆ ವ್ಯಕ್ತಪಬಡಿಸುತ್ತಾಳೆ "ಬಾಲಕರಿಲ್ಲದ ಬಾಲಿದ್ಯಾತರ ಜನುಮ ಬಾಡಿಗೆಯ ಎತ್ತು ದುಡಿದ್ಹಾಂಗ। ಬಾಳೆಲೆಯಹಾಸುಂಡು ಬೀ[1] ಬಗೆದ್ಹಾಂಗ॥ ಎನ್ನುತ್ತಾಳೆ.ಮಗುವನ್ನು ಹಡೆದ ಅವಳಿಗೆ ಅದೇ ಅವಳ ರ್ವಸ್ವ "ಅಳುವ ಕಂದನ ತುಟಿಯು ಹವಳದ ಕುಡಿಹಂಗ ಕುಡಿಹುಬ್ಬು ಬೇವಿನೆಸಳಂಗೆ। ಕಣ್ಣೋಟ , [2]ವನ ಕೈಯಲಗು ಹೊಳೆದ್ಹಂಗ" ಹಾಗೆ "ಕೂಸ ಕಂದಯ್ಯ ತೊಡಿಮ್ಯಾಗ ಆಡಿದರ ಬಂದ ಬ್ಯಾಸರಕಿ ಬಯಲಾಯ್ತು" ಎನ್ನುವಳು. ವಂಶ ಬೆಳೆಸುವ ಹತ್ತು ಮಂದಿಯನ್ನು ಹೆತ್ತರೂ ತಾಯ್ತನದ ಮಾನ್ಯತೆ ತಾಯಿಗೆ ದೊರೆಯದು. ಹೆಣ್ಣು ಹೆತ್ತಾಗಲೇ ಬಂಜೆತನ ನೀಗುವುದು ಎಂಬುದು ಅವಳ ನಂಬಿಕೆ ಅದು ಸತ್ಯ ಕೂಡ ಒಟ್ಟಿನಲ್ಲಿ ಬಂಜೆಯ ಬದುಕು ಹೆರವರಿಗೆ" ಎಂದು ಬಂಜೆಯ ನಿಂದನೆ

ISBN Number : 978-93-342-6884-3

ಕೇವಲ ಮನುಷ್ಯರಿಂದಲ್ಲ ಪಶುಪಕ್ಷಿಗಳಿಂದ ಸಹ ಎಂಬುದನ್ನು ಈ ಪದ್ಯ ಹೇಳುತ್ತದೆ. "ಆಡಿ ಬಾ ನನ ಕಂದ ಅಂಗಾಲ ತೊಳೆದೇನು ತೆಂಗಿನಕಾಯಿ ತಿಳಿನೀರ। ತಕ್ಕೊಂಡು ಬಂಗಾರ ಪಾದವ ತೊಳದೇನೆ ಎನ್ನುವಲ್ಲಿ ತಾಯಿಗೆ ತನ್ನು ಮಗುವಿನ ಮೇಲೆ ಇರುವ ಪ್ರೀತಿ ವ್ಯಕ್ತವಾಗಿದೆ.

ಇನ್ನು ತಾಯಿ ಸತ್ತ ತವರು ಮನೆಗೆ ಗಂಡನ ಮನೆಯಿಂದ ಬಂದ ಮಗಳಿಗೆ ಕಹಿ ಅನುಭವಗಳಾಗುತ್ತವೆ ಎಂಬುದನ್ನು

"ಹಡೆದವ್ವ ಇರುತನಕ ನಡುಮನಿ ನಂದೆನ್ನೆ ಕಡಗದ ಕೈ ಸೂ[1] ಬಂದು। ನಡಿವಾಗ ತುದಿಗಟ್ಟೆ ನನಗ ಎರವಾದೆ"

ತಾಯಿ ಇದ್ದಾಗ ಸ್ವೇಚ್ಛೆಯಿಂದ ಮನೆತುಂಬ ಓಡಾಡಿದ್ದ ಮಗಳು ಇಂದಿ ಅತ್ತಿಗೆಯ ಅಪ್ಪಣೆ ಇಲ್ಲದೆ ಅವಳು 'ಒಳಗೆ ಬಾ' ಎಂದು ಕರೆಯದೆ ಮನೆಯ ಒಳಗೆ ಪ್ರವೇ[2]ಸಲು ಅಭಿಮಾನ ಅಡ್ಡಬಂದು ಮನೆಯ ಮುಂಭಾಗದ ಕಟ್ಟೆಯ ಮೇಲೆ ಕೂಡಲೂ ಅವಳಿಗೆ ಧರ್ಯವಿಲ್ಲ. ಅವಳ ಅಂತರಂಗದ ಭಾವನೆ ಈ ರೀತಿ ಮಿಡಿಯುತ್ತದೆ. "ತಾಯಿಯಿಲ್ಲದ ತವರಿಗೆ ಹೋಗಬ್ಯಾಡ ಮಗಳೆ ನೀರಿಲ್ದ ಕೆರಿಗೆ ಕರುಬಂದ। ತಿರುಗುವಾಗ ಆಗ ನೋಡಿದರೆ ದುಃಖವ"ನೀರಡಿಕೆಯಾಗಿರುವ ಕರು, ನೀರಿಲ್ಲದ ಕೆರೆಗೆ ಬಂದ ಹಾಗೆ, ಸುಖ ದುಃಖ ಹಂಚಿಕೊಳ್ಳುವುದಕ್ಕೆ ಬಂದ ಮಗಳು ಹೊಟ್ಟೆಯಲ್ಲಿ ಸಂಕಟವನ್ನು ಅವಿತಿಟ್ಟುಕೊಂಡು ಬಂದ ದಾರಿ ಹಿಡಿದು ಹೋಗುತ್ತಾಳೆ.

ಅಣ್ಣ-ತಂಗಿಯರ ಮಧುರ ಬಾಂಧವ್ಯ ಜನಪದದಲ್ಲಿ ಹಾಸು ಹೊಕ್ಕಾಗಿದೆ. ಅಣ್ಣನನ್ನು ಕುರಿತು ತಂಗಿ ಹೇಳುತ್ತಾಳೆ. "ಹೆಣ್ಣಿನ ಜನುಮಕ ಅಣ್ಣತಮ್ಮರು ಬೇಕು ಬೆನ್ನ ಕಟ್ಟುವರು ಸಭೆಯೊಳಗೆ। ಸಾವಿರ ಹೊನ್ನ ಕಟ್ಟುವರು ಉಡಿಯೊಳಗೆ"

ತಂಗಿಯ ಆಪತ್ ಕಾಲಕ್ಕೆ ಸಹಾಯಕ್ಕೆ ಬಂದ ಅಣ್ಣನನ್ನು ಜೀವನ ರ್ಯಂತ ನೆನೆಯುವಳು. ಹೆಣ್ಣು ದೇವರಲ್ಲಿ ಕೇಳುವುದು ಒಂದೇ ಒಂದು ಮುತ್ತೈದೆತನ. ಹಾಗೂ ಮುತ್ತೈದೆಯಾಗಿ ಸಾಯುವುದು. ಅದಕ್ಕಾಗಿ ವ್ರತ ನೇಮಗಳನ್ನು ಮಾಡುತ್ತಾಳೆ. ದೇವರಲ್ಲಿ ಈ ಪರಿ ಬೇಡುತ್ತಾಳೆ.ಗಂಡನಿಲ್ಲದ ಬಾಳು ದಂಡನಾಳಿದರೇನು

ISBN Number : 978-93-342-6884-3

ಪುಂಡಿಯ ಹೂವ ಹೊಲ ತುಂಬ। ಅರಳಿದರೆಗಂಡನಿಲ್ಲದ ಬಾಳು ಬೀಳಲ್ಲವೇ" ಎಂದು ಎಲ್ಲರಿಂದ ತಿರಸ್ಕಾರ, ಅವಮಾನ, ಅಸ್ಪೃಶ್ಯತೆ ಅನುಭವಿಸಬೇಕಾಗುತ್ತದೆ. ಜನಪದ ಸಾಹಿತ್ಯದಲ್ಲಿ ಕುಟುಂಬ ಯೋಜನೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಂಡುಬರುತ್ತದೆ. ತನ್ನ ನೆಮ್ಮದಿಯ ಬದುಕಿಗೆ ದೇವರನ್ನು ಪ್ರರ್ಥಿಸುವಳು. ಹೀಗೆ ಕುಟುಂಬ ಯೋಜನೆ ಪದ್ಧತಿಯನ್ನು ಬೆಂಬಲಿಸುವಂತೆ ಹಲವಾರು ತ್ರಿಪದಿಗಳು ಜನಪದರಲ್ಲಿದ್ದವು. ಪತಿ ತೀರಿದಾಗ ಪತ್ನಿ ಸಹಗಮನ ಮಾಡಿದ ಉದಾಹರಣೆಗಳು ಅನೇಕ ಇವೆ. ಆದರೆ ಪ್ರೇಮದ ಪತ್ನಿ ಕೆರೆಗೆ ಹಾರವಾದಾಗ ಗಂಡ ಮಡದಿಯನ್ನು ಅಗಲಿರಲಾರದೆ ತಾನೂ ಕೆರೆಗೆ ಹಾರಿದ ಕಥೆ 'ಕೆರೆಗೆ ಹಾರ'. ಪರೋಪಕಾರಕ್ಕೆ ಗರತಿ ಬಲಿದಾನಗೈದ ಕಥೆ. ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕು ಎಂಬುದು ಈ ಕಥೆಯ ಜೀವನಾಡಿ ಪತ್ನಿಯ ತ್ಯಾಗ ಪತಿಯ ನರ್ವ್ಯಾಜ್ಯ ಪ್ರೇಮ ವ್ಯಕ್ತವಾಗಿದೆ. ಹೆಣ್ಣಿಗೆ ಗುಣವೇ ಮುಖ್ಯ ಸೌಂರ್ಯ ಮುಖ್ಯವಲ್ಲ ಎಂಬುದನ್ನು- "ಕಪ್ಪು ಹೆಂಡತಿಯಂತ ಕಿರಿಕಿರಿ ಮಾಡಬೇಡ ನೇರಲದ ಹಣ್ಣು ಬಲು ಕಪ್ಪು। ಇದ್ದರು ತಿಂದು ನೋಡಿದರ ಬಹಳ ರುಚಿ" ಹಾಗೇ "ಕೆಂಪು ಹೆಂಡತಿ ಎಂದು ಸಂತೋಷ ಪಡಬ್ಯಾಡ ಅತ್ತಿಯ ಹಣ್ಣು ಬಲುಕೆಂಪು। ಇದ್ದರು ಒಡೆದು ನೋಡಿದರೆ ಹುಳಭಾಳ"ಜನಪದ ಮಹಿಳೆ ಜನಪದರು ತಮಗೂ ಅನ್ಯರಿಗೂ ಲೇಸೆನಿಸುವ ಹಿತವಚನಗಳನ್ನು ಅನುಭವದಿಂದ ಹೇಳಿದರು. ಹಾಡಿದರು. ನಡೆದು ತೋರಿದರು.

ಯಾವುದೇ ಒಂದು ವ್ಯವಸ್ಥೆಯಲ್ಲಿ ಗಂಡು ಹೆಣ್ಣು ಪರಸ್ಪರ ಹೊಣೆಗಾರರಾಗುತ್ತಾರೆ. ಜಾನಪದ ಜೀವನದಲ್ಲಿ ಗಂಡಿಗಿಂತ ಹೆಣ್ಣು ಹೊಣೆಗಾರಳಾಗಿದ್ದಳು. ಆಗಲೂ ಹೆಣ್ಣು ಶೋಷಣೆಯ ವಸ್ತುವಾಗಿದ್ದಳು. ಆ ಶೋಷಣೆ ಹೆಣ್ಣಿನ ಜೀವನದೊಂದಿಗೆ ಅನಿವರ್ಯವಾಗಿ ಹೆಣೆದು ಕೊಂಡಿದೆ. ಹೆಣ್ಣು ಹಕ್ಕುಗಳಿಗಾಗಿ ಹೋರಾಡುತ್ತಲೇ ಬಂದಿದ್ದಾಳೆ. ಹೆಣ್ಣಿಗೆ ಹಲ್ಲುಗಳ ಸಂಖ್ಯೆ ಕಡಿಮೆ ಎಂದು ಧರ್ಮಶಾಸ್ತ್ರಗಳು ನಂಬಿದ್ದವು. ಈಗ ಹೆಣ್ಣು ಹೆಚ್ಚು ವಿದ್ಯಾವಂತಳಾಗಿ ಕಂಡರೂ ತನ್ನ ಕಾಲ ಮೇಲೆ ನಿಲ್ಲುವ ಸಾರ್ಥ್ಯ ಹೊಂದಿದರೂ ಈಗಲೂ ಎರಡನೇ ರ್ದ್ಜೆ ನಾಗರಿಕಳಾಗಿದ್ದಾಳೆ. ವರದಕ್ಷಿಣೆ, ಅತ್ಯಾಚಾರ ಹೆಣ್ಣು ಎಂಬ ತಾರತಮ್ಯ, ದರ್ಜನ್ಯ ಇದ್ದೇ ಇವೆ. ಕೆಲವೆಡೆ ಹೆಣ್ಣು

ISBN Number : 978-93-342-6884-3

ನೊಂದು ನುಡಿದ ಗೀತೆ ಇದು. "ಹೆಣ್ಣಾಗಿ ಹುಟ್ಟೋದಕ್ಕಿಂತ ಮಣ್ಣಾಗಿ ಹುಟ್ಟಿದರೆ ಮಣ್ಣಿನ ಮೇಲೊಂದು ಮರವಾಗಿ। ಹುಟ್ಟಿದರೆ ಪುಣ್ಯವಂತರಿಗೆ ನೆರಳಾದೆ" ಪುರುಷ ಪ್ರಧಾನ ಸ್ವರ್ಥದ 'ಕೆರೆಗೆ ಹಾರ'ಕ್ಕೆ 'ಭಾಗೀರಥಿ'ಯರು ಬಲಿಯಾಗಬಾರದು. ಈ ರೀತಿ ಸಾಧಿಸಿದಾಗ ಹೆಣ್ಣಿಗೆ ಸಮಾನತೆ ಬರುವುದು.

ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿರುವುದು ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ), ನಾಟಕ (ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯು ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿವೆಯಾದರೂ ತನ್ನ ಮೂಲನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ ನೆಲೆಯನ್ನು ಭದ್ರವಾಗಿ ಉಳಿಸಿಕೊಂಡಿವೆ. ಕಂಸಾಳೆ ಪದ, ಗೀಗಿಪದ, ಕೋಲಾಟದ ಪದ, ರಾಗಿ ಬೀಸೋ ಪದ, ಸುಗ್ಗಿ ಹಾಡುಗಳು, ಹೀಗೆ ಇನ್ನೂ ಅನೇಕ ವಿವಿಧ ಬಗೆಯ ಜಾನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಕಥೆಗಳನ್ನು ಹೇಳುವುದಾಗಲಿ ಕೇಳುವುದಾಗಲಿ ನಿನ್ನೆಮೊನ್ನೆಯದಾಗಿರದೆ, ಮಾನವ ಸಮಾಜದಷ್ಟೇ ಪುರಾತನವಾದುದಾಗಿದೆ. ಸ್ವಾಭಾವಿಕವಾಗಿಯೇ ಮನುಷ್ಯ ಕಥೆ ಹೇಳುವುದನ್ನು ಕಲೆಯಾಗಿ ಬೆಳೆಸಿಕೊಂಡ. ಶ್ರಮದ ಉಪಶಮನಕ್ಕಾಗಿ ಕಲೆ ಜನ್ಮತಾಳಿತು ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಕಥೆ ಹುಟ್ಟಿದ್ದು ಈ ಅನೀವರ್ಯದ ಫಲವಾಗಿ. ಆದಿವಾಸಿಗಳಲ್ಲಿ ಕೆಲವು ವಿಶೇಷ ಸಂರ್ಭಗಳಲ್ಲಿ ಕೆಲವು ರೀತಿಯ ಕಥೆಗಳನ್ನು ಹೇಳುತ್ತಿದ್ದುದು ಗೋಚರಿಸುತ್ತದೆ. ಕೆಲವನ್ನು ಚಳಿಗಾಲದಲ್ಲೂ ಕೆಲವನ್ನು ಬೇಸಗೆಯಲ್ಲೂ ಹೇಳುತ್ತಿದ್ದರು. ಕೆಲಸದ ಸಮಯದಲ್ಲಿ

 ISBN Number : 978-93-342-6884-3

ಕೆಲಸದ ಶ್ರಮವನ್ನು ಮರೆಯಲು ಕಥೆಗಳನ್ನು ಹೇಳುತ್ತಿದ್ದರು, ಕೇಳುತ್ತಿದ್ದರು. ಸಂಜೆ ಕೆಲಸ ಮುಗಿದ ಮೇಲೆ ಬೆಂಕಿ ಕಾಯಿಸುತ್ತ, ರಾತ್ರಿ ಊಟ ಮುಗಿದ ಮೇಲೆ ಬೆಳದಿಂಗಳಿನಲ್ಲಿ ಕುಳಿತು ಕಥೆ ಹೆಳುವುದು, ಕೇಳುವುದು ವಾಡಿಕೆ. ಮಕ್ಕಳನ್ನು ಮಲಗಿಸಲು ಕಥೆ ದೊಡ್ಡ ಸಾಧನವಾಗಿ ಬಳಕೆಯಾಗುತ್ತದೆ. ರಾಜನಂಥವ ಕಥೆ ಕೇಳಲು ಕಥೆಗಾರರನ್ನೇ ನೇಮಿಸಿಕೊಂಡಿದ್ದ. ಕಥೆ ಹೇಳುವುದನ್ನು ವಿಶೇಷ ಉದ್ಯೋಗವನ್ನಾಗಿ ಮಾಡಿಕೊಂಡವರೂ ಇದ್ದರು. ಆದರೆ ಇಂಥವರು ವಿರಳವೆಂದೇ ಹೇಳಬೇಕು. ಕಥೆಗಳನ್ನು ಹೇಳಲು ಹಾಗೂ ಕೇಳಲು ಪುರುಷರು, ್ತ್ರೀಯರು ಮತ್ತು ಬಾಲಕರು-ಯಾರಾದರೂ ಆಗಬಹುದು. ಜನಪದ ಕಥೆಗಳಲ್ಲಿ ಹೆಚ್ಚು ಆಸಕ್ತಿಯನ್ನು ತಾಳುವವರಲ್ಲಿ ಬಾಲಕರು ಪ್ರಧಾನರು.

ಸಾಮಾನ್ಯವಾಗಿ ಕಥೆ ಹೇಳುವ ಹಾಗೂ ಕೇಳುವ ಕ್ರಿಯೆ ಜಗತ್ತಿನ ಯಾವುದೇ ಭಾಗಕ್ಕೆ ೀಮಿತವಾದುದಲ್ಲ. ಮಾನವ ಇರುವ ಕಡೆಯಲ್ಲೆಲ್ಲ ಇದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಆದ್ದರಿಂದ ಪ್ರಪಂಚದ ಎಲ್ಲ ಕಥೆಗಳಲ್ಲಿಯೂ ಕಾಣಬರುವ ಒಂದು ರ್ವಸಾಮಾನ್ಯ ಗುಣವೆಂದರೆ ಏಕರೂಪತೆ. ಇದಕ್ಕೆ ಕಥೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಬೆಳೆುವುದು ಕಾರಣವಿರಬಹುದು ಅಥವಾ ಕಥೆ ಹೇಳುವ ಮಾನವನ ಮೂಲ ಪ್ರವೃತ್ತಿ ಕಾರಣವಿರಬಹುದು. ಈ ಏಕರೂಪತೆಯ ಜೊತೆಯಲ್ಲಿಯೇ ವ್ಯತ್ಯಾಸವೂ ಕಂಡುಬರುತ್ತದೆ. ಆದ್ದರಿಂದ ಏಕರೂಪತೆಯಲ್ಲಿ ಭಿನ್ನತೆ ಜನಪದ ಕಥೆಯ ವಿಷ್ಟ ಲಕ್ಷಣವಾಯಿತು

ಜನಪದ ಕಥೆಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದಿರುವ ಕಥೆಯನ್ನು 'ಅಜ್ಜಿಯ ಕಥೆ', 'ಅಡುಗೋಲಜ್ಜಿಯ' ಕಥೆಯೆಂದು ಕರೆಯುತ್ತಾರೆ. ಇಲ್ಲಿ ಕಥೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವಲ್ಲಿ ಪ್ರಧಾನ ಪಾತ್ರ ಅಜ್ಜಿಯರದೇ ಆಗಿರುತ್ತದೆ. ವಾಚಕ ಪರಂಪರೆಯ ಈ ಕಥೆಗಳು ಹರಿದು ಬರುವಾಗ ತಮ್ಮ ವಸ್ತುವಿನಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳಬಹುದು. ಆದರೆ ಒಂದೇ ಬಗೆಯ ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯಗಳು ಎಲ್ಲಾ ಕಡೆ ಇದ್ದೇ ಇರುತ್ತವೆ. ಈ ಕಥೆಗಳನ್ನು ಎಲ್ಲಾ ತಲೆಮಾರುಗಳಲ್ಲಿಯೂ

ISBN Number : 978-93-342-6884-3

ಹೇಳುತ್ತಿದ್ದರು. ಚಳಿಗಾಲ ಹಾಗೂ ಬೇ'ಗೆ ಕಾಲಗಳಲ್ಲಿ ಶ್ರಮವನ್ನು ಮರೆಯಲು, ಮಕ್ಕಳನ್ನು ಮಲಗಿಸುವ ವೇಳೆಯಲ್ಲಿ ಕಥೆಗಳನ್ನು ಹೇಳುತ್ತಿದ್ದರು. ಹಿಂದೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಕೀಳಾಗಿದ್ದೂ, ಅವಲಂಬಿತಳು, ಪುರುಷನಿಲ್ಲದೆ ಅವಳ ಜೀವನ ನಿರ್ಥಕ ಎಂದೆಲ್ಲಾ ಭಾವಿಸಲಾಗಿತ್ತು. ಆದರೆ ಹೆಣ್ಣು ಜನಪದ ಕಥೆಗಳಲ್ಲಿ ಅತಿಮಾನುಷ ಪತ್ನಿಯರಾಗಿ ಬರುವ ್ತ್ರೀಯಾಗಿ, ದೇವತ ್ತ್ರೀಯಾಗಿ ಸಾಮಾನ್ಯ ಮಹಿಳೆಯರಿಗಿಂತ ಸಬಲರಾಗಿ, ಸ್ವತಂತ್ರರೂ ಆಗಿ ಕಾಣಿಸುತ್ತಾರೆ. ಹಣೆಬರಹ ಬರೆಯುವ ವಿಧಿಯಮ್ಮ ಅತ್ಯಂತ ಶಕ್ತಿ ದೇವತೆಯಾದರೆ, ಕಥೆಗಳಲ್ಲಿ ಬರುವ ದೇವಕನ್ನಿಕೆಯರು ಭೂಲೋಕದ ಪುರುಷರ ಮೇಲೆ ನಿಯಂತ್ರಣವಿರುವವರು. ಇವರಿಗೆ ಮೆಚ್ಚುಗೆಯಾದ ಗಂಡು 'ಕ್ಕಿದರೆ ಭೂಮಿಯ ಮೇಲೆ ಬಂದು ಸಂಸಾರ ಮಾಡವಷ್ಟು ಸ್ವತಂತ್ರರು. ಇದಕ್ಕೆ ಉದಾಹರಣೆಯಾಗಿ ಕೆಲವು ಕನ್ನಡದ ಜನಪದ ಕಥಾಸಂಕಲನಗಳಲ್ಲಿ ಗಮನಿಸಬಹುದಾಗಿದೆ. ಜನಪದರು ಅಕ್ಷರಸ್ಥರಲ್ಲದಿದ್ದರೂ, ನೀತಿವಂತರು, ಯಾರಿಗೂ ತೊಂದರೆ ಕೊಡಬಾರದು, ಅದು ನಮಗೆ ತಿರುಗು ಬಾಣವಾಗುವುದೆಂಬ ತತ್ವವನ್ನು ಕತೆಗಳ ಮೂಲಕ ಅನಾವರಣ ಮಾಡಿದ್ದಾರೆ. ಎಲ್ಲಾ ಕಥೆಗಳಲ್ಲಿ ಕಂಡು ಬರುವ ಮಹತ್ವದ ಆಶಯಗಳೆಂದರೆ ನೀತಿ ಮತ್ತು ಸಮಾಜಮುಖಿ ಚಿಂತನೆ. ಈ ಕಥೆಗಳನ್ನು ಕೇಳಿದವರು ಬದುಕಿನಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ನೀತಿ ಒಂದು ತತ್ವವಾಗಿಯೇ ಬರುತ್ತದೆ. ಒಟ್ಟಾರೆಯಾಗಿ ಜನಪದ ಸಾಹಿತ್ಯದಲ್ಲಿ ಹೆಣ್ಣು ಕೇವಲ ಮಗ್ದೆಯಾಗಿ ದಾಖಲಾಗಿಲ್ಲ ಅಂದಿನ ವ್ಯವಸ್ಥೆಯ ಬಗ್ಗೆ ಹಾಡಿನ ರೂಪದಲ್ಲೇ ವಿರೋಧಿ'ದ್ದಾಳೆ.²ಷ್ಟ ಸಾಹಿತ್ಯದ ಸಂರ್ಭದಲ್ಲಿ ಮಹಿಳಾ ಅಭಿವ್ಯಕ್ತಿಗಳು ಕಂಡು ಬರುತ್ತವೆ. ಆದರೆ ಅದಕ್ಕೂ ಹಿಂದೆ ಜನಪದ ಸಾಹಿತ್ಯದಲ್ಲಿ ಸಂತಸದ ಸಂಗತಿಗಳ ಜೊತೆಗೆ ತಮ್ಮ ದುಡಿಮೆಯ ದಣಿವನ್ನು ಸಾಮಾಜಿಕ ಅಸಮಾನತೆ ಮತ್ತು ಅವಮಾನಗಳನ್ನು ಸಾಮಾಜಿಕ ಮತ್ತು ಕೊಟುಂಬಿಕ ವಲಯದಲ್ಲಾಗುವ ಕ್ರರ್ಯ, ಹಿಂಸೆ ಹಾಗೂ ಒಡಲಾಳದ ನೋವು, ಮನದ ವೇದನೆಯನ್ನು ಅದರ ಸಾಹಿತ್ಯ ಮೂಲಕ ಅದರಲ್ಲೂ ತ್ರಿಪದಿ, ಗಾದೆಗಳ ಮೂಲಕ ವ್ಯಕ್ತಪಡಿ'ದ್ದಾರೆ. ಸಜನಪದ ಸಾಹಿತ್ಯದಲ್ಲಿ ಮಹಿಳಾ ಧ್ವನಿ ಎಂದಾಗ ಕೇಲವ ಜೋಗುಳದಲ ಹಾಡು , ಆಚರಣಾತ್ಮಕ ಹಾಡುಗಳನ್ನು ನೋಡದೆ ಜನಪದ ಪ್ರಕಾರಗಳನ್ನು

 ISBN Number : 978-93-342-6884-3

ಗಮನಿಸಬೇಕಾಗುತ್ತದೆ. ಅಲ್ಲಿ ಅವಳು ಕೇವಲ ಸಂಭ್ರಮ ಮತ್ತು ಸೌಮ್ಯ ಧ್ವನಿಗಳನಷ್ಟೇ ಅಲ್ಲದೆ ಪ್ರತಿರೋಧ ಮತ್ತು ಪ್ರತಿಭಟನಾತ್ಮಕ ಧ್ವನಿಗಳು ವ್ಯಕ್ತವಾಗಿವೆ.

ಹೆಣ್ಣಿನ ಹುಟ್ಟಿನ ಬಗ್ಗೆಯೇ ಅವಳಿಗೆ ವಿರೋಧವಿದೆ. ಹೆಣ್ಣು ಹಡೆಯಲು ಬ್ಯಾಡ ಹೆರವರಿಗೆ ಕೊಡಬ್ಯಾಡ ಎನ್ನುವಲ್ಲಿ ಆಗಲಿ, ಹೆಣ್ಣಾಗಿ ಹುಟ್ಟುವುದಕ್ಕಿಂಗ ಮಣ್ಣಾಗಿ ಹುಟ್ಟುವುದು ಲೇಸು ಎನ್ನುವಲ್ಲಿ ಹೆಣ್ಣಿನ ಪ್ರತಿರೋಧವಿದೆ. ಬದುಕಿನಲ್ಲಿ ತಾನು ಉಂಡ ನೋವು, ನಿರಾಸೆ, ತಾತ್ಸರ ಅವಮಾನ- ಹೆಮ್ಣು ಈ ನಿಲುವಿಗೆ ಬಂದಿದ್ದಾಳೆ ಹಾಗೋ ಏಂಜಿಕೆ ತೋರಿದರೆ ಅಂಜುವ ಮಗಳಲ್ಲ ಎನ್ನು ಮೂಲಕ ತನ್ನಲ್ಲಿನ ಎದೆಗಾರಿಕೆ ಆತ್ಮವಿಶ್ವಾಸವನ್ನು ತೋರಿರುವುದನ್ನು ಕಾಣುತ್ತೇವೆ. ಒಪ್ಪದ ವಿವಾಹ ಹಾಗೂ ಬಾಲ್ಯವಿವಾಹದ ವಿರುದ್ದ ಪ್ರತಿಭಟಿರುವುದನ್ನು ತ್ರಿಪದಿಗಳಲ್ಲಿ ಕಾಣುತ್ತೇವೆ ಒಲ್ಲದ ಗಂಡನ್ನು ಮದುವೆಯಾಗಬೇಕಾದ ಸಂರ್ಭದಲ್ಲಿ ಅಸಹಾಯಕಳಾದ ಹೆಣ್ಣೊಬ್ಬಳು ತನ್ನ ಮನದೊಳಗೆ ಶಪಿಸುವ ಮೂಲಕ ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾಳೆ. ಚಪ್ಪರ ಬೀಳಲಿ ಹಪ್ಪಳ ಮುರಿಯಲಿ.... ಮದುಮಗ ಕಾಳಿಂಗ ಮಡಿಯಲಿ ಎಂದು ಶಪಿ'ರುವುದನ್ನು ಕಾಣಬಹುದು. ಹೀಗೆ ವರ್ಣ ತಾರತಮ್ಯದ ವಿರುದ್ದ ಮಖ್ಯವಾಗಿ ಸಮಾದಲ್ಲಿ ಲಿಂಗತಾರತಮ್ಮಯ, ಜಾತಿ , ವರ್ಣ ತಾರತಮ್ಯ ಪರಸ್ತ್ರೀಯೋಡನೆ ಸಂಬಂಧ ,ಸಮಾಜದಲ್ಲಿ ವೇಶ್ಯಾವಾಟಿಕೆ ವಿರೋಧ ಅವಳ ಧ್ವನಿ ಇದೆ.ಜನಪದ ಸಾಹಿತ್ಯವು ಹೆಣ್ಣು ಮಕ್ಕಳ ಸ್ಥಿತಿಯನ್ನು ಮಾತ್ರ ಬಿಂಬಿಸಿಲ್ಲ ಅವಳ ಸ್ಥಾನಮಾನದ ಮೌಲ್ಯಗಳ ಬಗ್ಗೆ ಪರಿಶೀಲಿಸುವ ಕಡೆ ಕೂಡ ಒತ್ತದು ನೀಡಿದೆ. ಮಹಿಳಾ ಸ್ವಾತಂತ್ರ್ಯ, ಸಮಾನತೆ ಎಂಬುದು ಅವಳ ಜೀವನದಲ್ಲಿ ಮುಖ್ಯ ಎಂಬುದನ್ನು ಈ ಸಾಹಿತ್ಯವು ತಿಳಿಸಿಕೊಟ್ಟಿದೆ.

ಪರಾಮರ್ಶನ ಕೃತಿಗಳು

೧. ಪರಮಶಿವಯ್ಯ ಜಿ. ಶಂ. (1970). ಕನ್ನಡ ಜನಪದ ಕಥೆಗಳು. ಸಾಗರ ಪ್ರಕಾಶನ. ಬೆಂಗಳೂರು.

ISBN Number : 978-93-342-6884-3

೨. ರಮೇಶ್ ಸ. ಚಿ. (2011) ದಕ್ಷಿಣ ಭಾರತೀಯ ಜನಪದ ಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

೩. ರಾಮಕೃಷ್ಣಯ್ಯ ಎಂ. (2021). ಪಡವಣಗೆರೆ ಗ್ರಾಮದ ಜನಪದ ಕಥೆಗಳು. ಎಸ್. ಎಲ್. ಎನ್. ಪ್ರಕಾಶನ. ಬೆಂಗಳೂರು.

೪. ಡಾ. ಎಸ್. ಚಂದ್ರಶೇಖರ್ 2012, ರ್ನ್ನಾಟಕದ ಜನಪದ ಗೀತೆಗಳು, ಹುಬ್ಬಳ್ಳಿ ಪ್ರಕಾಶನ

೫. ಶ್ರೀನಿವಾಸ ಮರ್ತಿ, ಎನ್. 2009, ಕನ್ನಡ ಜನಪದ ಗೀತೆಗಳಲ್ಲಿ ಮಹಿಳಾ ಪಾತ್ರಗಳ ವಿಶ್ಲೇಷಣೆ, ಮೈಸೂರು,ಇಂದಿರಾ ಗಾಂಧಿ ಪ್ರತಿಷ್ಠಾನ

 ISBN Number : 978-93-342-6884-3

ನಿರಂಜನ ಅವರ ಕಾದಂಬರಿಗಳಲ್ಲಿ ಸಾಮಾಜಿಕ ಸಮಾನತೆ

ಸಂಶೋಧನಾರ್ಥಿ
ಅರುಣ.ಎಸ್
ಶ್ರೀನಿವಾಸ ವಿಶ್ವವಿದ್ಯಾಲಯ,ಮಂಗಳೂರು
ಸಹಾಯಕ ಪ್ರಾಧ್ಯಾಪಕರು
ಮೌಂಟ್ ಕಾರ್ಮೆಲ್ ಕಾಲೇಜು
ಬೆಂಗಳೂರು

ಮಾರ್ಗದರ್ಶಕರು
ಡಾ. ರಾಜೇಶ್ ಬೆಜ್ಜಂಗಳ
ಶ್ರೀನಿವಾಸ ವಿಶ್ವವಿದ್ಯಾಲಯ,ಮಂಗಳೂರು

ಆಧುನಿಕ ಸಾಹಿತ್ಯ ಎಂದು ಕರೆಯುವ ಸಾಹಿತ್ಯ ಸೃಷ್ಟಿ ಕಳೆದ ಸುಮಾರು ಎಂಬತ್ತು ವರ್ಷಗಳದ್ದು. ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯ ಬಡಕಲಾಗಿಯೇ ಉಳಿದಿತ್ತು. ಇದಕ್ಕೆ ಹಲವಾರು ಕಾರಣಗಳನ್ನು ಹೇಳಬಹುದಾದರೂ, ಕವಿಗಳು ರಾಜಾಶ್ರಯವನ್ನೂ ಪಡೆದಿದ್ದೂ ಹಾಗೂ ಪಂಡಿತ ವರ್ಗವನ್ನು ಮೆಚ್ಚಿಸಲು ಬರೆಯಬೇಕಾದದ್ದು ಮುಖ್ಯ ಕಾರಣ. ಸಾಹಿತ್ಯ ರಚನೆ ನಿಂತೇ ಹೋಯಿತು ಎಂದೂ ಯಾವ ಕಾಲದಲ್ಲಿಯೂ ಹೇಳುವಂತಿಲ್ಲ. ಆದರೆ ಈ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯ ಬಹು ಮಟ್ಟಿಗೆ ಮನೋಭಾವದಲ್ಲಿ ಧಾರ್ಮಿಕವಾದದ್ದು. ಉದ್ದೇಶದಲ್ಲಿ ನೀತಿಬೋಧಕವಾದದ್ದು, ರೂಪದಲ್ಲಿ ಸಾಂಪ್ರದಾಯಿಕವಾದದ್ದು.

ಸಾಹಿತ್ಯದಲ್ಲಿ ಮನುಷ್ಯ-ದೇವರ ಸಂಬಂಧವಲ್ಲದೆ ಮನುಷ್ಯನ ಇತರ ಸಂಬಂಧಗಳು, ಮನುಷ್ಯನ ಭಾವನೆಗಳು, ಆಸೆಗಳು, ಕನಸುಗಳು ಎಲ್ಲ ಇದರ ವಸ್ತುವಾಗುತ್ತದೆ. ಹಾಗೂ ಸಮಾಜದಲ್ಲಿ ಮನುಷ್ಯ, ಕುಟುಂಬದಲ್ಲಿ ಮನುಷ್ಯ ಸಂಬಂಧ, ಸ್ನೇಹ, ಪ್ರೇಮ, ದ್ವೇಷ ಇವೆಲ್ಲವೂ ಸಾಹಿತ್ಯದ ವಸ್ತುವಾಗುತ್ತದೆ. ಸಾಹಿತ್ಯವು ಹೊಸದೊಂದು ಜೀವನ ಮನೋಧರ್ಮದ ದರ್ಶನವಾದದ್ದು. ಹಾಗೂ ಹೊಸದೊಂದು ಸಾಹಿತ್ಯದ ಜಗತ್ತೆ ಲಭ್ಯವಾದುದು. ಸಾಹಿತ್ಯ ಜೀವನಗಳ ಸಂಬಂಧ ಎಷ್ಟು ವ್ಯಾಪಕವಾದುದು, ನಿಕಟವಾದುದು. ಸಾಹಿತ್ಯ ಹೀಗೆ ಸಾಮಾಜಿಕ ಮತ್ತು ವ್ಯಕ್ತಿಯ ಜೀವನದ ಎಲ್ಲ ಸಂವೇದನೆಗಳಿಗೆ ಸ್ಪಂದಿಸುತ್ತದೆ.

ಸಾಮಾಜಿಕ ಪ್ರಜ್ಞೆ ಸಾಹಿತ್ಯದಲ್ಲಿ ಬಳಕೆಯಾಗುತ್ತಿರುವ ಪದ. ಸಮಾಜವಾದಿ ರಾಷ್ಟ್ರಗಳ ಸಾಹಿತ್ಯಕ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಪದ ಸಾಹಿತಿಗೆ ಇರಬೇಕಾದ ಸಾಮಾಜಿಕ ಎಚ್ಚರ, ಸಾಮಾಜಿಕ ಜವಾಬ್ದಾರಿ ಮತ್ತು ಬದ್ಧತೆಗಳನ್ನು ಸೂಚಿಸುತ್ತದೆ. ಸಾಹಿತಿಗಳಿಗೆ ಸಾಮಾಜಿಕ ಪ್ರಜ್ಞೆ ಇರಬೇಕು. ಆ ಪ್ರಜ್ಞೆ ಇಲ್ಲದವನು ಕವಿ

ISBN Number : 978-93-342-6884-3

ಅಥವಾ ಸಾಹಿತಿ ಎನ್ನಿಸಿಕೊಂಡರೂ ಉತ್ತಮ ಕವಿ ಅಥವಾ ಉತ್ತಮ ಸಾಹಿತಿ ಎನ್ನಿಸಿಕೊಳ್ಳಲಾರ. ಆದ್ದರಿಂದ ಕವಿಗೆ ಸಮಕಾಲೀನವಾದ ಸಾಮಾಜಿಕ ಹೊಣೆಗಾರಿಕೆ ಇರಬೇಕಾದುದು ಅಗತ್ಯ.

ತತ್ವಜ್ಞಾನಿ ಅರಿಸ್ಟಾಟಲ್ ಹೇಳುವಂತೆ ಮಾನವ ಒಬ್ಬ ಸಂಘಜೀವಿ. ಕವಿಯೂ ಒಬ್ಬ ಸಮಾಜ ಜೀವಿ. ಹಾಗೂ ಜವಾಬ್ದಾರಿಯುತ ವ್ಯಕ್ತಿಯಾಗಿದ್ದು, ಸಮಾಜದಲ್ಲಿ ಅವನೂ ಇತರರಂತೆ ಬದುಕುತ್ತಾನೆ. ಅವನಿಗೆ ಆಗುವ ಅನುಭವಗಳೂ ಇತರ ಎಲ್ಲರಿಗೂ ಆಗುವ ಅನುಭವಗಳೇ ಆಗಿವೆ. ಸಮಾಜದ ಒಳಿತು-ಕೆಡುಕುಗಳನ್ನು, ನೋವು-ನಲಿವು, ಸುಖ-ದುಃಖ, ಆಸೆ-ನಿರಾಸೆ, ಅನ್ಯಾಯ ಇತ್ಯಾದಿಗಳನ್ನು ಇತರರಂತೆಯೇ ಕಂಡು ಅನುಭವಿಸುತ್ತಾನೆ. ಕವಿಯು ತನ್ನಲ್ಲಿರುವ ವಿಶಿಷ್ಟ ಶಕ್ತಿಯಿಂಲೋ ಅಥವಾ ಶಿಕ್ಷಣದಿಂದಲೋ ತನಗೆ ಅನ್ನಿಸಿದ್ದನ್ನು ಭಾಷೆಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಲ್ಲ.

ಒಂದು ಕಾಲದ ಸಮಾಜದ ಹೊರಜೀವನದ ವಿವರಗಳು ಎಷ್ಟು ಬಂದಿವೆ ಎಂಬುದಕ್ಕಿಂತ ಆ ಕಾಲದಲ್ಲಿ ಕೃತಿ ಹೇಗೆ ಪ್ರತಿನಿಧಿತವಾಗಿದೆ. ಎಂಬುದರ ದೃಷ್ಟಿಯಿಂದ ಪಂಪ, ರನ್ನ ಅತ್ಯಂತ ಗಮನಾರ್ಹರಾಗುತ್ತಾರೆ. ಕವಿ ಮೂಲತಃ ಸಾಮಾಜಿಕ ಜೀವಿ. ಅವನಲ್ಲಿ ಕಾವ್ಯಪ್ರಜ್ಞೆ ಎಷ್ಟೇ ಪ್ರಖರವಾಗಿದ್ದರೂ ಸಾಮಾಜಿಕ ಪ್ರಜ್ಞೆ ಅವನ ಕೃತಿಯಲ್ಲಿ ಕೆಲಮಟ್ಟಿಗಾದರೂ ಇಣುಕುವುದು ಸ್ವಾಭಾವಿಕ. ಸಾಮಾಜಿಕ ಪ್ರಜ್ಞೆಯನ್ನು ಕವಿಯು ತನ್ನ ಸಮಕಾಲೀನ ಜನಜೀವನವನ್ನು ಹೇಗೆ ಚಿತ್ರಿಸಿದ್ದಾನೆ. ಸಾಮಾಜಿಕ ಮೌಲ್ಯಗಳು ನಿತ್ಯಜೀವನದ ವಿವರ ಇವೆಲ್ಲವನ್ನೂ ಚರ್ಚಿಸಲಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಪ್ರಾಚೀನ ಇತಿಹಾಸವಿದ್ದರೂ ಆಧುನಿಕ ಸಾಹಿತ್ಯದ ಉಗಮಕ್ಕೆ ಪಾಶ್ಚಾತ್ಯ ಸಾಹಿತ್ಯವೇ ಮುಖ್ಯ ಪ್ರೇರಣೆಯಾಗಿದೆ. ಅದರಲ್ಲೂ ಆಧುನಿಕತೆ ಕನ್ನಡದಲ್ಲಿ ಕಾವ್ಯಕ್ಕಿಂತಲೂ ಮೊದಲು ಕಾದಂಬರಿಯಲ್ಲಿ ಕಾಣಿಸಿಕೊಂಡಿತೆನ್ನುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಕಾದಂಬರಿ ಹೊರಗಿನಿಂದ ಬಂದ ಪ್ರಕಾರವಾದರೂ ಇದನ್ನು ಕನ್ನಡದ ಲೇಖಕರು ಸ್ಥಳೀಯ ಜೀವನದ ಚಿತ್ರಣಕ್ಕೆ ಮಾಧ್ಯಮವಾಗಿಸಿಕೊಂಡರು.

ಸಾಮಾಜಿಕ ಪ್ರಜ್ಞೆ ಎಂಬುದು ಸಾಹಿತ್ಯ ವಿಮರ್ಶೆಯಲ್ಲಿ ಬಳಕೆಯಾಗುತ್ತಿರುವ ಒಂದು ಪದವಾಗಿದ್ದು, ಸಮಾಜವಾದಿ ರಾಷ್ಟ್ರಗಳ ಸಾಹಿತ್ಯಿಕ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಪದ ಸಾಹಿತಿಗೆ ಇರಬೇಕಾದ ಸಾಮಾಜಿಕ ಎಚ್ಚರ, ಸಾಮಾಜಿಕ ಜವಾಬ್ದಾರಿಗಳನ್ನು ಸೂಚಿಸುತ್ತದೆ. ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯೂ ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವುದರಿಂದ ಮತ್ತು ತನ್ನ

ISBN Number : 978-93-342-6884-3

ಸಮಾಜದೊಂದಿಗೆ, ಹಾಗೂ ತನ್ನ ಸಮಕಾಲೀನ ಸಮಾಜದ ಬಗ್ಗೆ ಮತ್ತು ಸಾಮಾಜಿಕ ಮಾಧ್ಯಮವಾದ ಭಾಷೆಯ ಬಗ್ಗೆ ವಿಶೇಷವಾದ ರೀತಿಯ ಎಚ್ಚರವನ್ನು ತಾಳುತ್ತಾನೆ.

ಕವಿಯಾದವನು ತನ್ನ ಬದುಕಿನ ಸುತ್ತಣ ಪರಿಸರದ ಸಾಮಾಜಿಕ ಸಂಗತಿಗಳನ್ನು ಅಂದಿನ ಸಮಾಜವನ್ನು ಒಳಗೊಳ್ಳುವ ಮತ್ತು ಅದನ್ನೂ ಮೀರಿದ ಸಮಗ್ರ ಬದುಕು ಮುಖ್ಯ. ಸಾಮಾಜಿಕ ಪ್ರಜ್ಞೆಯು ಸಮಾಜದಲ್ಲಿರುವ ಪ್ರತಿಯೊಂದು ಸಮಸ್ಯೆಗಳಿಗೆ ಪರಿಹಾರವನ್ನು ಸದಾ ಹುಡುಕುತ್ತಲೇ ಇರುತ್ತದೆ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡುವ ಸಾಮಾಜಿಕ ಪ್ರಜ್ಞೆಯ ನಿಲುವು ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಸಫಲತೆಯನ್ನು ಕಾಣುತ್ತದೆ. ಪರಸ್ಪರ ಸಹಕಾರದಿಂದ ಸಹವಾಸ ಮಾಡುವುದೇ ಮಾನವೀಯ ಸಂಬಂಧಗಳ ನಿಜವಾದ ಅರ್ಥ. ಸಾಮಾಜಿಕ ಪ್ರಜ್ಞೆಯ ಮೂಲ ಉದ್ದೇಶವೇ ಸಾಮಾಜಿಕ ಬದಲಾವಣೆಯನ್ನು ಬಯಸುವುದು. ಸಂಪ್ರದಾಯದ ಜಿಡ್ಡುಗಟ್ಟಿರುವ ವಾತಾವರಣದಿಂದ ಹೊಸ ಬೆಳಕಿನ ಹಾದಿಯಲ್ಲಿ ಸಾಮಾಜಿಕ ಸಮಾನತೆ, ಹೊಂದಾಣಿಕೆಯೊಂದಿಗೆ ಸಹಬಾಳ್ವೆ ನಡೆಸುವುದಾಗಿರುತ್ತದೆ.

ಪ್ರಗತಿಶೀಲ ಲೇಖಕರಲ್ಲಿ ನಿರಂಜನರು ಹೆಚ್ಚು ಬದ್ಧತೆಯುಳ್ಳ ಲೇಖಕರಾಗಿದ್ದು, ಅವರ ಜೀವನ ಅವರು ನಂಬಿದ ಸಿದ್ಧಾಂತಗಳಲ್ಲಿಯೇ ಹಾದು ಬಂದಿದೆ. ಸಾಹಿತ್ಯವು ಸಮಾಜದ ಉನ್ನತಿಗಾಗಿ ಕೆಲಸ ಮಾಡಬೇಕೆಂದು ಅವರು ಒಪ್ಪಿದ ಮೌಲ್ಯವಾಗಿತ್ತು. ನಿರಂಜನರು ಭಿನ್ನ ಬರಹಗಾರರಾಗಿದ್ದು, ಅವರ ಬದುಕು ಹಾಗೂ ಅವರ ಬದುಕಿನ ವಾಸ್ತವ ಅನುಭವಗಳೇ ಅವರ ಸಾಹಿತ್ಯದ ಬುನಾದಿಯಾಗಿತ್ತು. ಅವರ ಬರವಣಿಗೆ ವಿಶಿಷ್ಟವಾಗಿದ್ದು, ಸಾಮಾಜಿಕ ಸತ್ಯವನ್ನು ಒಳಗಣ್ಣಿನಿಂದ ನೋಡುವ ಪ್ರಾಮಾಣಿಕತೆ ಅವರಲ್ಲಿತ್ತು. ಸಾಹಿತ್ಯ ಒಂದು ಸಾಮಾಜಿಕ ಸಂಸ್ಥೆಯಾಗಿದ್ದು, ಪ್ರಗತಿಶೀಲ ಸಾಹಿತ್ಯವು ಸಾಮಾಜಿಕ ಪ್ರಜ್ಞೆಗೆ ಹೆಚ್ಚು ಮಹತ್ವ ನೀಡಿದೆ. ಸಾಮಾಜಿಕತೆ ಎಂಬುದು ಜನ ಸಾಮಾನ್ಯರ ಬದುಕಿನ ಪ್ರಜ್ಞೆಯೇ ಆಗಿದೆ. ಪ್ರಜ್ಞೆ ಅರಿವಿನ ಸಂವೇದನಾ ರೂಪ. ಅನುಭವಗಳು ಸಾಮಾನ್ಯವಾದರೂ ಅದರ ಅರಿವು ಎಲ್ಲರಿಗೂ ಮೂಡುವುದಿಲ್ಲ.

ನಿರಂಜನರ ಕಾದಂಬರಿಗಳ ಪಾತ್ರಗಳಲ್ಲಿ ಬರುವ ಮಹಿಳೆಯರು ವಿವಿಧ ಬಗೆಯ ಸಮಸ್ಯೆಗಳನ್ನು ಎದುರಿಸಿದ್ದು, ಇವರು ವಾಸ್ತವವಾದಿ ನೆಲೆಯಿಂದಲೇ ರೂಪಿಸಿದ್ದಾರೆ. 'ಹೆಣ್ಣು ಅಡುಗೆ ಮನೆಗೆ ಸೀಮಿತ' ಎಂಬ ಭ್ರಮೆಯನ್ನು ಹೋಗಲಾಡಿಸಿ, ಹೆಣ್ಣು ಕೂಡ ಗಂಡಿನಂತೆ ಹೊರಗಡೆ ದುಡಿಯಲು ಸಮರ್ಥಳೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರ 'ಸೌಭಾಗ್ಯ' ಕಾದಂಬರಿ ಇದಕ್ಕೆ ಒಳ್ಳೆಯ ಉದಾಹರಣೆಯಾಗಿದ್ದು, ಮಹಿಳಾ ಸಮಾನತೆಯನ್ನು ಈ ಕಾದಂಬರಿ ಮೂಲಕ ಎತ್ತಿ ಹಿಡಿದಿದ್ದಾರೆ. 'ಬನಶಂಕರಿ' ಕಾದಂಬರಿಯಲ್ಲಿ 'ಬನಶಂಕರಿ', 'ಅಭಯ' ಕಾದಂಬರಿಯ 'ತುಂಗಮ್ಮ', 'ಸ್ಮರಣೆಯೊಂದೇ ಸಾಲದೆ' ಕಾದಂಬರಿಯ 'ಮೀನಾಕ್ಷಿ'. ಹೀಗೆ

ISBN Number : 978-93-342-6884-3

ಮುಂತಾದ ಮಹಿಳಾ ಪಾತ್ರಗಳು ಲಿಂಗಾಧಾರಿತ ನೆಲೆಯಿಂದ ಹೊರಡುವ ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಂಡರೂ ಇವರೂ ಪುರುಷರ ವಿರುದ್ಧ ದ್ವೇಷ ಸಾಧಿಸದೆ ಅಸಮಾನತೆಯ ವ್ಯವಸ್ಥೆ ವಿರುದ್ಧ ಆಲೋಚಿಸುತ್ತಾರೆ.

ಮಹಿಳೆ ಅಭದ್ರಳಾಗಿ, ಬಾಲ್ಯವಿವಾಹ, ವೈಧವ್ಯ, ವರದಕ್ಷಿಣೆ ಈ ರೀತಿಯ ದಾರುಣ ಬದುಕನ್ನು ಸಾಗಿಸುತ್ತಿದ್ದುದರ ಕಡೆಗೆ ಗಮನಹರಿಸಿ, ದೇವರು, ಧರ್ಮದ ಹೆಸರಿನಲ್ಲಿ ಸ್ತ್ರೀಗೆ ಆಗುತ್ತಿರುವ ಶೋಷಣೆಯನ್ನು ಖಂಡಿಸಿ "ಸ್ತ್ರೀಯ ಪರಿಸ್ಥಿತಿ ಭಾರತದಲ್ಲಿ ಸುಧಾರಿಸಬೇಕಾದರೆ ಮೊದಲು ಪುರುಷರ ಮನೋಭಾವನೆ ಬದಲಾಗಬೇಕು. ನಿರಕ್ಷರತೆ ನಿರ್ಮೂಲನವಾಗಬೇಕು. ಸ್ತ್ರೀಯನ್ನು ಮನುಷ್ಯಳಂತೆ ನೋಡುವ ಪರಿಪಾಠ ನಮ್ಮಲ್ಲಿ ಬರಬೇಕು. ಆಕೆಯನ್ನು ಹೀನ ಜಂತುವೆಂದು ಭಾವಿಸುವುದು ಬೇಡ. ಸ್ತ್ರೀಯನ್ನು ಸಮಾನ ದೃಷ್ಟಿಯಿಂದ ನೋಡುವ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಪ್ರಗತಿಶೀಲ ಸಾಹಿತ್ಯದಲ್ಲಿ ಮೊದಲಿನಿಂದಲೂ ತನ್ನ ಸುತ್ತಣ ಸಮಾಜದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದರ ಜೊತೆಗೆ ಸಾಮಾಜಿಕ ಕಾಳಜಿಯನ್ನು ಕಾಣಬಹುದು. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಾಮಾಜಿಕ ಪ್ರಜ್ಞೆ,ಜಾಗೃತವಾಗುತ್ತ ಬಂದಿದೆ. ಎಂದು ಜಿ.ಎಸ್.ಎಸ್. ಅವರು ಅಭಿಪ್ರಾಯ ಪಡುತ್ತಾರೆ. ಸಾಮಾಜಿಕ ಪ್ರಗತಿಯ ಉದ್ದೇಶದಿಂದ ಮಾತ್ರ ಪ್ರಗತಿಶೀಲ ಸಾಹಿತ್ಯವು ಕಂಡುಬರುತ್ತದೆ.

ನಿರಂಜನರ ಕಾದಂಬರಿಗಳಲ್ಲಿ ವರ್ಗ ಸಂಘರ್ಷ, ಮಧ್ಯಮ ವರ್ಗದ ಜೀವನ ಚಿತ್ರಣ, ನೋವಿನ ನೆಲೆಗಳು, ಚರಿತ್ರೆ ಮತ್ತು ಸಮಕಾಲೀನತೆ ಮನುಷ್ಯ ಸಾಧ್ಯತೆಗಳು ಹೀಗೆ ಹತ್ತು ಹಲವು ಅಂಶಗಳನ್ನು ಕಾಣಬಹುದು. ಅವುಗಳಲ್ಲೆಲ್ಲ ಬಹುಮುಖ್ಯವಾಗಿ ಗಮನಿಸಬಹುದಾದ ಅಂಶ ಮಹಿಳಾ ಸಮಸ್ಯೆಗಳು ಅವರ ಕಾದಂಬರಿಗಳಲ್ಲಿ ಲಿಂಗಾಧಾರಿತ ಅಸಮಾನತೆಯ ವಿರುದ್ಧ ಅನೇಕ ಮಹಿಳಾ ಪಾತ್ರಗಳು ದನಿಯೆತ್ತಿವೆ. ಎಂದು ಪರಿಗಣಿಸಬಹುದು.

'ಬನಶಂಕರಿ' ನಿರಂಜನರ ಒಂದು ಶ್ರೇಷ್ಠ ಸಾಮಾಜಿಕ ಕಾದಂಬರಿಯಾಗಿದ್ದು, ಬಾಲ ವಿಧವೆಯ ಜೀವನದ ದಾರುಣತೆಯನ್ನು ಚಿತ್ರಿಸುತ್ತಾ ಸಾಮಾಜಿಕ ಸಮಸ್ಯೆಯೊಂದರ ಮೇಲೆ ಬೆಳಕು ಚೆಲ್ಲುವ ಕಾದಂಬರಿಯಾಗಿದೆ. 'ಅಭಯ' ಕಾದಂಬರಿಯಲ್ಲಿ ನಿರಂಜನರು ನಡೆಸಿದ ಸಂಘರ್ಷ ಮಾನವೀಯತೆಯನ್ನು ಪ್ರತಿಪಾದಿಸಿದ್ದಾರೆ. ಅನೇಕ ಮಹಿಳೆಯರು ಆಘಾತಕ್ಕೊಳಗಾದ ಅನೇಕರು 'ಅಭಯ'ದ ಆಶ್ರಯ ಪಡೆದವರಾಗಿದ್ದಾರೆ. ಇವರ ಕಾದಂಬರಿಯ ಎಲ್ಲಾ ಪಾತ್ರಗಳು ಪರಂಪರಾಗತವಾದ ಪ್ರವಾಹದಲ್ಲಿಯೇ ತೇಲಿಕೊಂಡು ಬಂದಿದೆ. ಇವರ ಬದುಕೇ ಒಂದು ಹೋರಾಟದಂತಿದೆ. ಸಹನೆಗೆ ಇನ್ನೊಂದು ಹೆಸರೇ ಹೆಣ್ಣು. ಸ್ತ್ರೀ ತನ್ನ ವೈಯಕ್ತಿಕ ಸ್ವಾರ್ಥವನ್ನು ಎಂದೂ ಬಯಸಿದವಳಲ್ಲ ಎಂಬ ನೆಲೆಯಲ್ಲಿ ಚಿತ್ರಣಗೊಂಡಿದೆ.

ISBN Number : 978-93-342-6884-3

ಹೀಗೆ ನಿರಂಜನರ ಕಾದಂಬರಿಗಳಲ್ಲಿ ಮಹಿಳೆ ವಿವಿಧ ಮುಖಗಳಲ್ಲಿ, ವಿಭಿನ್ನ ರೂಪಗಳಲ್ಲಿ ಕಾಣಿಸಿಕೊಂಡಿದ್ದಾಳೆ. "ಹೆಣ್ಣನ್ನು ವರ್ಣನಾರ್ಹ ವಸ್ತುವಾಗಿ ಇಟ್ಟುಕೊಂಡು ವೈಭವಿಕರಿಸುವುದಿದೆಯಲ್ಲ ಇದು ನಮ್ಮ ಪ್ರಗತಿಗೆ ಮಾರಕ ಎಂದಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿರುವ ನೀತಿ, ಶಿಕ್ಷಣ, ಕಾನೂನು, ಆಡಳಿತ ಎಲ್ಲವೂ ಹೆಣ್ಣಿಗೂ ಇರಬೇಕೆಂದು ಸ್ಪಷ್ಟಪಡಿಸಿದ್ದಾರೆ.

ಸಮಾಜ ವ್ಯವಸ್ಥೆ ವಿಧವೆಯನ್ನು ನೋಡುವ ದೃಷ್ಟಿಕೋನವೆಂತಹುದು? ವೇಶ್ಯೆಯನ್ನು ಕಾಣುವ ಪರಿಯೆಂತಹುದು? ಶ್ರೀಮಂತ ಹುಡುಗಿಯರ ವಿಷಯಲಂಪಟತನ ಹೇಗಿರುತ್ತದೆ. ಬಡಹುಡುಗಿಯರ ಬದುಕಿನ ಬವಣೆಗಳೇನು? ಲಿಂಗಾಧಾರಿತ ವ್ಯವಸ್ಥೆಯಲ್ಲಿ ಮಹಿಳೆ ಎದುರಿಸಬೇಕಾದ ಸಮಸ್ಯೆಗಳಾವುವು? ಇವೆಲ್ಲವುಗಳಿಗೆ ಮಾನವೀಯ ಅಂತಃಕರಣದ ಸೆಲೆಯ ಮೂಲಕ ಅನೇಕ ಪರಿಹಾರಗಳನ್ನು ಕಂಡುಕೊಂಡಿದ್ದಾರೆ. ಸಾಮಾಜಿಕ ಸಮಸ್ಯೆಗಳಿಗೆ ಪೂರಕವಾಗುವಂತೆ ಅನೇಕ ಆರ್ಥಿಕ ಸಮಸ್ಯೆಗಳನ್ನೂ ಕೂಡಾ ಕಾಣುತ್ತೇವೆ. ಸಮಾಜದ ವ್ಯವಸ್ಥೆಯನ್ನು ಅವಲೋಕಿಸಿದಾಗ ಅಲ್ಲಿ ನಾವು ಕಾಣುವಂತಹ ವಾಸ್ತವಿಕವಾದ ಸ್ಥಿತಿ ಏನೇ ಇದ್ದರೂ ಅದು ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ.

ಭಾರತೀಯ ಸನಾತನ ಪರಂಪರೆಯಿಂದಲೂ ಸಮಾಜದಲ್ಲಿ ಮೇಲು-ಕೀಳು ಎಂಬ ಬೇಧ ಭಾವದ ಆಚರಣೆಗಳು ಪರಂಪರಾಗತವಾಗಿ ಆಚರಣೆಗೆ ಬಂದಿವೆ. ಇದು ಸಮಾಜದಲ್ಲಿನ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ಇದರಿಂದ ಸಾಮಾನ್ಯ ವ್ಯಕ್ತಿಯೊಬ್ಬ ಸಮಾಜದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ಬರಲು ತೊಂದರೆಯಾಗುತ್ತದೆ. ಇದರಿಂದ ಸಾಮಾನ್ಯ ವ್ಯಕ್ತಿ ಸ್ವಾಭಿಮಾನದಿಂದ ಬದುಕಲು ಅಡೆತಡೆಯಾಗುತ್ತದೆ. ಇಂತಹ ವಿಚಾರಗಳನ್ನು ನಿರಂಜನರ ಕಾದಂಬರಿಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ.

'ವಿಮೋಚನೆ' ಕಾದಂಬರಿಯಲ್ಲಿ ನಿರುದ್ಯೋಗದಿಂದಾದ ಅನಾನುಕೂಲತೆಗಳ ಕುರಿತಾಗಿ ನೋಡಬಹುದು. ನಿರುದ್ಯೋಗಇಂದಿನ ಯುವಕರ ಪ್ರಮುಖ ಸಮಸ್ಯೆಯಾದ ನಿರುದ್ಯೋಗದಿಂದ ಅವರು ಜೀವನದಲ್ಲಿ ಅನುಭವಿಸುವ ಮಾನಸಿಕ ನೋವು,ಮತ್ತು ತುಮುಲಗಳನ್ನು ಇಲ್ಲಿ ಕಾಣಬಹುದು. ಹಾಗೂ ಮಾನವನ ಉಗಮದೊಂದಿಗೆ ಮಾನವನ ಬೆನ್ನು ಹತ್ತಿದ ಪ್ರಮುಖ ಸಮಸ್ಯೆಗಳಲ್ಲಿ ಹಸಿವು ಒಂದು. ಇದು ವ್ಯಕ್ತಿಯನ್ನು ಯಾವ ಮಟ್ಟಕ್ಕೆ ಕೊಂಡೊಯ್ಯುತ್ತದೆ ಎಂದರೆ ಅವನು ತನ್ನ ಹಸಿವನ್ನು ತೀರಿಸಿಕೊಳ್ಳಲುಸುಳ್ಳನಾಗಿ, ಕಳ್ಳನಾಗಿ ಕೆಲಸ ಮಾಡುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಮನುಷ್ಯನಿಗೆ ಹಸಿವು ಎಂತಹ ಘೋರ ಸ್ಥಿತಿಯನ್ನು ತಂದೊಡ್ಡುತ್ತದೆ ಎಂಬುದು ಇಲ್ಲಿ ಗಮನಾರ್ಹವಾಗಿದೆ. ಹಾಗೆಯೇ ಬಂಡವಾಳಶಾಹಿ ವ್ವವಸ್ಥೆಯಲ್ಲಿ ಕಾರ್ಮಿಕರು ಮತ್ತು ಮಾಲೀಕರನಡುವೆ ಸಂಘರ್ಷ ಹಾಗೂ ನಗರೀಕರಣದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ISBN Number : 978-93-342-6884-3

ಹೀಗೆ ನಿರಂಜನರು ಸಮಾಜದ ಮಧ್ಯಮ ವರ್ಗದ ಜನಜೀವನವನ್ನು ಚಿತ್ರಿಸುವ ಕಾದಂಬರಿಗಳು, ಜೀವನದ ಏರಿಳಿತಗಳು, ತಳಮಳಗಳು, ಸಾಮಾಜಿಕ ಅಂತರಗಳು, ಸಮಾಜದ ವಿಷಮತೆ, ಆರ್ಥಿಕ ಅಸಮತೆ, ವಿದ್ಯಾಭ್ಯಾಸದ ಸಾರ್ವತ್ರಿಕತೆ ಮೇಲು-ಕೀಳು ಗಳನ್ನು ತೊಡೆದು ಹಾಕಿ, ಸಮಾನ ಅವಕಾಶ ಕಲ್ಪನೆ ಇದನ್ನು ಒಟ್ಟಾಗಿ ಕಂಡುಕೊಳ್ಳುವ ಶಕ್ತಿ ಐತಿಹಾಸಿಕ ಪ್ರಜ್ಞೆ ಅಂತರ್ ನಿರೀಕ್ಷಣ ದೃಷ್ಟಿ ಇವೆಲ್ಲವನ್ನೂ ನಿರಂಜನರ ಕಾದಂಬರಿಗಳಲ್ಲಿ ಸ್ಮರಿಸಿಕೊಳ್ಳಬಹುದು.

ಪರಾಮರ್ಶನ ಗ್ರಂಥಗಳು

- ಮಹಿಳೆ ಸಮಾಜ ಮತ್ತು ಸಂಸ್ಕೃತಿ -ಇಂದಿರಾ,ಆರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨
- ಕನ್ನಡ ಮೊದಲ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ ಕಥನ, -ನಾಗರಾಜ ಡಿ.ಆರ್. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು ೧೯೯೬
- ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು -ನಾಗರಾಜ ಕೆ.ಜಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೦
- ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ -ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦

ISBN Number : 978-93-342-6884-3

ಜೀವನ ಮೌಲ್ಯವುಳ್ಳ ವಚನಗಳು

ತೇಜಸ್ವಿನಿ.ಎಸ್.ಹೆಚ್.

ಶ್ರೀನಿವಾಸ ವಿಶ್ವ ವಿದ್ಯಾಲಯ

ಮಂಗಳೂರು-೦೧

ಪ್ರಸ್ತಾವನೆ:-

ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಹಾಗೂ ಕ್ರಾಂತಿಕಾರಕ ಯುಗವೆಂದರೆ ಕ್ರಿ.ಶ ೧೨ನೇ ಶತಮಾನ ಈ ಕಾಲಘಟ್ಟದಲ್ಲಿ ಆದ ಕ್ರಾಂತಿಯು ಕೇವಲ ಸಾಮಾಜಿಕ ಧಾರ್ಮಿಕ ಮತ್ತು ರಾಜಕೀಯ ವಲಯಕ್ಕೆ ಸೀಮಿತವಾಗಿರದೆ ಸಾಹಿತ್ಯವಲಯಕ್ಕೂ ಮತ್ತು ಜನರ ಜೀವನ ಮೌಲ್ಯಗಳ ವಚನಗಳು ರಚನೆಯಾದವು ೧೨ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಪ್ರತಿಯೊಂದು ಮೌಲ್ಯವು ಎಲ್ಲಾ ಕಾಲದ ಬದುಕಿಗೂ ಚೈತನ್ಯಬರಿತ ಸಾರವನ್ನು ತಿಳಿಹೇಳುವುದಾಗಿದೆ ೧೨ನೇ ಶತಮಾನದ ಬದುಕಿನ ಸೂತ್ರಗಳ ಮೂಲಕ ವರ್ತಮಾನದಲ್ಲಿನ ಮನಸ್ಸು ಜೀವನ ಮೌಲ್ಯಗಳು ತಿಳಿದುಕೊಳ್ಳುವುದು ಅದ್ಯಯನದ ಉದ್ದೇಶ.

ವಚನಕಾರರು ಜನರ ಆಡುನುಡಿಗಡ ಹತ್ತಿರವಾಗಿ ಭಾಷೆಯನ್ನ ತಮ್ಮ ಅಭಿವ್ಯಕ್ತಿ ಮಾದ್ಯಮವಾಗಿ ಬಳಸಿಕೊಂಡು ಜನಮನವನ್ನ ಸಮೀಪಿಸಿ ಪಂಡಿತ ಪಾಮರರ ಸ್ವತ್ತಾಗಿದ್ದ ಸಂಸ್ಕೃತ ಭಂಡಾರವನ್ನ ಬದಿಗಿರಿಸಿ ತಮ್ಮ ಅನುಭವದ ಕಮ್ಮಟದಲ್ಲಿಯೇ ವಚನವೆಂಬ ನಾಣ್ಯವನ್ನ ಜನ ಸಾಮಾನ್ಯರಲ್ಲಿ ಚಲಾವಣೆಗೆ ತಂದರು ವಚನಕಾರರು ದೇವವಾಣಿಗೆ ಜನವಾಣಿಯಾಗುವುದು ಅಸಾದ್ಯವಾಗದ ಜನ ವಾಣಿಯನ್ನೆ ದೇವವಾಣಿಯ ಮಟ್ಟಕ್ಕೆ ಏರಿಸಿರುತ್ತಾರೆ, ವಚನ ಎಂದ ಕೂಡಲೆ ನಮಗೆ ಅಲ್ಲೊಂದು ಮುಕ್ತರೂಪ ಕಾಣಸಿಗುತ್ತದೆ ಪ್ರತೀ ವಚನಕಾರರು ಹಲವು ವಚನಗಳನ್ನ ರಚಿಸಿರುವವರಾದರೂ ಅವುಗಳಲ್ಲಿ ನೇರವಾದ ಸಂಬಂದ ಸೂತ್ರವೆಂದರೆ ವಚನವನ್ನ ಅರ್ಥಮಾಡಿಕೊಳ್ಳಲು ಮತ್ತಾವುದು ಅವಶ್ಯಕತೆ ಇಲ್ಲಾ.

ಅಧ್ಯಯನದ ಉದ್ದೇಶ:-

ಸೌಜನ್ಯದ ಕನಿಷ್ಟಅರಿವು ಮರೆಯಾಗುತ್ತಿರುವ ಈ ಕಾಲದಲ್ಲಿ ಮತ್ತೆ ನಮಗೆ ನೆನೆಪಾಗುವ ಸಾಲುಗಳೆಂದರೆ

ಏನು ಬಂದಿರಿ ಹದುಳವಿದ್ದಿರಿ ಎಂದರೆ

ನಿಮ್ಮ ಐಸಿರಿ ಹಾರಿಹೋಹುದೇ?

ಕುಳ್ಳಿರೆಂದರೆ ನಿಮ್ಮನೆಲ ಕುಳಿಹೊಹುದೇ?

ಒಡನೆ ನುಡಿದರೆ ಸಿರಿಹೊಟ್ಟೆಯುದೇ?

ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದೊಡೆ

ISBN Number : 978-93-342-6884-3

ಕೆಡವಿ ಮೂಗಕೊಯ್ಯದೇ ಮಾಬನೆ ಕೂಡಲ ಸಂಗಮದೇವಾ.
ಬಂದ ಅತಿಥಿಗಳಿಗೆ ಪ್ರೀತಿಯ ಸ್ವಾಗತ ನಗುಮುಖ ಮನತಣಿಸುವ ಎರಡು ಒಳ್ಳೆಯ
ಮಾತುಗಳೇ ನಮ್ಮ ಜೀವನದ ಉನ್ನತಿ ಎಂದು ಹೇಳಿದ್ದಾರೆ.

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟನ ನಾಗರ ಕಂಡರೆ ಕೊಲ್ಲೆಂಬರಯ್ಯ
ಹುಣ್ಣುವ ಜಂಗಮ ಬಂದರೆ ನಡೆಯೆಂಬರು
ಹುಣ್ಣದಾ ಲಿಂಗಕ್ಕೆ ಬೊನವ ಹಿಡಿಯೆಂಬರಯ್ಯಾ

ಎಂಬ ಮಾತುಗಳಲ್ಲಿ ಬಸವಣ್ಣನವರು ಜನರ ನಡವಳಿಕೆಗಳನ್ನ ವಿರೋದಿಸುತ್ತಾ ಮೌಡ್ಯ ನಡವಳಿಕೆಗಳ ವಿರೋಧ ವೈಚಾರಿಕತೆಯೇ ಮುಖ್ಯ ಎಂಬುದನ್ನ ಹೇಳಿ ವಿಚಾರಶೀಲರಾಗಬೇಕೆಂಬ ಸಂದೇಶ ರವಾನಿಸುತ್ತಾರೆ. ಮನುಷ್ಯನ ಅವನತಿಗೆ ಅರಿವಿನ ಹಾನಿಗೆ ಕೋಪಶಾಪವೆಂದು ಮನೆಯೊಳಗಣ ಕಿಚ್ಚು ಮನೆಯನ್ನು ಸುಡುವಂತೆ ಕೋಪ ನಮ್ಮನ್ನೆ ಸುಡುತ್ತದೆ ಎಂಬ ನೀತಿಯನ್ನ ಹೇಳಿದ್ದಾರೆ ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ ಹಗೆತನವನ್ನ ಬಿಟ್ಟುಬಿಡಿಯೆಂದು ಲೋಕವನ್ನು ಸಮಾದಾನ ಚಿತ್ತದತ್ತಾ ಪರಿವರ್ತನೆ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ, ನಮ್ಮಲ್ಲಿ ಎಂತಹ ಜನರೆಂದರೆ ಅವರ ಲೊಪದೋಷಗಳು
ಸಾವಿರ ಇದ್ದರು ಬೇರೆಯವರ ಅಲ್ಪದೋಷವನ್ನು ಮಹತ್ವವಾಗಿ ಚಿತ್ರಿಸಿ ಹೇಳುವವರೇ ಅದಕ್ಕೆ ಲೋಕದ ಡೋಂಕ ಏಕೆ ತಿದ್ದುವಿರಿ ನಿಮ್ಮ ತನುವ ಸಂತೈಸಿಕೊಳ್ಳಿರಿ ನಿಮ್ಮ ಮನವ ಸಂತೈಸಿಕೊಳ್ಳಿರಿ ನೆರೆಮನೆಯವರ ದು:ಖಕ್ಕೆ ಅಳುವವರ ಮೆಚ್ಚುವುದಿಲ್ಲಾ ನಮ್ಮ ಕೂಡಲ ಸಂಗಮದೇವ ಎಂದು ಬಸವಣ್ಣನವರು ಹೇಳುವಾಗ ಪ್ರಾಯಶಹ ಅವರ ಮನಸ್ಸಿನಲ್ಲಿ ಲೋಕದ ಕಡುಕಷ್ಟಗಳಿಗೆ ತಾವು ಕುರುಡರು ಆಗಬೇಕೆಂಬ ಬಾವನೆಯಿರಲಿಲ್ಲ ಸುಧಾರಣೆ ಕಾರ್ಯವನ್ನ ಕೈಗೊಳ್ಳುವ ಆದರ್ಶ ಜನರಲ್ಲಿ ಬೆಳೆಯಬೇಕಾದರೆ,
ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಅಳಿಯಲುಬೇಡ
ಇದೇ ಅಂತರಮಗ ಶುದ್ದಿ ಇದೇ ಬಹಿರಂಗ ಶುದ್ದಿ
ಇದೇ ನಮ್ಮ ಕೂಡಲಸಂಗಮದೇವನೊಲಿಯುವ ಪರಿ.

ISBN Number : 978-93-342-6884-3

ದೇವರನ್ನ ಅಂತರಂಗ ಮತ್ತು ಬಹಿರಂಗವನ್ನ ಶುದ್ದವಾಗಿಟ್ಟುಕೊಂದು ಒಲಿಸಿಕೊಳ್ಳಬೇಕು ಈ ಕ್ರಿಯೆ ಪೂರ್ಣವಾಗಬೆಕಾದರೆ ಶುದ್ದವಾದ ಜೀವನವನ್ನ ನಡೆಸುವ ಮೂಲಕ ಸಾದ್ಯವಾಗಬಹುದೇ ಹೊರತು ಕಠಿಣ ನಿಯಮಗಳಿಂದಲ್ಲಾ ಎಂದು ಹೇಳಿದ್ದಾರೆ.

ದಯವಿಲ್ಲದ ಧರ್ಮಯಾವುದಯ್ಯಾ
ದಂಯೆಯೆಬೇಕು ಸಕಲ ಪ್ರಾಣಿಗಳಲ್ಲಿ
ದಂಯೆಯೇ ಧರ್ಮದ ಮೂಲವಯ್ಯಾ

ಎಂಬ ವಚನ ಮಾನವೀಯಗುಣಗಳನ್ನ ಹೊಂದಿದೆ ಈಸಕ್ಕಿಯಾಸೆ ನಿಮಗೇಕೆ ಇಶ್ವರನೊಪ್ಪ ಎಂದು ಹೇಳುವ ಮೂಲಕ ದುರಾಸೆಯನ್ನ ಖಂಡಿಸಿ ಹಂಚಿಕೆಯ ಗುಣವನ್ನ ಆಯ್ದಕ್ಕಿ ಲಕ್ಕಮ್ಮ ಹೇಳುತ್ತಾರೆ.

ಅರಿದಗೋಣಿಯಲ್ಲೊಬ್ಬ ಕಳವೆಯ ತುಂಬಿ
ಇರುಳೆಲ್ಲಾ ನಡೆದನ ಸುಂಕಂಕಂಜಿ
ಕಳವೆಯೆಲ್ಲಾ ಹೋಗಿ ಬಿರಗೋಣಿಯುಳಿದಿತ್ತು
ಅಳಿಮನದವನ ಭಕ್ತಿ ಇಂತಾಯ್ತು ರಾಮನಾಥ

ಎಂಬ ಮಾತುಗಳು ಅಲ್ಪವನ್ನ ಉಳಿಸಲು ಹೋಗಿ ತೆರಿಗೆ ವಂಚಿಸಿ ಕಡೆಗೆ ಹಾನಿಯನ್ನು ಅನುಭವಿಸಿದ್ದನ್ನ ಕುರಿತು ಹೇಳಿದಂತಿದೆ ಕಾಯಕ ತತ್ವದ ಮೂಲಕ ಆರ್ಥಿಕ ಹಿರಿತನ ಸಾಮಾಜಿಕ ಹಿರಿತನವಾಗಿ ಕೆಲವರ ಕೈಸೇರುವುದನ್ನ ನಿರಾಕರಿಸಲಾಗಿತ್ತು ಆರ್ಥಿಕ ಸ್ವಾವಲಂಬನೆ ದುರಾಸೆಮುಕ್ತ ಪರಿಕಲ್ಪನೆ ಸಿರಿಯೆಂಬುದು ಸಂತೆಯಮಂದಿ ತನು ಮನ ಧನವ ಮೀರಿ ನಿಸ್ಸಿಮರೂಪತಾಳಿದ್ದು ಸಂಪತ್ತಿನ ಸಂಗ್ರಹಣೆ ಉಂಟುಮಾಡಬಹುದಾದ ಅಸಮತೊಲನವನ್ನ ಸರಿಪಡಿಸಲು ದಾಸೋಹದ ಪರಿಕಲಪನೆ ಮೂಡಿತ್ತು ವಚನಕಾರರು ಇಂದಿನ ಮುಂದಿನ ತಲೆಮಾರಿಗೆ ಪರಿಚಯಿಸಬೇಕಾದ ಕರ್ತವ್ಯ ನಮ್ಮ ಮೇಲಿದೆ ಕೇವಲ ಶ್ರದ್ದೆ ಭಕ್ತಿ ತೋರಿ ಜಯಂತಿಗಳನ್ನ ಆಚರಿಸಿದರೆ ಸಾಲದು ಅವರ ವಿಚಾರಗಳನ್ನ ಅರಿತು ಚರ್ಚಿಸಿ ಅವರೊಟ್ಟಿಗೆ ಸಂವಾದ ನಡೆಸಬೇಕು ಧಾರ್ಮಿಕ ಚೌಕಟ್ಟಿಗೆ ಅವರನ್ನ ಸೀಮಿತಗೊಳಿಸದೆ ಎಲ್ಲಾ ವಲಯಗಳಲ್ಲಿ ಅವರ ಚಿಂತನೆಗಳನ್ನ ಅಳವಡಿಸಿಕೊಳ್ಳಬೇಕು ಹಾಗಾಗಿ ವಚನಗಳಲ್ಲಿ ಬರುವ ಮೌಲ್ಯಗಳು ಎಂದೆಂದಿಗೂ ಪ್ರಸ್ತುತ.

ಅಧ್ಯಯನದ ವ್ಯಾಪ್ತಿ :- ೧೨ ನೇ ಶತಮಾನದಲ್ಲಿ ಬಸವಣ್ಣ ನವರ ವಚನಗಳಲ್ಲಿ ಜೀವನ ಮೌಲ್ಯಗಳ ವಿಷಯಕ್ಕೆ ಸಂಬಂದಿಸಿದಂತೆ ವಚನಗಳನ್ನ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ISBN Number : 978-93-342-6884-3

ಉಪಸಂಹಾರ: - ವಚನಗಳು ಓದಿಗೆ ಒಂದು ವಿಶಿಷ್ಟವಾದ ತಿರುವಿದೆ ಸಮಾಜಿಕ ಕಾರಣಗಳು ಇದಕ್ಕಿದೆ ಕಾಯಕವೇ ಕೈಲಾಸ, ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ ಎಂಬಂತಃ ವಿಚಾರಗಳಿವೆ ಎನ್ನ ಕಾಲೇಕಂಬ ದೇಹವೆ ದೇಗುಲ ಶಿರವೇ ಕಳಸ ಎನ್ನುವ ಮೂಲಕ ಪ್ರತೀ ಜೀವಿಯು ದೈವಿಕವಾದುದು ಆತ್ಮ ಗೌರವವೇ ಬಹುದೊಡ್ಡ ಪೂಜೆ ಎಂಬುದನ್ನ ಹೇಳಿದರು ಕಾಗೆಯೊದಗುಳಕಂಡರೆ ಕರೆಯದೇ

ತನ್ನ ಬಳಗವನ್ನ ಎನ್ನುವ ವಚನದ ಮೂಲಕ ಧರ್ಮಸಹಿಷ್ಣುತೆ ಹಂಚಿಕೊಂಡು ತಿನ್ನುವ ಕಾಗೆಯ ಮನೋಧರ್ಮ ಅವುಗಳ ಅನುಷ್ಠಾನವಾಗಬೇಕಾದರೆ ನಾವುಗಳು ಅವುಗಳನ್ನ ಜೀವನದುದ್ದಕ್ಕೂ ಆಚರಣೆಗೆ ತರುವಲ್ಲಿ ಯತ್ನಿಸಬೇಕು, ವಚನ ಸಾಹಿತ್ಯ ಬೆಳೆಯಬೇಕಾದರೆಅದನ್ನು ಜಾತಿ ಧರ್ಮಕ್ಕೇ ಸೀಮಿತಗೊಳಿಸದೆ ಸಾಹಿತ್ಯವನ್ನ ಇನ್ನಷ್ಟು ಮತ್ತಷ್ಟು ಸರಳಿಕರಣಮಾಡಿ ಯುವಪೀಳಿಗೆಗೆ ಬೋದಿಸುವ ಕೆಲಸ ಮಾಡಬೇಕು.

ಗ್ರಂಥಋಣ:-

ಡಾ.ಸಿ. ಸೋಮಶೇಖರ್ - ವಚನಗಳಲ್ಲಿ ಸಾಮಾಜಿಕ ಚಿಂತನೆ.

ಡಾ.ಎಮ್.ಎಮ್.ಕಲ್ಬುರ್ಗಿ - ಬಸವಣ್ಣನವರ ವಚನ ಸಂಪುಟ.

 ISBN Number : 978-93-342-6884-3

ಕನ್ನಡ ಸಾಹಿತ್ಯದ ಕಾವ್ಯ ಪರಂಪರೆ ನಡೆದು ಬಂದ ದಾರಿ ಅದರ ಗತಿಬಿಂಬ

1. ಮನೋಜ್.ಎಂ

(ಸಂಶೋಧನಾ ವಿದ್ಯಾರ್ಥಿ,

ಸಾಮಾಜಿಕ ಮತ್ತು ಮಾನವಿಕ ವಿಭಾಗ,

ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,

ಸಹಾಯಕ ಪ್ರಾಧ್ಯಾಪಕರು,

ಸೆಂಟ್ ಫ್ರಾನ್ಸಿಸ್ ಕಾಲೇಜ್, ಬೆಂಗಳೂರು)

2. ಡಾ. ರಾಜೇಶ್ ಬೆಜ್ಜಂಗಳ

ಸಂಶೋಧನಾ ಮಾರ್ಗದರ್ಶಕರು

ಸಾಮಾಜಿಕ ಮತ್ತು ಮಾನವಿಕ ವಿಭಾಗ,

ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು,

ಭಾಷೆಯ ಹುಟ್ಟು ಮಾನವ ವಿಕಾಸದಲ್ಲಿ ಮಹತ್ವದ ಮೈಲಿಗಲ್ಲು. ಶಿಲ್ಪಕಲೆ, ಸಂಗೀತ, ನೃತ್ಯ, ದೃಶ್ಯ ಕಲೆಗಳು ಮತ್ತು ಸಾಹಿತ್ಯ ಸೇರಿದಂತೆ ವಿವಿಧ ಕಲಾತ್ಮಕ ಅಭಿವ್ಯಕ್ತಿಗಳ ಮೂಲಕ ತಮ್ಮ ಅನುಭವಗಳ ಸಂಕೀರ್ಣತೆಯನ್ನು ವ್ಯಕ್ತಪಡಿಸಲು ಇದು ವ್ಯಕ್ತಿಗಳಿಗೆ ಅನುವು ಮಾಡಿಕೊಟ್ಟಿತು. ಸಾಹಿತ್ಯ, ನಿರ್ದಿಷ್ಟವಾಗಿ, ಅಭಿವ್ಯಕ್ತಿಗೆ ಪ್ರಬಲವಾದ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಸಾಹಿತ್ಯವು ಜೀವನವನ್ನು ಪ್ರತಿಬಿಂಬಿಸುತ್ತದೆ, ಮಾನವ ಅನುಭವಗಳ ಪ್ರತಿಬಿಂಬವಾಗಿ ಕಾರ್ಯನಿರ್ವಹಿಸುತ್ತದೆ ಎಂದು ವಿದ್ವಾಂಸರು ಗಮ¤¹ದ್ದಾರೆ.

ಜೀವನವು ಚಲನಶೀಲವಾಗಿದೆ, ಹರಿಯುವ ನದಿಗೆ ಹೋಲುತ್ತದೆ, ಮತ್ತು ಸಾಹಿತ್ಯವು ಈ ನಿರಂತರವಾದ ಅಸ್ತಿತ್ವದ ಹರಿವನ್ನು ಸಾಕಾರಗೊಳಿಸುತ್ತದೆ, ನಿರಂತರವಾಗಿ ವಿಕಸನಗೊಳ್ಳುತ್ತದೆ ಮತ್ತು ತನ್ನನ್ನು ನವೀಕರಿಸುತ್ತದೆ. ಮಾನವನ ಮನಸ್ಸು ಜೀವನದ ಬದಲಾವಣೆಗಳು ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳುತ್ತದೆ, ಸಾಹಿತ್ಯ ಇತಿಹಾಸವು ಹಂತಗಳಲ್ಲಿ ಬೆಳವಣಿಗೆಯಾಗುತ್ತದೆ. ಈ ವಿಕಸನವು ನಿರ್ದಿಷ್ಟ ಅವಧಿಗಳ ಸಾಹಿತ್ಯಿಕ ಸಾಧನೆಗಳನ್ನು ಮಾತ್ರವಲ್ಲದೆ ಸಮಾಜದ ಸಾಂಸ್ಕೃತಿಕ ಇತಿಹಾಸವನ್ನು ಬೆಳಗಿಸುತ್ತದೆ, ವಿಭಿನ್ನ ಯುಗಗಳ ಬದಲಾಗುತ್ತಿರುವ ಮನಸ್ಥಿತಿಗಳನ್ನು ಬಹಿರಂಗಪಡಿಸುತ್ತದೆ. ಪ್ರತಿಯೊಂದು ಭಾಷೆಯು ತನ್ನದೇ ಆದ ವಿಶಿಷ್ಟ ಸಾಹಿತ್ಯಿಕ ಪರಂಪರೆಯನ್ನು ಹೊಂದಿದೆ ಮತ್ತು ಕನ್ನಡವು ಈ ನಿಯಮಕ್ಕೆ ಹೊರತಾಗಿಲ್ಲ. ಮಹಾಭಾರತ, ರಾಮಾಯಣ ಮತ್ತು ಪುರಾಣಗಳಂತಹ ಪ್ರಾಚೀನ ಗ್ರಂಥಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೂಲವನ್ನು ಪತ್ತೆಹಚ್ಚಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ನಂತರದ ಅವಧಿಗಳಲ್ಲಿ, ಕಲ್ಪರಾಹಗಳು ಈ ಸಾಹಿತ್ಯಿಕ ಪ್ರಯಾಣದ ನಿರಂತರ

ISBN Number : 978-93-342-6884-3

ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ. ಚಕ್ರವರ್ತಿ ಅಶೋಕನ ಆಳ್ವಿಕೆಯ ಕಾಲದ ಕ್ರಿಸ್ತಪೂರ್ವ 3 ನೇ ಶತಮಾನದ ಶಾಸನಗಳನ್ನು ಆರಂಭಿಕ ಕನ್ನಡ ಭಾಷೆಗೆ ಜೋಡಿಸಲು ಕೆಲವರು ಪ್ರಯತ್ನಿಸಿದರೆ, ಕ್ರಿ.ಶ 5 ನೇ ಶತಮಾನದಿಂದ ಹಲ್ಮಿಡಿ ಕಲ್ಬರಹದಲ್ಲಿ ಆರಂಭಿಕ ಖಚಿತವಾದ ಪುರಾವೆಗಳು ಕಂಡುಬರುತ್ತವೆ. ಈ ಶಾಸನವನ್ನು ಅಡಿಪಾಯದ ಉಲ್ಲೇಖವಾಗಿ ತೆಗೆದುಕೊಂಡರೂ ಸಹ, ಕನ್ನಡ ಸಾಹಿತ್ಯವು ಸುಮಾರು ಹದಿನಾರು ನೂರು ವರ್ಷಗಳ ಕಾಲ ಶ್ರೀಮಂತ ಇತಿಹಾಸವನ್ನು ಹೊಂದಿದೆ ಎಂದು ಸೂಚಿಸುತ್ತದೆ, ಇದು ಸಮಯ, ಭೌಗೋಳಿಕತೆ, ಪರಿಸರ ಮತ್ತು ಸಾಮಾಜಿಕ ಅಗತ್ಯಗಳಂತಹ ವಿವಿಧ ಅಂಶಗಳಿಗೆ ಪ್ರತಿಕ್ರಿಯೆಯಾಗಿ ವಿಕಸನಗೊಳ್ಳುತ್ತದೆ. ಈ ಸಾಹಿತ್ಯಿಕ ವಿಕಾಸವನ್ನು ಕವಿ, ಐತಿಹಾಸಿಕ ಅವಧಿ, ಧಾರ್ಮಿಕ ಪ್ರಭಾವಗಳು, ಸೌಂದರ್ಯದ ಆದ್ಯತೆಗಳು ಮತ್ತು ಭಾಷಾ ಗುಣಲಕ್ಷಣಗಳನ್ನು ಒಳಗೊಂಡಂತೆ ಮಾನದಂಡಗಳ ಆಧಾರದ ಮೇಲೆ ಹಳೆಗನ್ನಡ, ನಡುನ್ನಡ ಮತ್ತು ಹೊಸಗನ್ನಡ ಎಂದು ವರ್ಗೀಕರಿಸಲಾಗಿದೆ.

ಹಲ್ಮಾಡಿ ಶಾಸನವು ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ದಾಖಲೆಯಾಗಿ ನಿಂತಿದೆ, ಭಾಷೆಯಲ್ಲಿ ತಿಳಿದಿರುವ ಅತ್ಯಂತ ಪ್ರಾಚೀನ ಶಾಸನವನ್ನು ಗುರುತಿಸುತ್ತದೆ ಮತ್ತು ದತ್ತಿ ವಿಷಯಗಳ ಮೇಲೆ ಕೇಂದ್ರೀಕರಿಸಿ ಕದಂಬ ರಾಜವಂಶದ ಕಾಕುಸ್ತವರ್ಮನ ಐತಿಹಾಸಿಕ ದಾಖಲೆಯನ್ನು ಒದಗಿಸುತ್ತದೆ. ತರುವಾಯ, ಶ್ರವಣಬೆಳಗೊಳದ ಶಾಸನವು 'ನಂದಿಸೇನ' ಎಂಬ ಹೆಸರಿನ ಆಕೃತಿಯನ್ನು ಪರಿಚಯಿಸುತ್ತದೆ, ಜೀವನದ ಕ್ಷಣಿಕ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ, ಅದನ್ನು ಮಳೆಬಿಲ್ಲು ಅಥವಾ ಮಿಂಚಿನ ಹೊಳಪಿಗೆ ಹೋಲಿಸುತ್ತದೆ. ಕ್ರಿಶ 7ನೇ ಶತಮಾನವು ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಮಹತ್ವದ ಯುಗವಾಗಿ ಹೊರಹೊಮ್ಮುತ್ತದೆ, ಇದು ಗೌರವಾನ್ವಿತ ವ್ಯಕ್ತಿ ಕಪ್ಪೇರಭಟ್ಟನನ್ನು ಚಿತ್ರಿಸುವ ಬಾದಾಮಿ ಶಾಸನದಿಂದ ಎತ್ತಿ ತೋರಿಸುತ್ತದೆ. ಈ ಶಾಸನವು ಹೆಚ್ಚುವರಿ ಸಾಹಿತ್ಯಿಕ ಪ್ರಾಮುಖ್ಯತೆಯನ್ನು ಹೊಂದಿದೆ ಏಕೆಂದರೆ ಇದು ತ್ರಿಪದಿಯ ಮೊದಲ ದಾಖಲಿತ ಬಳಕೆಯನ್ನು ಗುರುತಿಸುತ್ತದೆ, ಇದು ಕಾವ್ಯದ ರೂಪವಾಗಿದ್ದು ನಂತರ ಪ್ರಚಲಿತವಾಯಿತು. ಕೇವಲ ಕಪ್ಪೆರಭಟ್ಟರನ್ನು ಚಿತ್ರಿಸುವುದರ ಹೊರತಾಗಿ, ಇದು ಆ ಅವಧಿಯಲ್ಲಿ ಕನ್ನಡಿಗರ ಉದಾತ್ತ ಜೀವನವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿ ಕಾರ್ಯನಿರ್ವಹಿಸುತ್ತದೆ.

ISBN Number : 978-93-342-6884-3

ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆ

ಕನ್ನಡ ಸಾಹಿತ್ಯ ಸಂಪ್ರದಾಯದೊಳಗೆ ತಿಳಿದಿರುವ ಅತ್ಯಂತ ಹಳೆಯ ಕೃತಿ 'ಕವಿರಾಜಮಾರ್ಗ', ಇದನ್ನು 9 ನೇ ಶತಮಾನದಲ್ಲಿ ರಾಷ್ಟ್ರಕೂಟ ರಾಜವಂಶದ ಅಡಿಯಲ್ಲಿ ನೃಪತುಂಗನ ಆಸ್ಥಾನಕ್ಕೆ ಸಂಬಂಧಿ'ದ ಕವಿ ಶ್ರೀವಿಜಯ ಬರೆದಿದ್ದಾರೆ. ಈ ಮೂಲ ಪಠ್ಯವು ಹಲವಾರು ಆರಂಭಿಕ ಕವಿಗಳು ಮತ್ತು ಗದ್ಯ ಬರಹಗಾರರನ್ನು ದಾಖಲಿಸುವ ಮೂಲಕ ಕನ್ನಡ ಸಾಹಿತ್ಯದ ಇತಿಹಾಸದ ಅಧ್ಯಯನಕ್ಕೆ ಗಣನೀಯ ಕೊಡುಗೆ ನೀಡಿದೆ. ಇದಲ್ಲದೆ, 'ಕವಿರಾಜಮಾರ್ಗ' ಕನ್ನಡ ಮಾತನಾಡುವ ಪ್ರದೇಶದ ಭೌಗೋಳಿಕ ಗಡಿಗಳನ್ನು ವಿವರಿಸುತ್ತದೆ, ಇದು "ಕಾವೇರಿಯಿಂದ ಗೋದಾವರಿ ನದಿಯವರೆಗೆ" ವಿಸ್ತರಿಸುತ್ತದೆ. ಇದು ಕನ್ನಡ ಜನತೆಯನ್ನು ಉತ್ತಮ ಸ್ವಭಾವದ, ಕಾವ್ಯಾತ್ಮಕ, ಕಲಾತ್ಮಕವಾಗಿ ಹಿತಕರವಾದ, ಸದ್ಗುಣಶೀಲ ಮತ್ತು ಕಾವ್ಯ ಪ್ರಯೋಗದಲ್ಲಿ ನುರಿತ ಸೇರಿದಂತೆ ಪ್ರಶಂಸನೀಯ ಲಕ್ಷಣಗಳನ್ನು ಹೊಂದಿದೆ ಎಂದು ನಿರೂಪಿಸುತ್ತದೆ. ಪಠ್ಯವು ವೈವಿಧ್ಯಮಯ ಧಾರ್ಮಿಕ ವಿಚಾರಗಳನ್ನು ನಿಜವಾದ ನಂಬಿಕೆಯ ವಿಶಿಷ್ಟ ಲಕ್ಷಣವಾಗಿ ಸ್ವೀಕರಿಸಲು ಪ್ರತಿಪಾದಿಸುತ್ತದೆ, ಆ ಮೂಲಕ ಸಹಬಾಳ್ವೆ, ಸಹೋದರತ್ವ, ಸಹಯೋಗ ಮತ್ತು ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಒತ್ತಿಹೇಳುವ ಕನ್ನಡ ಕಾವ್ಯಕ್ಕೆ ದೃಢವಾದ ಅಡಿಪಾಯವನ್ನು ಸ್ಥಾಪಿಸುತ್ತದೆ. ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಮಹತ್ವದ ಕೊಡುಗೆ ಎಂದರೆ 'ವಡ್ಡಾರಾಧನೆ', ಇದು ಭಾಷೆಯ ಮೊದಲ ಗದ್ಯ ಕೃತಿ ಎಂದು ಗುರುತಿಸಲ್ಪಟ್ಟಿದೆ. ಈ ಪಠ್ಯವು ಅದರ ನಿರೂಪಣೆಯ ಕಲಾತ್ಮಕತೆಗೆ ಮಾತ್ರವಲ್ಲದೆ ಕಥೆ ಹೇಳುವ ಮೂಲಕ ಜೈನ ತತ್ವಗಳನ್ನು ತಿಳಿಸುವ ಪಾತ್ರಕ್ಕಾಗಿಯೂ ಗಮನಾರ್ಹವಾಗಿದೆ. ಶಿವಕೋಟಾಚಾರದಿಂದ ರಚಿಸಲ್ಪಟ್ಟ, 'ವಡ್ಡಾರಾಧನೆ' 19 ಕಥೆಗಳ ಸಂಗ್ರಹವನ್ನು ಒಳಗೊಂಡಿದೆ, ಅದು ಸತ್ಯತೆ, ಅಹಿಂಸೆ, ನಿರ್ಲಿಪ್ತತೆ, ಸ್ಥಿತಿಸ್ಥಾಪಕತ್ವ, ಏಕಾಗ್ರತೆ ಮತ್ತು ನ್ಯಾಯ ಮತ್ತು ಸದಾಚಾರದ ಅನುಸರಣೆಯಂತಹ ಮಾನವ ಸದ್ಗುಣಗಳನ್ನು ಅನ್ವೇಷಿಸುತ್ತದೆ.

10 ನೇ ಶತಮಾನವನ್ನು ಸಾಮಾನ್ಯವಾಗಿ ಕನ್ನಡ ಸಾಹಿತ್ಯದ ಸುವರ್ಣ ಯುಗ ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ, ಸಾಹಿತ್ಯವು ಸಂಸ್ಕೃತದಿಂದ ಹೆಚ್ಚು ಪ್ರಭಾವಿತವಾಯಿತು, ಇದು ಸಂಸ್ಕೃತ ಸಂಪ್ರದಾಯಗಳಿಂದ ಪಡೆದ 'ಮಾರ್ಗ' ಶೈಲಿಯಲ್ಲಿ ಕೃತಿಗಳ ಹೊರಹೊಮ್ಮುವಿಕೆಗೆ ಕಾರಣವಾಯಿತು. ಈ ಯುಗದ ಅನೇಕ ಕವಿಗಳು ಜೈನ ಧರ್ಮದೊಂದಿಗೆ ಸಂಬಂಧ ಹೊಂದಿದ್ದರು ಮತ್ತು ಪಂಪನ (ಗುಣವರ್ಮ-1) ಕಾಲಕ್ಕೆ ಮುಂಚಿತವಾಗಿ ಸ್ಥಾಪಿಸಲಾದ ಆಗಮಿಕ ಮತ್ತು ಲೌಕಿಕಗಳ ಕಾವ್ಯದ ರೂಪಗಳಿಗೆ ಬದ್ಧರಾಗಿದ್ದರು. ಅಗಮಿಕ ಕಾವ್ಯವು ವಿಶಿಷ್ಟವಾಗಿ ಜೈನ ತೀರ್ಥಂಕರರು, ಚಕ್ರವರ್ತಿಗಳು ಮತ್ತು ಗಮನಾರ್ಹ ವ್ಯಕ್ತಿಗಳ ಜೀವನದ

ISBN Number : 978-93-342-6884-3

ಮೇಲೆ ಕೇಂದ್ರೀಕರಿಸದೆ, ಆದರೆ ಲೌಕಿಕ ಕಾವ್ಯವು ಪೋಷಕ ರಾಜ, ಸಮಕಾಲೀನ ರಾಜಕೀಯ ಮತ್ತು ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯದ ನಿರೂಪಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೋಧಿಸಿತು.

ಈ ಸಂಯೋಜನೆಗಳನ್ನು ಪಾಂಡಿತ್ಯಪೂರ್ಣ ಆಳ ಮತ್ತು ಲಯಬದ್ಧ ರಚನೆಯಿಂದ ನಿರೂಪಿಸಲಾಗಿದೆ, ಈ ಶತಮಾನದಲ್ಲಿ ಚಂಪೂ ರೂಪವು ಅದರ ಉತ್ತುಂಗವನ್ನು ತಲುಪಿತು. ಈ ಸಮಯದ ಕವಿಗಳು ಧಾರ್ಮಿಕ ವಿಷಯಗಳನ್ನು ಕಾವ್ಯಾತ್ಮಕ ಅಭಿವ್ಯಕ್ತಿಯೊಂದಿಗೆ ಕೌಶಲ್ಯದಿಂದ ಹೆಣೆದುಕೊಂಡರು, ಅವರ ಯುಗದ ಪ್ರತಿಬಿಂಬಿಸುವ ವೀರರ ಆದರ್ಶಗಳನ್ನು ಉತ್ತೇಜಿಸಿದರು.

ಕನ್ನಡ ಸಾಹಿತ್ಯದ ಮೊದಲ ಶ್ರೇಷ್ಠ ಕವಿ ಎಂದು ಪರಿಗಣಿಸಲ್ಪಟ್ಟ ಪಂಪ 10 ನೇ ಶತಮಾನದ ಪ್ರಮುಖ ವ್ಯಕ್ತಿಯಾಗಿ ನಿಲ್ಲುತ್ತಾನೆ. ಅವರ ಸಾಹಿತ್ಯಿಕ ಕೊಡುಗೆಗಳು ಅನೇಕ ನಂತರದ ಜೈನ ಕವಿಗಳು ಅನುಸರಿಸುವ ಒಂದು ಪೂರ್ವನಿದರ್ಶನವನ್ನು ಸ್ಥಾಪಿಸಿದವು. ಅವರ ಗಮನಾರ್ಹ ಕೃತಿಗಳಲ್ಲಿ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಕಾವ್ಯಗಳು ಸೇರಿವೆ. ಆದಿಪುರಾಣವನ್ನು ಪಂಪ ಆಗಮಿಕ ಎಂದು ವರ್ಗೀಕರಿಸಲಾಗಿದೆ, ಮೊದಲ ತೀರ್ಥಂಕರ ಆದಿನಾಥ ಮತ್ತು ಮೊದಲ ಚಕ್ರವರ್ತಿ ಭರತನ ನಿರೂಪಣೆಗಳನ್ನು ಕೇಂದ್ರೀಕರಿಸುತ್ತದೆ. ಆದಿನಾಥನ ಕಥೆಯು ಬಯಕೆಯ ತ್ಯಜಿಸುವಿಕೆಯನ್ನು ಒತ್ತಿಹೇಳುತ್ತದೆ, ಆದರೆ ಭರತನ ಕಥೆಯು ಅಹಂಕಾರವನ್ನು ತ್ಯಜಿಸುವುದನ್ನು ಎತ್ತಿ ತೋರಿಸುತ್ತದೆ. ಪಂಪ ಭಾರತ ಎಂದೂ ಕರೆಯಲ್ಪಡುವ ವಿಕ್ರಮಾರ್ಜುನ ವಿಜಯವು ವ್ಯಾಸನ ಮಹಾಭಾರತವನ್ನು ಪಂಪ ಕನ್ನಡಕ್ಕೆ ಅಳವಡಿ[1]ಕೊಂಡಿರುವುದನ್ನು ಪ್ರತಿನಿಧಿಸುತ್ತದೆ. ಈ ಕೃತಿಯಲ್ಲಿ, ಅವನು ನಾಯಕ ಅರ್ಜುನ ಮತ್ತು ಅವನ ಪೋಷಕ ಅರಿಕೇಸರಿಯ ನಡುವಿನ ಸಮಾನಾಂತರಗಳನ್ನು ಚಿತ್ರಿಸುತ್ತಾನೆ, ಆದರೆ ಅವನ ಸಮಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಾನೆ.

ಕನ್ನಡ ಸಾಹಿತ್ಯದ ಮೇಲೆ ಪಂಪನ ಪ್ರಭಾವ ಗಾಢವಾಗಿದೆ, ಅವರು ಮುಂದಿನ ಪೀಳಿಗೆಯ ಕವಿಗಳಿಗೆ ದಾರಿ ಮಾಡಿಕೊಟ್ಟರು. ನಿರೂಪಣೆ ಮತ್ತು ಸನ್ನಿವೇಶವನ್ನು ಸಂಯೋಜಿಸುವ ಅವರ ಸಾಮರ್ಥ್ಯವನ್ನು ಆನೆಯು ಕಾಡಿನ ಮೂಲಕ ಹಾದಿಯನ್ನು ಮುನ್ನುಗ್ಗುವಂತೆ ಹೋಲಿಸಲಾಗಿದೆ. ಈ ರೂಪಕವು ಅವರ ಕೊಡುಗೆಗಳ ಮಹತ್ವವನ್ನು ಒತ್ತಿಹೇಳುತ್ತದೆ, ಕವಿ ನಾಗರಾಜನು "ಪಸರಿಪ ಕನ್ನಡಕೊಡೆಯನೋರ್ವನೆ ಸತ್ಕವಿ ಪಂಪನವಗಂ"

ISBN Number : 978-93-342-6884-3

ಎಂದು ಪ್ರತಿಪಾದಿಸಲು ಕಾರಣವಾಯಿತು, ಸಾಹಿತ್ಯ ಪರಂಪರೆಯಲ್ಲಿ ಪಂಪನ ಗೌರವಾನ್ವಿತ ಸ್ಥಾನಮಾನವನ್ನು ಎತ್ತಿ ತೋರಿಸುತ್ತದೆ. ಪಂಪ ತನ್ನ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಲ್ಲದೆ, ಮುಂಬರುವ ಶತಮಾನಗಳವರೆಗೆ ಪ್ರತಿಧ್ವನಿಸುವ ಸಾಂಸ್ಕೃತಿಕ ಮತ್ತು ವೀರರ ವಿಷಯಗಳ ಪರಿಶೋಧನೆಗೆ ಚೌಕಟ್ಟನ್ನು ಸ್ಥಾಪಿಸಿದನು. ಪಂಪ ಕನ್ನಡ ಸಾಹಿತ್ಯದಲ್ಲಿ ಮಹತ್ವದ ತಳಹದಿಯನ್ನು ಹಾಕಿದ, ನಂತರ ಗೌರವಾನ್ವಿತ ಕವಿ ಪೊನ್ನ. ರನ್ನನ ಜೊತೆಯಲ್ಲಿ ಕನ್ನಡ ಕಾವ್ಯದ ಮೂರು ರತ್ನಗಳೆಂದು ಕೊಂಡಾಡುತ್ತಾರೆ. ರನ್ನ ಮತ್ತು ಜನ್ನನ ಜೊತೆಯಲ್ಲಿ ಕವಿ ಚಕ್ರವರ್ತಿಗಳಲ್ಲಿ ಒಬ್ಬನೆಂದು ಗುರುತಿಸಲ್ಪಟ್ಟ ಪೊನ್ನ, ರಾಷ್ಟ್ರಕೂಟರ ಮೂರನೇ ಆಡಳಿತಗಾರನಾದ ಅವನ ಪೋಷಕ ಕೃಷ್ಣ ಪೊನ್ನನಿಂದ ನಿಯೋಜಿಸಲ್ಪಟ್ಟ ಶಾಂತಿಪುರಾಣ ಎಂಬ ಧಾರ್ಮಿಕ ಕಾರ್ಯಕ್ಕೆ ಹೆಸರುವಾಸಿಯಾಗಿದ್ದಾನೆ. ಈ ಕಾವ್ಯವು 16 ನೇ ತೀರ್ಥಂಕರನಾದ ಶಾಂತಿನಾಥನ ಜೀವನವನ್ನು ನಿರೂಪಿಸುತ್ತದೆ ಮತ್ತು ಆಶ್ವಾಸಗಳು ಎಂದು ಕರೆಯಲ್ಪಡುವ ಹನ್ನೆರಡು ವಿಭಾಗಗಳಾಗಿ ರಚನೆಯಾಗಿದೆ. ಅತ್ತಿಮಬ್ಬೆ ಶಾಂತಿಪುರಾಣದ ಸಾವಿರ ಪ್ರತಿಗಳ ನಿರ್ಮಾಣಕ್ಕೆ ಅನುಕೂಲ ಮಾಡಿಕೊಟ್ಟಿದ್ದು ಗಮನಾರ್ಹ. ಹೆಚ್ಚುವರಿಯಾಗಿ, ಪೊನ್ನನು ರಾಮನ ಕಥೆಯನ್ನು ವಿವರಿಸುವ ಭುವನೈಕ ರಾಮಾಭ್ಯುದಯ ಎಂಬ ಜಾತ್ಯತೀತ ಕವಿತೆಯನ್ನು ಬರೆದನು ಮತ್ತು ಅವನಿಗೆ 'ಕುರುಗ್ಗಲ ಸವನ' ಎಂಬ ಬಿರುದನ್ನು ಗಳಿಸಿದನು. ಅವರು ಕನ್ನಡ ಕಾವ್ಯದ ಅನನ್ಯತೆಯನ್ನು ಧೈರ್ಯದಿಂದ ಪ್ರತಿಪಾದಿಸುತ್ತಾರೆ, ಅದರ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಅಪ್ರತಿಮವಾಗಿದೆ.

10 ನೇ ಶತಮಾನದ ಒಬ್ಬ ಪ್ರ'ಧ್ಧ ಕವಿ ರನ್ನ ಅವರು ತಮ್ಮ ಅಜಿತತೀರ್ಥಂಕರ ಪುರಾಣದೊಂದಿಗೆ ಧಾರ್ಮಿಕ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ, ಇದು ಎರಡನೇ ಜೈನ ತೀರ್ಥಂಕರ, ಅಜಿತಸ್ವಾಮಿ ಮತ್ತು ಎರಡನೇ ಚಕ್ರವರ್ತಿ ಸಾಗರದ ಜೀವನವನ್ನು ವಿವರಿಸುವ ಹದಿನಾಲ್ಕು ಆಶ್ವಾಸಗಳ ಪದ್ಯಗಳನ್ನು ಒಳಗೊಂಡಿದೆ. ಅವರ ಜಾತ್ಯತೀತ ಕೃತಿ, 'ಸಾಹಸ ಭೀಮ ವಿಜಯಂ' ಅಥವಾ ಗದಾಯುದ್ಧ, ವ್ಯಾಸನ ಭಾರತದಿಂದ ಗದಾಸೌಪ್ತಿಕ ಪರ್ವವನ್ನು ಮರುವ್ಯಾಖ್ಯಾನಿಸುತ್ತದೆ, ಸಾಹಿತ್ಯಿಕ ಸೊಬಗನ್ನು ತುಂಬುತ್ತದೆ. ಇದು ಪಂಪನ 'ವಿಕ್ರಮಾರ್ಜುನವಿಜಯ,' ಭಾಸರ 'ಊರುಭಂಗ, ಮತ್ತು ಭಟ್ಟನಾರಾಯಣನ 'ವೇಣಿಸಂಹಾರ'ದಿಂದ ಸ್ಫೂರ್ತಿ ಪಡೆದರೆ, ರನ್ನನ ನಿರೂಪಣೆಯು ಗಮನಾರ್ಹವಾದ ಅತ್ಯಾಧುನಿಕತೆಯನ್ನು ಸಾಧಿಸುತ್ತದೆ. ಚಾಲುಕ್ಯ ಚಕ್ರವರ್ತಿಯಿಂದ ನಿಯೋಜಿಸಲ್ಪಟ್ಟ ಕವಿತೆ, ಭೀಮನನ್ನು ಕೇಂದ್ರ ನಾಯಕನಾಗಿ ಚಿತ್ರಿಸುತ್ತದೆ, ಅವನನ್ನು ಸತ್ಯಾಶ್ರಯದೊಂದಿಗೆ ಸಮೀಕರಿಸುತ್ತದೆ ಮತ್ತು ರನ್ನ ತನ್ನ ಕಾವ್ಯದ ಅಪ್ರತಿಮ ಗುಣಮಟ್ಟವನ್ನು ಪ್ರತಿಪಾದಿಸುವ ಮೂಲಕ ವಿಮರ್ಶಕರಿಗೆ ಸವಾಲು ಹಾಕುತ್ತಾನೆ, ಅದನ್ನು ಅಮೂಲ್ಯವಾದ ರತ್ನಕ್ಕೆ

ISBN Number : 978-93-342-6884-3

ಹೋಲಿಸುತ್ತಾನೆ.'ಂಹಾಲೋಕನ ಕ್ರಮ' ಎಂಬ ಅವರ ಕಲಾತ್ಮಕ ವಿಧಾನವು ನಾಟಕೀಯ ಅಂಶಗಳನ್ನು ಪ್ರದರ್ಶಿಸುವುದಲ್ಲದೆ, ದುರ್ಯೋಧನನನ್ನು ನಿರೂಪಣೆಯೊಳಗೆ ಸುಯೋಧನ ಎಂದು ಮರು ವ್ಯಾಖ್ಯಾನಿಸುತ್ತದೆ. ಚಾವುಂಡರಾಯ ಗಂಗ ರಾಜವಂಶದ ರಾಜ ರಾಚಮಲ್ಲನ ಅಡಿಯಲ್ಲಿ ಮಂತ್ರಿ ಮತ್ತು ಸೇನಾಪತಿಯಾಗಿ ಸೇವೆ ಸಲ್ಲಿದ. ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನ 57 ಅಡಿಯ ಆಕರ್ಷಕ ಪ್ರತಿಮೆಯನ್ನು ಸ್ಥಾಪಿಸಲು ಅವರು ಪ್ರಸಿದ್ಧರಾಗಿದ್ದಾರೆ. ಅವರ ಸಾಹಿತ್ಯಿಕ ಕೊಡುಗೆ, ಚಾವುಂಡರಾಯ ಪುರಾಣವು 24 ತೀರ್ಥಂಕರರು ಮತ್ತು 63 ಶಲಕಪುರುಷರ ಜೀವನವನ್ನು ನಿರೂಪಿಸುವ ಗದ್ಯ ನಿರೂಪಣೆಯಾಗಿದೆ. ಈ ಕೃತಿಯನ್ನು 'ತ್ರಿಷಷ್ಠಿ ಲಕ್ಷಣ ಮಹಾಪುರಾಣಂ' ಎಂದೂ ಉಲ್ಲೇಖಿಸಲಾಗಿದೆ ಮತ್ತು ಇದರ ಸಾರವನ್ನು ಮೂರು ಪದಗಳಲ್ಲಿ ಅಡಕಗೊಳಿಸಲಾಗಿದೆ: 'ಗಂಭೀ, ಧಾರಾಳ, ಚೊಕ್ಕಟ,' ಎಂದು ರಾಮ್‌ಶ್ರೀ ಅವರು ಗಮನಿಸಿದ್ದಾರೆ.

ನಾಗವರ್ಮನ ಜೊತೆಗಿನ ಮೊದಲ ಛಂದೋಂಬುಡಿ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಮೈಲಿಗಲ್ಲು. 'ಚಂದೋಂಬುಧಿ' ಎಂಬ ಶೀರ್ಷಿಕೆಯ ಈ ಕೃತಿಯು ಕನ್ನಡ ಭಾಷೆಯಲ್ಲಿ ಚೊಚ್ಚಲ ಛಂದೋಂಬುಡಿ ಎಂದು ಗುರುತಿಸಲ್ಪಟ್ಟಿದೆ ಮತ್ತು ಬಾಣನ ಸಂಸ್ಕೃತ ಕಾದಂಬರಿಯ ಅನುವಾದವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆಳವಾದ ಪ್ರೀತಿಯ ಆದರ್ಶಗಳು, ಪುಂಡರೀಕ ಮತ್ತು ಮಹಾಶ್ವೇತೆಯಂತಹ ವ್ಯಕ್ತಿಗಳ ಪಾತ್ರದ ರೇಖಾಚಿತ್ರಗಳು ಮತ್ತು ಅಚ್ಚೋಡ ಸರೋವರದ ಮೋಡಿಮಾಡುವ ವಿವರಣೆಯನ್ನು ಸ್ಪಷ್ಟವಾಗಿ ಚಿತ್ರಿಸುವ ಕಾವ್ಯ ರಚನೆಯಾಗಿದೆ. ಪಂಚತಂತ್ರ ಎಂದು ಕರೆಯಲ್ಪಡುವ ದುರ್ಗಸಿಂಹನ ಚಂಪೂಕಾವ್ಯವು ವಾಸು ಭಾಗಭಟ್ಟರ ಮೂಲ ಕೃತಿಯ ಕನ್ನಡ ರೂಪಾಂತರವನ್ನು ಪ್ರತಿನಿಧಿಸುತ್ತದೆ. "ವಿರಚಿವೆಂ" ಎಂಬ ಶೀರ್ಷಿಕೆಯ ಈ ತುಣುಕು ಪ್ರಾಣಿಗಳು ಮತ್ತು ಪಕ್ಷಿಗಳನ್ನು ಒಳಗೊಂಡಿರುವ ನಿರೂಪಣೆಗಳ ಮೂಲಕ ನೈತಿಕ ಪಾಠಗಳನ್ನು ನೀಡುವ ಸೃಜನಶೀಲ ಮರುವ್ಯಾಖ್ಯಾನವಾಗಿದೆ. ಕವಿ ನಾಗಚಂದ್ರನನ್ನು ಸಾಮಾನ್ಯವಾಗಿ 'ಅಭಿನವ ಪಂಪ' ಎಂದು ಕರೆಯಲಾಗುತ್ತದೆ, ಅವರ 'ರಾಮಚಂದ್ರ ಚರಿತ ಪುರಾಣ' ಕೃತಿಗಾಗಿ 'ಪಂಪ ರಾಮಾಯಣ' ಎಂದೂ ಕರೆಯುತ್ತಾರೆ. ಈ ಪುರಾಣವು ಪ್ರಾಕೃತ ಕವಿ ವಿಮಲಸೂರಿಯವರ 'ಪಉಮಚರಿಮ'ದಿಂದ ಸ್ಫೂರ್ತಿ ಪಡೆಯುತ್ತದೆ. ಅವನ ಚಿತ್ರಣದಲ್ಲಿ, ನಾಗಚಂದ್ರ ರಾವಣನನ್ನು ವಿಶಿಷ್ಟವಾದ ಬೆಳಕಿನಲ್ಲಿ ಪ್ರಸ್ತುತಪಡಿಸುತ್ತಾನೆ, ಅವನು ಅಂತರ್ಗತವಾಗಿ ಸದ್ಗುಣಿ ಎಂದು ಚಿತ್ರಿಸುತ್ತಾನೆ ಆದರೆ ಅಂತಿಮವಾಗಿ ವಿಧಿಯಿಂದ ಅವನ ಮರಣಕ್ಕೆ ಕಾರಣವಾಯಿತು, ಗಾಳಿಯಿಂದ

ISBN Number : 978-93-342-6884-3

ತೂಗಾಡುವ ಕಮಲದ ಎಲೆಯಂತೆ. 'ಮಲ್ಲಿನಾಥ ಪುರಾಣ'ದಲ್ಲಿ ಶಾಂತಿಯ ಅನ್ವೇಷಣೆಯನ್ನು ಒತ್ತಿ ಹೇಳುತ್ತಾ, "ಜಿನೇಂದ್ರ, ನಿನಗೆ ಮಾತ್ರ ಶಾಂತಿ" ಎಂದು ಘೋಷಿಸುತ್ತಾನೆ.

ನನ್ನುಡಿ ದೇಶವೆತ್ತ ಪೊಸನುಡಿ ಮಾರ್ಗ'ಎಂಬ ಮಾತನ್ನು ಕಡೆಗಣಿಸಿದ ನಯಸೇನ, ಶುದ್ಧ ಕನ್ನಡಕ್ಕೆ ವೈಷಮ್ಯ ಬೇಕು ಎಂಬ ಅಭಿಪ್ರಾಯಕ್ಕೆ ಬದ್ಧರಾಗುವುದಕ್ಕಿಂತ ಸಂಘರ್ಷದ ನಡುವೆ ಶುದ್ಧ ಕನ್ನಡವನ್ನು ಪರಿಚಯಿಸುವುದು ಅತ್ಯಗತ್ಯ ಎಂದು ಪ್ರತಿಪಾದಿಸಿದರು. ಶುದ್ಧ ಕನ್ನಡದಲ್ಲಿ ಅವರ ಕಾವ್ಯದ ಕೊಡುಗೆ ಗಮನಾರ್ಹವಾಗಿದೆ, ವಿಶೇಷವಾಗಿ ಅವರ ಗದ್ಯ ಕೃತಿ 'ಧರ್ಮಾಮೃತ', ಅಲ್ಲಿ ಅವರು ಪರಮಾತ್ಮನ ವಿಡಂಬನಾತ್ಮಕ ವ್ಯಾಖ್ಯಾನದ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ, ಆ ಮೂಲಕ ಹೊಸ ಸಾಹಿತ್ಯ ಸಂಪ್ರದಾಯವನ್ನು ಸ್ಥಾಪಿ'ದರು. ನೇಮಿಚಂದ್ರನ್ ಅವರ 'ಲೀಲಾವತಿ ಪ್ರಬಂಧ', ಅದರ ಸಾಲಿನ "ಸ್ತ್ರೀ ರೂಪಮೇ ರೂಪಂ ಶೃಂಗಾರ ರಸಮೇ ರಸಂ", ಶೃಂಗಾರ ರಸದ ಆರಂಭಿಕ ಅನ್ವೇಷಣೆಯನ್ನು ಗುರುತಿಸುವ ಕನ್ನಡ ಲಾಲಿತ್ಯ ಕಾವ್ಯಕ್ಕೆ ಒಂದು ಅನನ್ಯ ಕೊಡುಗೆಯನ್ನು ಪ್ರತಿನಿಧಿಸುತ್ತದೆ. ಈ ಶತಮಾನದಲ್ಲಿ ಹೊರಹೊಮ್ಮಿದ ಜ್ಯೋತಿಷ್ಯ, ಶೃಂಗಾರ ಸಾಹಿತ್ಯ, ಪಶುವೈದ್ಯಕೀಯ ವಿಜ್ಞಾನ ಮತ್ತು ಗಣಿತಶಾಸ್ತ್ರದ ಪಠ್ಯಗಳೊಂದಿಗೆ 'ನೇಮಿನಾಥ ಪುರಾಣ' ಅವರ ಇತರ ಗಮನಾರ್ಹ ಕೃತಿಗಳು. 12 ನೇ ಶತಮಾನವು ಕನ್ನಡ ಸಾಹಿತ್ಯಕ್ಕೆ ಪರಿವರ್ತಕ ಯುಗವಾಗಿದ್ದು, ರಾಷ್ಟ್ರದ ಸಾರವನ್ನು ಪ್ರತಿಬಿಂಬಿಸುವ ನಾವೀನ್ಯತೆಯಿಂದ ನಿರೂಪಿಸಲ್ಪಟ್ಟಿದೆ. ಈ ಅವಧಿಯು ಸರಳ, ಆಡುಮಾತಿನ ಮತ್ತು ಜನಪ್ರಿಯ ಸಾಹಿತ್ಯದ ಉದಯವನ್ನು ಕಂಡಿತು, ಇದು ಸಾಮಾನ್ಯ ಜನರಿಗೆ ಪ್ರವೇ²ಸಬಹುದು, ರಾಜಮನೆತನದಿಂದ ದೂರ ಸರಿಯಿತು. ಒಮ್ಮೆ ಆಯ್ದ ಕೆಲವರಿಗೆ 'ಮಿತವಾಗಿದ್ದ ಸಾಹಿತ್ಯವು ಜಾತ್ಯತೀತವಾಯಿತು ಮತ್ತು ಎಲ್ಲಾ ಸಾಮಾಜಿಕ ವರ್ಗಗಳಿಂದ ಸ್ವೀಕರಿಸಲ್ಪಟ್ಟಿತು. ಗಮನಾರ್ಹವಾಗಿ, ಈ ಸಮಯದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ಸಾಹಿತ್ಯವನ್ನು ರಚಿಸಲು ಪ್ರಾರಂಭಿ'ದರು. 'ವಚನ ಚಳುವಳಿ' ಕನ್ನಡದಲ್ಲಿ ಮಹತ್ವದ ಸಾಂಸ್ಕೃತಿಕ ಶಕ್ತಿಯಾಗಿ ಹೊರಹೊಮ್ಮಿತು, ಸಮಾನತೆ, ಸ್ವಾವಲಂಬನೆ ಮತ್ತು ದಾಸ್ಯರಹಿತತೆಯಂತಹ ಮೌಲ್ಯಗಳನ್ನು ಉತ್ತೇಜಿಸುತ್ತದೆ, ಇದು ಸಾಮಾನ್ಯ ಜನರ ಕ್ರಿಯೆಗಳು ಮತ್ತು ಅಭಿವ್ಯಕ್ತಿಗಳನ್ನು ಆಳವಾಗಿ ಪ್ರಭಾವಿಸಿತು. ವಚನವು ಅನುಭವದ ಗದ್ಯದ ಪ್ರ'ದ್ಧ ರೂಪವಾಗಿ ವಿಕಸನಗೊಂಡಿತು, ಅದರ ಬರಹಗಾರರು, ಸಾಮಾನ್ಯವಾಗಿ ರೈತರು, ಈ ಸಾಹಿತ್ಯ ಪ್ರಕಾರವನ್ನು ಬೆಳೆ'ದರು. ಪರಿಣಾಮವಾಗಿ, ವಚನ ಸಾಹಿತ್ಯವು ಕರ್ನಾಟಕದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತು,

 ISBN Number : 978-93-342-6884-3

ಬಸವಣ್ಣನವರ ಮಾರ್ಗದರ್ಶನದಲ್ಲಿ ನೂರಾರು ಶರಣರು ವಚನಗಳನ್ನು ರಚಿಸಿದರು, ಅವರ ಪ್ರಭಾವವು ನಂತರದ ಕನ್ನಡ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ವಚನ ಕವಿಗಳಿಂದ ಪ್ರೇರಿತರಾದ ಹರಿಹರರು ತಮ್ಮ ಸಾಹಿತ್ಯ ಪಯಣದಲ್ಲಿ ವಿಶಿಷ್ಟ ಮಾರ್ಗವನ್ನು ರೂಪಿಸಿಕೊಂಡರು. ಅವರು ಪ್ರಾಥಮಿಕವಾಗಿ ರಗಳೆ ರೂಪವನ್ನು ಬಳಸಿಕೊಂಡರು, ನೂರಕ್ಕೂ ಹೆಚ್ಚು ಶಿವಶರಣರ ರಗಳೆಗಳ ಸಂಯೋಜನೆಗಳನ್ನು ನಿರ್ಮಿ'ದರು, ಅದು ಪ್ರಮುಖ ರಗಳೆ ಕವಿಯಾಗಿ ಅವರ ಖ್ಯಾತಿಯನ್ನು ಸ್ಥಾಪಿಸಿತು. ಅವರ ರಗಳೆಗಳೊಳಗಿನ ನಿರೂಪಣೆಗಳು ಶಿವ ಶರಣರ ಕಥೆಗಳ ಸುತ್ತ, ಭಕ್ತಿಯ ವಿಷಯದಿಂದ ಹೆಚ್ಚು ಸೆಳೆಯುತ್ತವೆ. ಇದಲ್ಲದೆ, ಅವರು ಚಂಪೂ ಕಾವ್ಯ 'ಗಿರಿಜಾಕಲ್ಯಾಣ'ವನ್ನು ರಚಿಸುವ ಮೂಲಕ ರಗಳೆ ಕಾವ್ಯವನ್ನು ಮೀರಿ ತಮ್ಮ ಬಹುಮುಖತೆಯನ್ನು ಪ್ರದರ್ಶಿಸಿದರು. ಹರಿಹರನ ಸೋದರಳಿಯನಾದ ರಾಘವಾಂಕನು ತನ್ನ ಕಾವ್ಯದ ಪ್ರಯತ್ನಗಳಿಗೆ ಶತನಾದಿ ರೂಪವನ್ನು ಅಳವಡಿಸಿಕೊಂಡನು, ಈ ಶೈಲಿಯನ್ನು ಉದಾಹರಿಸುವ ಕೃತಿಗಳನ್ನು ರಚಿಸಿದನು. ಅವರ ಗಮನಾರ್ಹ ಕೊಡುಗೆಗಳಲ್ಲಿ ಹರಿಶ್ಚಂದ್ರನ ಮೇಲಿನ ಕವನವು ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದದ್ದು ಎಂದು ಪರಿಗಣಿಸಲಾಗಿದೆ. 'ಹರನ್ ಸತ್ಯವನ್ನು ಸಾಕಾರಗೊಳಿಸುತ್ತದೆ ಮತ್ತು ಸತ್ಯವು ಹರಣವಾಗಿದೆ' ಎಂಬ ಕಲ್ಪನೆಯನ್ನು ಅವರು ಪ್ರತಿಪಾ¢'ದರು, ಕಾವ್ಯವು ಅದರ ಓದುಗರ ಜೀವನವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಎಂಬ ಅವರ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ನಾಡು ನುಡಿಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸರ್ವಜ್ಞ ಅವರು ತ್ರಿಪದಿಯನ್ನು ಮಾಧ್ಯಮವಾಗಿ ಬಳಸುವುದರ ಮೂಲಕ ತಮ್ಮ ಸಂದೇಶಗಳನ್ನು ನೇರವಾಗಿ ಜನತೆಗೆ ತಲುಪಿಸಲು ಕಟುವಾದ ಭಾಷೆಯನ್ನು ಬಳಸುತ್ತಿದ್ದಾರೆ. 'ಸರ್ವಜ್ಞನ ಮಾತಿಗೆ ಮಣಿಯದ ಎಲೆಯಿಲ್ಲ; ಯಾವುದೇ ವಿಷಯವನ್ನು ಅವರು ತಿಳಿಸದೆ ಉಳಿದಿದ್ದಾರೆ' ಎಂಬುದು ಅವರ ಪ್ರವೇಶವನ್ನು ಒತ್ತಿಹೇಳುತ್ತದೆ. ಅವರು ಜ್ಞಾನದ ಮಹತ್ವ, ಗುರುವಿನ ಪಾತ್ರ, ಸಾಮಾಜಿಕ ನಿಯಮಗಳು ಮತ್ತು ಆರೋಗ್ಯ, ಮಹಿಳೆಯರು ಮತ್ತು ಸತ್ಯತೆ ಸೇರಿದಂತೆ ಜೀವನದ ವಿವಿಧ ಅಂಶಗಳನ್ನು ಮೂರು ಶ್ಲೋಕಗಳಲ್ಲಿ ಒಳಗೊಂಡಿರುವ ವಿಷಯಗಳನ್ನು ಕೌಶಲ್ಯದಿಂದ ಪರಿಶೋಧಿಸುತ್ತಾರೆ.

ಮಧ್ಯ ಕನ್ನಡ ಸಾಹಿತ್ಯದಲ್ಲಿ ಮತ್ತೊಬ್ಬ ಪ್ರಖ್ಯಾತ ವ್ಯಕ್ತಿ ಕುಮಾರ ವ್ಯಾಸ, ಮಹಾಭಾರತವನ್ನು ಪುನರಾವರ್ತನೆ ಮಾಡುವ 'ಕರ್ನಾಟ ಭಾರತ ಕಥಾಮಂಜರಿ' ಎಂಬ ಆರು ಪದ್ಯಗಳ ಕಾವ್ಯಕ್ಕೆ ಹೆಸರುವಾ'ಯಾಗಿದ್ದಾನೆ. ಈ ಕೃತಿಯಲ್ಲಿ, ಅವರು ಕೃಷ್ಣನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತಾರೆ, ಬುದ್ಧಿವಂತರು

ISBN Number : 978-93-342-6884-3

ಕೃಷ್ಣನ ನಿರೂಪಣೆಯನ್ನು ಆಚರಿಸಬೇಕೆಂದು ಸೂಚಿಸುತ್ತಾರೆ. ಅವನು ತನ್ನನ್ನು ಕವಿ ಮತ್ತು ಬರಹಗಾರನಾಗಿ ಗುರುತಿ¹ಕೊಂಡಿದ್ದಾನೆ, ವ್ಯಾಪಕವಾದ ಮಹಾಕಾವ್ಯವನ್ನು ರಚಿ¹ದನು, ಅದು ಅವನಿಗೆ ವಿಮರ್ಶಕರಿಂದ 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂಬ ಬಿರುದನ್ನು ತಂದುಕೊಟ್ಟಿತು, ಅವನ ರೂಪಕಗಳ ಸಮೃದ್ಧ ಬಳಕೆಯಿಂದಾಗಿ. ಕುವೆಂಪು ಅವರ ಕಾವ್ಯಪ್ರವೀಣತೆಯನ್ನು ಗುರುತಿ¹, 'ಕುಮಾರ ವ್ಯಾಸನ ಹಾಡುಗಳು ಕಲಿಯುಗವನ್ನು ದ್ವಾಪರವಾಗಿ ಪರಿವರ್ತಿಸುತ್ತವೆ ಮತ್ತು ಭಾರತವು ಗೌರವದಿಂದ ನಮಸ್ಕರಿಸಲಿದೆ' ಎಂದು ಸೂಕ್ತವಾಗಿ ಹೇಳಿದ್ದಾರೆ.

ಈ ಯುಗದಲ್ಲಿ ಉಪಮೆಗಳಿಗೆ ಹೆಸರಾದ ಲಕ್ಷ್ಮೀಶ ಮತ್ತು ಅಲ್ಲಮಪ್ರಭುವನ್ನು ತನ್ನ ಕಾವ್ಯದ ಮಾರ್ಗದರ್ಶಕ ಎಂದು ಪರಿಗಣಿಸಿದ ಚಾಮರಸ, ಪ್ರತಿಯೊಬ್ಬರೂ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಬಗೆಯಲ್ಲಿ ಕಾವ್ಯಗಳನ್ನು ಕೆತ್ತಿದ್ದಾರೆ. ವಚನ ಮತ್ತು ಕೀರ್ತನ ಸಾಹಿತ್ಯದ ನಡುವಿನ ಸಂಬಂಧವನ್ನು ಒಂದೇ ನಾಣ್ಯದ ಎರಡು ಬದಿಗಳಿಗೆ ಹೋಲಿಸಬಹುದು, ಹರಿದಾಸ ಕೀರ್ತನೆಗಳ ಪ್ರಮುಖ ಸಂಯೋಜಕ. ಅವರ ಕೃತಿಗಳು ದೈವಿಕ ಸ್ತುತಿ, ದೇವರ ನಾಮಸ್ಮರಣೆ, ಆತ್ಮಾವಲೋಕನ, ನೈತಿಕ ಪರಿಗಣನೆ, ಸಾಮಾಜಿಕ ವಿಮರ್ಶೆ ಮತ್ತು ಅಜ್ಞಾನದ ನಿರಾಕರಣೆ ಮುಂತಾದ ವಿಷಯಗಳನ್ನು ಉದ್ದೇಶ ಉತ್ತಮ ಸಮಾಜವನ್ನು ಬೆಳೆಸುವ ಗುರಿಯನ್ನು ಹೊಂದಿದ್ದವು. ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು ಸೇರಿದಂತೆ ಅಸಂಖ್ಯಾತ ಕೀರ್ತನೆ ಲೇಖಕರು ಈ ಸಾಹಿತ್ಯ ರಚನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಇದಲ್ಲದೆ, ಕೀರ್ತನೆಗಳ ಜೊತೆಗೆ ಹೊರಹೊಮ್ಮಿದ ತಾತ್ವಿಕ ಪದ್ಯಗಳು ಸಾಮಾನ್ಯ ಜನರ ಭಾವನೆಗಳ ನಿಜವಾದ ಅಭಿವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತವೆ.

ರತ್ನಾಕರವರ್ಣಿಯು 'ಶೃಂಗಾರ ಕವಿ' ಎಂಬ ಬಿರುದನ್ನು ಗಳಿ¹ ಸಾಂಗತ್ಯದ ಅಗ್ರಗಣ್ಯ ಕವಿಯಾಗಿ ನಿಲ್ಲುತ್ತಾನೆ. ಅವರ ಸ್ಮಾರಕ ಕೃತಿ, ಭರತೇಶ ವೈಭವ, ತ್ಯಾಗ ಮತ್ತು ಆನಂದದ ನಡುವಿನ ಸಮತೋಲನವನ್ನು ಪ್ರತಿಪಾದಿಸುವ ಹತ್ತು ಸಾವಿರ ಪದ್ಯಗಳನ್ನು ಒಳಗೊಂಡಿರುವ ಒಂದು ವ್ಯಾಪಕವಾದ ಕವಿತೆಯಾಗಿದೆ. ಮತ್ತೊಂದು ಮಹತ್ವದ ಕೃತಿ, ಸಂಚಿ ಹೊನ್ನಮ್ಮಳ ಅವರ ಹಾದಿಬಡೆಯ ಧರ್ಮ, ಮಹಿಳಾ ಹಕ್ಕುಗಳನ್ನು ಪ್ರತಿಪಾದಿಸುವ ನೈತಿಕವಾಗಿ ಚಾಲಿತ ಕವಿತೆಯಾಗಿದೆ. ಮೈಸೂರು ಅರಸರ ಕಾಲವು ಕನ್ನಡ ಸಾಹಿತ್ಯದಲ್ಲಿ ಅನೇಕ ಪ್ರಮುಖ ಕೃತಿಗಳ ರಚನೆಯನ್ನು ಕಂಡಿತು. ಮಧ್ಯ ಕನ್ನಡ ಮತ್ತು ಹೊಸ ಕನ್ನಡವನ್ನು ಸೇತುವೆ ಮಾಡುವ ಕವಿ ಮುದ್ದಣ

ISBN Number : 978-93-342-6884-3

ಅವರನ್ನು ಸಾಮಾನ್ಯವಾಗಿ 'ಹೊಸ ಕನ್ನಡದ ಮುಂಗೋಳಿ' ಎಂದು ಕರೆಯಲಾಗುತ್ತದೆ, ಇದು ಹೊಸ ಕನ್ನಡ ಓದುಗರ ಆದ್ಯತೆಗಳು ಮತ್ತು ದೃಷ್ಟಿಕೋನಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತದೆ.

20 ನೇ ಶತಮಾನದಲ್ಲಿ ಹೊರಹೊಮ್ಮಿದ ಆಧುನಿಕ ಕನ್ನಡ ಸಾಹಿತ್ಯವು 19 ನೇ ಶತಮಾನದ ಉತ್ತರಾರ್ಧದಲ್ಲಿ ತನ್ನ ಬೇರುಗಳನ್ನು ಗುರುತಿಸುತ್ತದೆ. ಈ ಹೊಸ ಸಾಹಿತ್ಯ ಚಳುವಳಿಯು 20 ನೇ ಶತಮಾನದಲ್ಲಿ ಅರಳಿತು, ಆ ಕಾಲದ ವಸಾಹತುಶಾಹಿ ಸಂಸ್ಕೃತಿ, ಹೊಸ ಶೈಕ್ಷಣಿಕ ವ್ಯವಸ್ಥೆಯ ಪರಿಚಯ, ಆಡಳಿತಾತ್ಮಕ ಬದಲಾವಣೆಗಳು, ಮುದ್ರಣದಲ್ಲಿನ ಪ್ರಗತಿಗಳು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಬೆಳವಣಿಗೆಗಳು, ಇವೆಲ್ಲವೂ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭೂದೃಶ್ಯವನ್ನು ಗಮನಾರ್ಹವಾಗಿ ರೂಪಿಸಿದವು. ಆಧುನಿಕ ಕನ್ನಡ ಸಾಹಿತ್ಯವು ಒಂದು ಶತಮಾನಕ್ಕೂ ಹೆಚ್ಚು ವ್ಯಾಪಿಸಿರುವ ಶ್ರೀಮಂತ ಇತಿಹಾಸವನ್ನು ಹೊಂದಿದೆ, ಇದು ಹಲವಾರು ಸಾಹಿತ್ಯಿಕ ವೈಶಿಷ್ಟ್ಯಗಳು ಮತ್ತು ನಡೆಯುತ್ತಿರುವ ಆವಿಷ್ಕಾರಗಳಿಂದ ನಿರೂಪಿಸಲ್ಪಟ್ಟಿದೆ. ಇದು ನವೋದಯ, ಪ್ರಗತಿಶೀಲ, ನವ್ಯ, ಮತ್ತು ದಲಿತ-ಬಂಡಾಯದಂತಹ ಮಹತ್ವದ ಚಳುವಳಿಗಳನ್ನು ಒಳಗೊಳ್ಳುತ್ತದೆ ಮತ್ತು ಕವನ, ಸಣ್ಣ ಕಥೆಗಳು, ಕಾದಂಬರಿಗಳು, ನಾಟಕ, ಪ್ರಬಂಧಗಳು, ಆತ್ಮಚರಿತ್ರೆಗಳು, ಜೀವನಚರಿತ್ರೆಗಳು ಮತ್ತು ಸಾಹಿತ್ಯ ವಿಮರ್ಶೆ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಪ್ರವರ್ಧಮಾನಕ್ಕೆ ಬಂದಿದೆ.

ನವೋದಯ ಚಳುವಳಿಯು ಹೊಸ ಕನ್ನಡ ಸಾಹಿತ್ಯದ ಆರಂಭಿಕ ಮಹತ್ವದ ಹಂತವನ್ನು ಗುರುತಿಸುತ್ತದೆ, 'ನವೋದಯ' ಪದವು 'ಹೊಸ ಹುಟ್ಟು' ಎಂದು ಅನುವಾದಿಸುತ್ತದೆ. ಬಿ.ಎಂ.ಶ್ರೀ ಅವರ ಕವನ ಸಂಕಲನ, 'ಇಂಗ್ಲಿಷ್ ಹಾಡುಗಳು,' ಹೊಸ ಕನ್ನಡ ಸಾಹಿತ್ಯದ ಔಪಚಾರಿಕ ಆರಂಭವೆಂದು ಗುರುತಿಸಲ್ಪಟ್ಟಿದೆ. ಈ ಪುನರುಜ್ಜೀವನವು ಪಾಶ್ಚಾತ್ಯ ಮತ್ತು ಪೂರ್ವ [1]ದ್ಧಾಂತಗಳಿಂದ ರೂಪುಗೊಂಡಿತು, ವಾರ್ಡ್ಸ್‌ವರ್, ಶೆಲ್ಲಿ, ಕೀಟ್ಸ್, ಬರ್ನ್ಸ್, ಟೆನ್ನಿಸನ್ ಮತ್ತು ಷೇಕ್ಸ್‌ಪಿಯರ್‌ನಂತಹ ಪ್ರಸಿದ್ಧ ಕವಿಗಳಿಂದ ಸ್ಫೂರ್ತಿ ಪಡೆಯಿತು. ಇದು ರಾಷ್ಟ್ರೀಯತೆ, ವೈದಿಕ ಪ್ರಜ್ಞೆ, ಐತಿಹಾಸಿಕ ಮತ್ತು ಪೌರಾಣಿಕ ನಿರೂಪಣೆಗಳು ಮತ್ತು ಬುದ್ಧ, ಬಸವಣ್ಣ, ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರಂತಹ ಪ್ರಭಾವಿ ವ್ಯಕ್ತಿಗಳ ತಾತ್ವಿಕ ಒಳನೋಟಗಳನ್ನು ಪ್ರತಿಬಿಂಬಿಸುತ್ತದೆ. ಈ ವಿಷಯಗಳನ್ನು ಕುವೆಂಪು, ಬೇಂದ್ರೆ, ಡಿ.ವಿ.ಜಿ., ಪು.ತಿ.ನ., ಮತ್ತು ಶಿವರಾಮ ಕಾರಂತರಂತಹ ಬರಹಗಾರರು ವ್ಯಕ್ತಪಡಿಸಿದ್ದಾರೆ, ಅವರು ಭಾಷೆಗೆ ಭಾವನಾತ್ಮಕ ಆಳ, ಚಿಂತನಶೀಲ ಪರಿಗಣನೆ ಮತ್ತು ವೈಜ್ಞಾನಿಕ ಮಸೂರದಿಂದ ಪ್ರವೇಶಿಸಬಹುದಾದ ಮತ್ತು ಜನಪ್ರಿಯ ಭಾಷೆಯನ್ನು ಬಳಸಿದರು.

ISBN Number : 978-93-342-6884-3

'ಪ್ರಗತಿಪರ' ಹೊಸ ಕನ್ನಡ ಎಂದು ಕರೆಯಲ್ಪಡುವ ನಂತರದ ಹಂತವು ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಅದನ್ನು ಹೆಚ್ಚು ಸಹನೀಯವಾಗಿಸುವ ಗುರಿಯನ್ನು ಹೊಂದಿದೆ. ಸೌಂದರ್ಯ ಮತ್ತು ಪ್ರೀತಿಯ ವಿಷಯಗಳ ಮೂಲಕ ಮಧ್ಯಮ ವರ್ಗದ ಪ್ರಣಯ ಸಂವೇದನೆಗಳನ್ನು ಪೂರೈಸುವ ಹಿಂದಿನ ನವೋದಯ ಸಾಹಿತ್ಯಕ್ಕೆ ವ್ಯತಿರಿಕ್ತವಾಗಿ, ಈ ಹಂತವು ಸಮಾಜವಾದ, ಸಮಾನತಾವಾದ, ವಾಸ್ತವಿಕತೆ, ಉದಾರವಾದ ಮತ್ತು ಮಾನವತಾವಾದದಂತಹ ಸೈದ್ಧಾಂತಿಕ ಚಳುವಳಿಗಳಿಗೆ ಪ್ರತಿಕ್ರಿಯೆಯಾಗಿ ಹೊರಹೊಮ್ಮಿತು. ಅದು 'ಕಲೆ ಕಲೆಗಾಗಿ ಅಲ್ಲ; ಬದಲಿಗೆ ಕಲೆ ಜೀವನಾಧಾರಿತವಾಗಿರಬೇಕು.' ಈ ಅವಧಿಯ ಗಮನಾರ್ಹ ಬರಹಗಾರರು ಎ.ಎನ್. ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ ಕೃ, ನಿರಂಜನ, ತರಾಸು, ಬಸವರಾಜ ಕಟ್ಟಿಮನಿ. ಉದಯೋನ್ಮುಖ 'ಹೊಸ' ಸಾಹಿತ್ಯಿಕ ಹಂತವು ಸ್ಥಳೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ ಸಂಪ್ರದಾಯಗಳ ವಿಕಸನ ಸಂವೇದನೆಗಳಿಂದ ಉದ್ಭವಿಸಿದ ಮಹತ್ವದ ಸಾಹಿತ್ಯ ಚಳುವಳಿಯನ್ನು ಪ್ರತಿನಿಧಿಸುತ್ತದೆ. ಈ ಹಂತವು ಸಾಹಿತ್ಯದ ಆಶಯಗಳನ್ನು ಪ್ರತಿಬಿಂಬಿಸುವ ಅಸ್ತಿತ್ವವಾದ, ಅನಾಕ್ರೊನಿಸಂ, ಮನೋವಿಶ್ಲೇಷಣೆ, ಮಾನವತಾವಾದ, ನಿರಾಕರಣವಾದ, ಸಾಂಕೇತಿಕತೆ, ಪ್ರತಿಮಾವಾದ ಮತ್ತು ಮಾರ್ಕ್ಸ್‌ವಾದವನ್ನು ಒಳಗೊಂಡಂತೆ ವಿವಿಧ ತಾತ್ವಿಕ ಮತ್ತು ಸೈದ್ಧಾಂತಿಕ ಪ್ರಭಾವಗಳನ್ನು ಒಳಗೊಳ್ಳುತ್ತದೆ. ಖ್ಯಾತ ಲೇಖಕರಾದ ವಿ.ಕೆ. ಗೋಕಾಕ, ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ್, ಗಂಗಾಧರ ಚಿತ್ತಾಲ್, ಬಿ.¹. ರಾಮಚಂದ್ರ ಶರ್ಮ, ಸು.ರಾಮ್. ಎಕ್ಕುಂಡಿ ಮತ್ತು ಚಂದ್ರಶೇಖರ ಕಂಬಾರರು ಈ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ.

ಹೊಸ ಕನ್ನಡ ಸಾಹಿತ್ಯದ ಮತ್ತೊಂದು ನಿರ್ಣಾಯಕ ಅಂಶವೆಂದರೆ 'ದಲಿತ-ಬಂಡಾಯ' ಹಂತ, ಇದು ಸಾಹಿತ್ಯಕ್ಕೆ ಸಾಮಾಜಿಕ ಪ್ರಜ್ಞೆಯ ವಿಧಾನವನ್ನು ಒತ್ತಿಹೇಳುತ್ತದೆ. ಈ ಆಂದೋಲನವು ತುಳಿತಕ್ಕೊಳಗಾದ, ಬಡವರ ಮತ್ತು ದಲಿತ ಸಮುದಾಯದ ಹಕ್ಕುಗಳು ಮತ್ತು ಪ್ರಾತಿನಿಧ್ಯಕ್ಕಾಗಿ ಪ್ರತಿಪಾದಿಸುತ್ತದೆ. ಮಾರ್ಕ್ಸ್ ವಾದ, ಲೋಹಿಯಾವಾದ, ಅಂಬೇಡ್ಕರ್ ವಾದ, ದಲಿತ ಪ್ಯಾಂಥರ್ಸ್ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಸಾಹಿತಿಗಳಾದ ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಎಂ.ಎನ್. ಜವರಯ್ಯ, ಕುಂ.ವಿ, ಬರಗೂರು ರಾಮಚಂದ್ರಪ್ಪ, ಡಾ.ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ ಈ ಸಾಹಿತ್ಯ ಯುಗದಲ್ಲಿ ಪ್ರಮುಖ ವ್ಯಕ್ತಿಗಳಾಗಿ ಹೊರಹೊಮ್ಮಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕನ್ನಡ ಸಾಹಿತ್ಯದ ವಿಕಾಸದ ಉದ್ದಕ್ಕೂ ಇರುವ ನಿರೂಪಣೆಗಳು ಮತ್ತು ವಿಷಯಗಳು ಸಮಕಾಲೀನ ಜೀವನದ ನೈಜತೆಯನ್ನು ಆಯಾ ಐತಿಹಾಸಿಕ ಸಂದರ್ಭಗಳಿಂದ ರೂಪಿಸುತ್ತವೆ.

ISBN Number : 978-93-342-6884-3

ಇದಲ್ಲದೆ, ಕನ್ನಡ ಸಾಹಿತ್ಯವು ಜೀವನ ಮೌಲ್ಯಗಳನ್ನು ಬೆಳೆಸುವ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತದೆ, ಭವಿಷ್ಯವನ್ನು ಕಲ್ಪಿಸುವಾಗ ಭೂತಕಾಲವನ್ನು ವರ್ತಮಾನದೊಂದಿಗೆ ಸೇತುವೆ ಮಾಡುತ್ತದೆ.

ಪರಾಮರ್ಶನ ಕೃತಿಗಳು :

1. ಸಮಗ್ರ ಗದ್ಯ-3 – ಜಿ.ಎಸ್ ಶಿವರುದ್ರಪ್ಪ

2. ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ –ಬೆಂ.ವಿ.ವಿ

3. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ/ಕನ್ನಡ ಸಾಹಿತ್ಯ - ವಿಕಿಸೋರ್ಸ್

4. ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ - ಎ.ಎಸ್. ಜಯರಾಂ

5. ಕನ್ನಡ ನಾಡಿನ ಚರಿತ್ರೆ ಭಾಗ-1,2,3 - ಡಾ. ಬಿ.ಎ. ಸಾಲೆತ್ತೂರೆ/ ಡಾ. ದೇಸಾಯಿ ಪಾಂಡುರಂಗರಾಯರು , ಡಾ. ಎಸ್.¹. ನಂದಿಮಠ , ಡಾ. ಎಂ.ಎಚ್. ಕೃಷ್ಣ

6. ಬೆಂಗಳೂರು ಬಾಗಿನ-ಸ್ಮರಣ ಸಂಚಿಕೆ - ಸಂ. ಡಾ. ಬೈರಮಂಗಲ ರಾಮೇಗೌಡ, ಪ್ರೊ. ಎಂ.ಜಿ. ಚಂದ್ರಶೇಖರಯ್ಯ

 ISBN Number : 978-93-342-6884-3

ಸಾಮಾಜಿಕ ಸಮಾನತೆಯ ಸಂದೇಶ ಸಾರುವ ಸುಧಾ ಮೂರ್ತಿಯವರ ಗುಟ್ಟೊಂದು ಹೇಳುವೆ

-ಡಾ.ಕೃಷ್ಣೋಜಿ ರಾವ್ ಜಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಬಿ.ಎಂ.ಎಸ್. ಮಹಿಳಾ ಮಹಿಳಾ ಮಹಾವಿದ್ಯಾಲಯ-ಸ್ವಾಯತ್ತ,

ಬಸವನಗುಡಿ, ಬೆಂಗಳೂರು – ೦೪.

ಕನ್ನಡ ಸಾಹಿತ್ಯ ಚರಿತ್ರೆಗೆ ಎರಡು ಸಾವಿರ ವರ್ಷಗಳ ಇತಿಹಾಸ ಇರುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ಪಂಪ ಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗ ಮತ್ತು ಆಧುನಿಕ ಯುಗ.. ಹೀಗೆ ಅದರ ಬೆಳವಣಿಗೆ ಮುಂದುವರಿಯುತ್ತದೆ. ಪ್ರಾಚೀನ ಕಾಲದಿಂದಲೂ ಸಾಹಿತ್ಯವು ಸಾಮಾಜಿಕ ಸಮಾನತೆಯ ಒಂದು ಮಾಧ್ಯಮವಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಇದು ಹನ್ನೆರಡನೆ ಶತಮಾನದ ವಚನ ಸಾಹಿತ್ಯದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಮುಂದೆ ಕೀರ್ತನ ಸಾಹಿತ್ಯದಲ್ಲೂ ಸಾಮಾಜಿಕ ಸಮಾನತೆಯು ಪ್ರಧಾನ ಅಂಶಗಳಲ್ಲಿ ಒಂದಾಗಿತ್ತು. ಮುಂದೆ ಹೊಸಗನ್ನಡ ಸಾಹಿತ್ಯ ಕಾಲದಲ್ಲಿ ಸಾಮಾಜಿಕ ಸಮಾನತೆಯು ಮತ್ತಷ್ಟು ಮಹತ್ವವನ್ನು ಪಡೆಯಿತು. ಹೊಸಗನ್ನಡ ಸಾಹಿತ್ಯ ಘಟ್ಟದಲ್ಲಿ ಕತೆ, ಕಾದಂಬರಿ, ನಾಟಕ, ಆತ್ಮಚರಿತ್ರೆ, ಜೀವನಚರಿತ್ರೆ.. ಪ್ರಮುಖ ಪ್ರಕಾರಗಳಾದವು. ಪ್ರಸ್ತುತ ಅನುಭವ ಕಥನ ರೂಪದಲ್ಲಿರುವ ಡಾ. ಸುಧಾ ಮೂರ್ತಿಯವರ ಕೃತಿಯ ಹಿನ್ನೆಲೆಯಲ್ಲಿ ಅಡಕವಾಗಿರುವ ಸಾಮಾಜಿಕ ಸಮಾನತೆಯ ಚಿಂತನೆಗಳನ್ನು ಈ ಲೇಖನದಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಲಾಗಿದೆ.

ಡಾ. ಸುಧಾ ಮೂರ್ತಿಯವರ 'ಗುಟ್ಟೊಂದು ಹೇಳುವೆ' ಈ ಪುಸ್ತಕ ಕಥೆಯೂ ಅಲ್ಲ, ಕಾದಂಬರಿಯಂತೂ ಅಲ್ಲವೇ ಅಲ್ಲ. ಇದೊಂದು ಕಂಡುಂಡ ಅನುಭವಗಳ ಕಥನ. ಘಟನೆಗಳ ನೈಜ ಚಿತ್ರಣ. ಬಾಲ್ಯದಲ್ಲಿ ತಾವು ಕಂಡು, ಕೇಳಿದ, ಅನುಭವಿಸಿದ ಬದುಕಿನ ಚಿತ್ರಣಗಳನ್ನು ಚಾಚೂ ತಪ್ಪದೇ ಹೇಳಲು ಪ್ರಯತ್ನಿಸಿದ್ದಾರೆ, ಅದರಲ್ಲಿ ಸಫಲತೆಯನ್ನು ಕಂಡಿದ್ದಾರೆ. ಬದುಕಿನ ಬೇರೆ ಬೇರೆ ಆಯಾಮಗಳ ಬಹುಮುಖೀ ಚಿತ್ರಣಗಳನ್ನು ನಮ್ಮ ಕಣ್ಣೆದುರಿಗೆ ತಂದು ಚಿತ್ರಿಸಲು ಲೇಖಕಿ ಪ್ರಯತ್ನಿಸುತ್ತಾರೆ. ಇವರ ಬರವಣಿಗೆಯ ಕೌಶಲ್ಯ ನಮ್ಮನ್ನು ಓದಿನ ಆಕರ್ಷಣೆಗೆ ಸೆಳೆಯುತ್ತದೆ.

ಈ ಕೃತಿಯಲ್ಲಿ ಒಟ್ಟು ಮುವತ್ತೆರಡು ಘಟನೆಗಳಿದ್ದು ಒಂದಕ್ಕಿಂತ ಒಂದು ಅರ್ಥಪೂರ್ಣವಾಗಿ, ರಸವತ್ತಾಗಿ ರಚಿಸಲ್ಪಟ್ಟಿದೆ. ಆಯ್ದ ಕೆಲವು ಘಟನೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ISBN Number : 978-93-342-6884-3

"ವಯಸ್ಸು ಬಂಧನವೆ?" ಎಂಬುದು ಅಜ್ಜಿ-ಮೊಮ್ಮಗಳ ನಡುವಿನ ವಯಸ್ಸಿನ ಬಂಧನವನ್ನು ಪರಿಚಯಿಸುವುದಾಗಿದೆ. ವಿದ್ಯೆಯ ಮಹತ್ವವನ್ನು ಲೇಖಕಿ ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ತ್ರಿವೇಣಿಯವರ ಜನಪ್ರಿಯ ಕಾದಂಬರಿ **'ಕಾಶೀಯಾತ್ರೆ'** ಯನ್ನು ಇಲ್ಲಿ ವಸ್ತುವಾಗಿ ತೆಗೆದುಕೊಂಡಿದ್ದಾರೆ. ಕರ್ಮವೀರದಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ ಈ ಕಾದಂಬರಿಯನ್ನು ಲೇಖಕಿಯು ಪುಟ್ಟ ಬಾಲಕಿಯಾಗಿದ್ದಾಗ ಊರಿನ ಹೆಂಗಸರ ಎದುರು ಓದಿ ಹೇಳುತ್ತಿದ್ದದ್ದು, ಲೇಖಕಿಯ ಅಜ್ಜಿಯೂ ಇದನ್ನು ಕುತೂಹಲದಿಂದ ಕೇಳುತ್ತಿದ್ದದ್ದು, ಎಲ್ಲವೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕತೆಯ ಪ್ರಾರಂಭದಲ್ಲೇ ಹೇಳುವಂತೆ ಸೋಮವಾರ ಬರಬೇಕಿದ್ದ ವಾರಪತ್ರಿಕೆಯು ಅವರ ಊರಿಗೆ ಬುಧವಾರ ಬಂದು ತಲುಪುತ್ತಿತ್ತು. ಈ ಕಾದಂಬರಿಗಾಗಿ ಕೇಳುಗರು ಚಾತಕಪಕ್ಷಿಯಂತೆ ದಾರಿ ಕಾಯುತ್ತಿದ್ದರು.

ಲೇಖಕಿಗೆ ಓದುಲು ಬರುತ್ತಿದ್ದರಿಂದ ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಒಮ್ಮೆ ಲೇಖಕಿ ಒಂದೆರಡುದಿನ ನೆಂಟರ ಊರಿಗೆ ಹೋಗಿದ್ದರಿಂದ ಅಜ್ಜಿಗೆ ಕಾದಂಬರಿ ಮುಂದೇನಾಯಿತು? ಎಂದು ತಿಳಿದುಕೊಳ್ಳಲು ಸಾಧ್ಯವಾಗದೆ ದುಃಖವಾಯಿತು. ಕಾರಣ ಕಾದಂಬರಿಯಲ್ಲಿ ಬರುವ ಅಜ್ಜಿ ಕಾಶೀಯಾತ್ರೆಗೆಂದು ಬಹುದಿನಗಳಿಂದ ಕೂಡಿಟ್ಟಿದ್ದ ಹಣವನ್ನು ಸಾಕು ಮಗಳ ಮದುವೆಗೆಂದು ಕೊಟ್ಟುಬಿಡುವ ಪ್ರಸಂಗವಿದೆ. ಇದನ್ನು ತಿಳಿಯುವ ತವಕದಿಂದ ಚಡಪಡಿಸುತ್ತಾಳೆ. ತನಗೂ ಓದಲು ಬರುತ್ತಿದ್ದರೆ? ಎಂದು ಚಿಂತಿಸುತ್ತಾಳೆ. ಇಲ್ಲಿ ವಿದ್ಯೆಯ ಮಹತ್ವದ ಬಗ್ಗೆ ಲೇಖಕಿ ಪರಿಚಯಿಸುತ್ತಾರೆ.

ಮೊಮ್ಮಗಳು ಊರಿನಿಂದ ಬಂದ ನಂತರ ಅಜ್ಜಿಯು ಓದು-ಬರಹವನ್ನು ಕಲಿಯುವ ತನ್ನ ಇಂಗಿತವನ್ನು ತಿಳಿಸುತ್ತಾಳೆ. ವಯಸ್ಸಿನಲ್ಲಿ ಚಿಕ್ಕವಳಾದರೂ ಗುರುವೆಂದು ತಿಳಿದು ಕಾಲಿಗೆ ನಮಸ್ಕರಿಸುತ್ತಾಳೆ. ಇಲ್ಲಿ ವಿದ್ಯೆಯ ಮಹತ್ವ, ಸರಸ್ವತಿಯ ಸ್ಥಾನದ ಚಿತ್ರಣವಿದೆ. ಕೊನೆಗೆ ಶ್ರದ್ಧೆಯಿಂದ ಸ್ವತಂತ್ರವಾಗಿ ಓದುವುದನ್ನು ಅಜ್ಜಿಯು ಕಲಿಯುತ್ತಾಳೆ.

"ನೀನು ಮೊಮ್ಮಗಳು ಅಂತಾ ನಿನಗೆ ನಮಸ್ಕಾರ ಮಾಡಲಿಲ್ಲ. ಒಂದು ಅಕ್ಷರ ಹೇಳಿಕೊಟ್ಟರೂ ಗುರೂನಾ. ನೀ ನಂಗ ಬೇಕಾದಷ್ಟು ವಿದ್ಯಾ ಕಲ್ಸಿದ್ದಿ, ನಾ ಈಗ ಯಾರ ಸಹಾಯಾನೂ ಇಲ್ಲದೆ ಓದಬಲ್ಲೆ. ನಿನಗೆ ಈ ಮಾತು ಗೊತ್ತದ ಇಲ್ಲೋ? ಗುರೂ ಸ್ಥಾನದಾಗಿದ್ದವರಿಗೆ ನಮಸ್ಕಾರ ಮಾಡಬೇಕು. ಅದಕ್ಕ ಮಾಡಿದೆ". ಎಂಬ ಅಜ್ಜಿಯ ಮಾತುಗಳಲ್ಲಿ ವಿದ್ಯೆಯ ಮಹತ್ವದ ಬಗ್ಗೆ ನಿರೂಪಕಿಯು ತಿಳಿಸಿಕೊಟ್ಟಿದ್ದಾರೆ. ಈ ಘಟನೆಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಕಾದಂಬರಿಯನ್ನು ತಿಳಿಯುವ ಸಾಹಿತ್ಯದ ಅಭಿರುಚಿ ಜನರಲ್ಲಿ ಇದ್ದುದ್ದರ ಪರಿಚಯವಾಗುತ್ತದೆ. ಆದರೆ

 ISBN Number : 978-93-342-6884-3

ಇಂದು ತಂತ್ರಜ್ಞಾನದ ಪ್ರಗತಿಯಿಂದ ಇದರ ಪ್ರಮಾಣ ಕಡಿಮೆಯಾಗುತ್ತಿದ್ದು, ಆ ಸ್ಥಾನವನ್ನು ದೂರದರ್ಶನದಲ್ಲಿ ಬರುವ ಬಗೆಬಗೆಯ ಛಾನೆಲ್ಲುಗಳಲ್ಲಿ ನಿರುಪಯುಕ್ತ ದೈನಂದಿನ ಧಾರಾವಾಹಿಗಳು ಆವಾಹಿಸಿಕೊಂಡಿರುವುದು ವಿಷಾದದ ಸಂಗತಿ.

'ರಷ್ಯದಲ್ಲೊಂದು ಮದುವೆ' ಎಂಬ ಲೇಖನದಲ್ಲಿ ವಿವಾಹದ ಪಾವಿತ್ರ್ಯತೆಯ ಬಗ್ಗೆ ವೈವಿದ್ಯತೆಯ ಬಗ್ಗೆ ಪರಿಚಯಿಸಲಾಗಿದೆ. ಹಿಂದಿನ ಕಾಲದಲ್ಲಿ ಹಲವುದಿನಗಳ ಕಾಲ ನಡೆಯುತ್ತಿದ್ದ ಈ ವಿವಾಹ ಮಹೋತ್ಸವವು ಇಂದು ಎರಡು-ಮೂರು ದಿನಕ್ಕೆ ಸೀಮಿತವಾಗಿ ಕೊನೆಗೆ ಒಂದೇ ದಿನಕ್ಕೂ ಬಂದು ನಿಂತಿರುವುದರ ಸ್ಮರಿಸಲಾಗಿದೆ.

ರಷ್ಯದಲ್ಲಿ ನಡೆದ ಮದುವೆಯ ಪ್ರಸಂಗದ ಮೂಲಕ ಅಲ್ಲಿನ ಜನರಿಗಿರುವ ರಾಷ್ಟ್ರ ಪ್ರೇಮದ ಪರಿಚಯವಾಗುತ್ತದೆ. ಹೊಸದಾಗಿ ಮದುವೆಯಾದ ದಂಪತಿಗಳು ಕಡ್ಡಾಯವಾಗಿ ದೇಶಕ್ಕಾಗಿ ಹೋರಾಡಿ ಹುತಾತ್ಮರಾದ ಸೈನಿಕರ ಸ್ಮಾರಕದಬಳಿ ಬಂದು ಪ್ರಾರ್ಥಿಸುವ ಪ್ರಸಂಗವನ್ನು ಕಂಡು ಗೌರವದಿಂದ ಬರೆದಿದ್ದಾರೆ. "ಅದು ನಮ್ಮ ದೇಶದ ಪದ್ಧತಿ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಮದುವೆಗಳು ಶನಿವಾರ ಇಲ್ಲವೆ ಭಾನುವಾರ ಆಗುತ್ತವೆ. ವರ್ಷದ ಯಾವುದೇ ಮಾಸವಿರಲಿ ಮದುವೆಯಾದ ದಂಪತಿಗಳು ಮದುವೆ ರಿಜಿಸ್ಟರ್ದಲ್ಲಿ ಸಹಿಹಾಕಿದ ತಕ್ಷಣವೇ ನೇರವಾಗಿ ದೇಶದ ಇಂಥ ಸ್ಮಾರಕಗಳಿಗೆ ಬರುತ್ತಾರೆ. ಬೇರೆ ಊರಲ್ಲಿ ಮದುವೆಯಾದರೂ ಪ್ರತಿ ಪಟ್ಟಣದಲ್ಲಿ ಯುದ್ಧ ಸ್ಮಾರಕವಿರುತ್ತದೆ, ಅಲ್ಲಿಯಾದರೂ ಹೋಗುತ್ತಾರೆ. ನಮ್ಮ ದೇಶದ ಪ್ರತಿಯೊಬ್ಬ ಯುವಕನೂ ಸೈನ್ಯದಲ್ಲಿ ಒಂದೆರಡು ವರ್ಷವಾದರೂ ಕೆಲಸ ಮಾಡಿರಲೇಬೇಕು. ಅವನ ಸಾಮಾಜಿಕ ಅಂತಸ್ತು ಏನೇ ಇರಲಿ, ಮದುವೆ ದಿನ ಆತ ಯೋಧರ ಉಡುಪನ್ನು ಧರಿಸಲೇಬೇಕು." ಈ ಮಾತುಗಳನ್ನು ಕೇಳಿದಾಗ ನಮಗೆ ನೆನಪಿಗೆ ಬರುವುದು -ನಮ್ಮ ನಾಡಿನಲ್ಲೂ ಇಂದಿಗೂ ಈ ಸಂಪ್ರದಾಯ ಕೊಡಗಿನಲ್ಲಿ ಜನಜನಿತವಾಗಿರುವುದು ಹೆಮ್ಮೆಯ ಸಂಗತಿ.

"ನಮ್ಮ ದೇಶಕ್ಕಾಗಿ ಪ್ರಾಣ ತೆತ್ತವರು ಸ್ವತಂತ್ರ ಭಾರತವನ್ನು ನೋಡಲೇ ಇಲ್ಲ. ಅದಕ್ಕಾಗಿ ಯಾವ ಸನ್ಮಾನವನ್ನೂ ಬಯಸಲೂ ಇಲ್ಲ. ಆದರೆ ನಮಗೆ ಕೃತಜ್ಞತೆ ಬೇಡವೇ? ನಮ್ಮ ಜೀವನದಲ್ಲಿ ಮದುವೆ ಮಹತ್ವದ ದಿನವಾದರೆ ಆ ದಿನದಂದು ಅವರನ್ನು ನೆನೆಯ ಬೇಡವೇ? ನಾವು ಅಂದಿನ ದಿನ ಏನು ಮಡುತ್ತೇವೆ? ಸಾವಿರಾರು ರೂಪಾಯಿಯ ಸೀರೆಯನ್ನೋ, ಚಿನ್ನದ ಒಡವೆಗಳನ್ನೋ, ಊಟದ ಪಟ್ಟಿಯನ್ನೋ, ಸಂಗೀತದ ಸಭೆಯನ್ನೋ ಹೊಂದಿಸುವುದರಲ್ಲಿ ಮಗ್ನರಾಗಿರುತ್ತೇವೆ. ಕೃತಜ್ಞತೆ ನಮಗೂ ಬೇಡವೆ?" ಎಂದು ಲೇಖಕಿಯು ಪ್ರಶ್ನಿಸುವಲ್ಲಿ ಅರ್ಥಪೂರ್ಣ ಸಂದೇಶವಿದೆ. ಸ್ವಲ್ಪ ಮಟ್ಟಿಗಾದರೂ ನಾವುಗಳು ಇದರ ಬಗ್ಗೆ ಚಿಂತಿಸಬೇಕಾಗಿದೆ.

ISBN Number : 978-93-342-6884-3

'ಶಿಸ್ತಿಲ್ಲದ ಬಾಳು ಹರಿದ ಗಾಳಿಪಟದಂತೆ' ಎಂಬ ಲೇಖವು ಹಸನ್ ಎಂಬ ವಿದ್ಯಾರ್ಥಿಯ ಸುತ್ತ ಹೆಣೆದಿರು ಕತೆಯಾಗಿದೆ. ಶಿಸ್ತಿನ ಮೇಲೆ ತುಂಬಾ ನಂಬಿಕೆ, ವಿದ್ಯಾರ್ಥಿ ದೆಶೆಯಲ್ಲಿಯೇ ಶಿಸ್ತು ಕಲಿಯಬೇಕು ಎನ್ನುವುದರ ಬಗ್ಗೆ ಲೇಖಕಿಗೆ ಅಚಲವಾದ ನಂಬಿಕೆ. ಸೋಮಾರಿಯಾದ ಹಸನ್ ವಿದ್ಯಾರ್ಥಿದೆಸೆಯಲ್ಲಿ ಮಾಡಿದ ತಾತ್ಸಾರದಿಂದಾಗಿ, ಮುಂದೆ ಕಷ್ಟದ ಜೀವನವನ್ನು ಅನುಭವಿಸಬೇಕಾದ ಕತೆಯು ಅರ್ಥಪೂರ್ಣವಾಗಿದೆ. ಆದರೆ "ವಿದ್ಯಾರ್ಥಿ ದೆಸೆಯಲ್ಲಿ ಶ್ರದ್ಧೆ, ಭಕ್ತಿಯಿಂದ ಹಗಲಿರುಳು ಓದಿ ಬರೆದು, ವಿದ್ಯಾರ್ಜನೆಯೆಂದರೆ ಒಂದು ತಪಸ್ಸೆಂಬ ಪರಿಭಾವಿಸಿದವರ ಜೀವನವೆಲ್ಲವೂ ಸುಖವಾಗಿಯೇ ಇರುತ್ತದೆಂದು ಹೇಳಲು ಸಾಧ್ಯವಿಲ್ಲ." ಎಂಬುದು ನನ್ನ ವೈಯಕ್ತಿಕ ಅನಿಸಿಕೆ.

ಆರ್ಥಿಕವಾಗಿ ಸ್ಥಿತಿವಂತರ ಮನೆಯಿಂದಲೇ ಬಂದ ಹಸನ್, ತರಗತಿಗೆ ಸರಿಯಾಗಿ ಬರುತ್ತಿರಲಿಲ್ಲ. ಕಾರಣ ಬೆಳಗಿನ ತರಗತಿಗಳಿಗೆ ಬೇಗನೆ ಎದ್ದು ಬರಲು ಮೈಗಳ್ಳತನ. ಬುದ್ದಿವಂತನಾದರೂ ಸೋಮಾರಿನತ ಅವನನ್ನು ಹೀಗೆ ಮಾಡುತ್ತದೆ. ಹೇಗೋ ಓದಿಕೊಂಡು ಪಾಸಾಗುತ್ತಾನೆ. ಆದರೆ ಈ ಶಿಸ್ತಿಲ್ಲದ ಜೀವನ ಮುಂದುವರೆಯುತ್ತದೆ. ಕಾರಣ ಇಂದು ಹೈಸ್ಕೂಲಿನಲ್ಲಿ ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾತಮ್ಯಾಟಿಕ್ಸ್ ಕಲಿಸಲು ಬೇಕಾಗುವ ಸಾಫ್ಟ್‌ವೇರನ್ನು ಮಾರುವ ಕೆಲಸಮಾಡುತ್ತಿರುತ್ತಾನೆ. ಈ ಹಿಂದೆ ಲೇಖಕಿಯು ಉಪನ್ಯಾಸಕಿಯಾಗಿದ್ದಾಗ ವಿದ್ಯಾರ್ಥಿಯಾಗಿದ್ದ ಹಸನ್ ಇಂದು ಗುರುಗಳು ಹೇಳುತ್ತಿದ್ದ ನೀತಿ ಪಾಠಗಳನ್ನು ಇಂದು ಸ್ವಅನುಭವದಿಂದ ಅರ್ಥಮಾಡಿಕೊಂಡಿದ್ದಾನೆ.

ವಿದ್ಯಾರ್ಥಿಯ ಪರಿಸ್ಥಿತಿಯನ್ನು ಕಂಡು ಲೇಖಕಿಗೆ ಬೇಸರವಾಗುತ್ತದೆ. ಅಲ್ಲದೇ ಇಂದಿಗೂ ಅವನಿಗೆ ಆತ್ಮವಿಶ್ವಾಸದ ನುಡಿಗಳನ್ನೇ ಹೇಳುತ್ತಾಳೆ. "ಹಸನ್, ನಿಮ್ಮ ತಪ್ಪು ನಿಮಗೆ ಗೊತ್ತಿದೆಯಲ್ಲಾ? ನೀವೇಕೆ ಸುಧಾರಿಸಿಕೊಳ್ಳಬಾರದು? ನನಗೆ ಜೀವನದಲ್ಲಿ ಯಾವ ಕಾಲದಲ್ಲಿಯಾದರೂ ನೀವು ಕಲಿಯುವುದು ಸುಲಭ. ಅದರಲ್ಲಿ ನಂಬಿಕೆ ಇದೆ. ಜೀವನದ ಒಂದು ಸಣ್ಣ ಬಡಿದಾಟದಲ್ಲಿ ಸೋತರೆ ಏನಾಯಿತು? ಜೀವನದ ಯುದ್ಧದಲ್ಲಿ ಗೆಲ್ಲಬಹುದಲ್ಲಾ" ಎಂದು ಹೇಳುವ ಮಾತಗಳು ಆತ್ಮವಿಶ್ವಾಸದ ನುಡಿಗಳಾಗಿವೆ.

ಅದಕ್ಕೆ ಹಸನ್ – "ಇಲ್ಲ ಮ್ಯಾಡಂ, ಹಳೆಯ ಚಾಳಿಗಳನ್ನು ಬದಲಿಸುವುದು ಸುಲಭವಲ್ಲ" ಎಂಬ ಮಾತಿಗೆ ಲೇಖಕಿಯು ಹೇಳುವ ಮಾತುಗಳು ಮತ್ತಷ್ಟು ಅರ್ಥಪೂರ್ಣವಾಗಿದೆ. "ಇಲ್ಲ ಹಸನ್, ಇದು ಸಾಧ್ಯವಿದೆ. ಜಗತ್ತಿನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ. ಆದರೆ ಏಕಾಗ್ರಚಿತ್ತ, ಸಂಯಮ ಮತ್ತು ಮನೋಬಲ ಬೇಕು. ನಿಮ್ಮೊಳಗೆ ಅಪಾರವಾದ ಶಕ್ತಿಯಿದೆ. ಅದರ ಅರಿವು ನಿಮಗಿಲ್ಲ. ಹಿರಿಯರು ಹೇಳಿದ ಹಲವು ಮಾತುಗಳನ್ನು

ISBN Number : 978-93-342-6884-3

ನೀವು ಹಗುರವಾಗಿ ತೆಗೆದುಕೊಂಡಿರಿ. ಇನ್ನು ಮುಂದೆ ಹಾಗೆ ಮಾಡಬೇಡಿ. ಇನ್ನಾದರೂ ಎಚ್ಚೆತ್ತುಕೊಳ್ಳಿ. ಸ್ವಾಮಿ ವಿವೇಕಾನಂದರೆ ಹೇಳಿದ್ದಾರೆ – 'ಎದ್ದುನಿಲ್ಲು-ಸನ್ನದ್ಧನಾಗು ಮತ್ತು ಮುಂದೆ ನಡೆ". ಕೌಶಲ್ಯ ಒಂದು ಅಪಘಾತವಲ್ಲ ಬದಲು ಅದು ರೂಢಿಯಿಂದ ಬಂದದ್ದು". ಎಂಬ ಮಾತುಗಳು ಪ್ರತಿಯೊಬ್ಬರಿಗೂ ಉಪಯುಕ್ತವಾದ ನುಡಿಗಳಾಗಿವೆ.

'ಸಲಾಂ ಅಬ್ದುಲ್ ಕಲಾಂ' ಎಂಬ ಲೇಖನವು ಭಾರತರತ್ನ ಅಬ್ದುಲ್ ಕಲಾಂ ರವರ ಸರಳ ಸಜ್ಜನಿಕೆಯ ಜೀವನವನ್ನು ಪರಿಚಯಿಸುವ ಲೇಖನವಾಗಿದೆ. ಕಲಾಂ ರವರು ಲೇಖಕಿಯವರು ಪತ್ರಿಕೆಯಲ್ಲಿ ಬರೆಯುತ್ತಿದ್ದ ಬರಹವನ್ನು ಅಭಿಮಾನದಿಂದ ಪ್ರಶಂಸಿಸುವುದರಿಂದ ಪ್ರಾರಂಭವಾಗುವ ಆತ್ಮೀಯತೆಯು ನಿರಂತರವಾಗುವುದನ್ನು ವಿವರಿಸುತ್ತದೆ. ಕಲಾಂ ರವರು ಎಷ್ಟೇ ಎತ್ತರಕ್ಕೆ ಏರಿದರೂ ಸದಾ ಒಂದೇ ರೀತಿ ಬದುಕಿದ ಸರಳ ವ್ಯಕ್ತಿತ್ವದ ಬಗ್ಗೆ ಸಹೃದಯರಲ್ಲಿ ಅಭಿಮಾನ ಉಂಟಾಗುತ್ತದೆ.

ಲೇಖಕಿಯು ಕಲಾಂರವರ ಬಗ್ಗೆ ಅಭಿಮಾನದಿಂದ ಬರೆಯುತ್ತಾ ಹೋಗುತ್ತಾರೆ. ಪರಸ್ಪರ ತಮ್ಮ ಕೃತಿಗಳ ಬಗ್ಗೆ ಚರ್ಚೆಮಾಡುವುದರ ಬಗ್ಗೆ ತಿಳಿಸಿದ್ದಾರೆ. ಒಮ್ಮೆ ಲೇಖಕಿಯು ತಮ್ಮ ಮಗನಿಗೆ ಕಲಾಂರವರನ್ನು ಭೇಟಿಯಾಗಲು ಸೂಚಿಸುತ್ತಾರೆ. ಹಾಗೆಯೇ ಅವರ ಬಗ್ಗೆ ಈ ಮುಂದಿನಂತೆ ಚಿತ್ರಿಸುತ್ತಾರೆ. "ಮಗೂ, ನಾನು ಅವರ ಬಗ್ಗೆ ಹೆಚ್ಚು ಹೇಳಿದರೆ ಅದು ನಿನಗೆ ಅತಿಶಯೋಕ್ತಿ ಎನ್ನಿಸಬಹುದು. ತಂಗಾಳಿಯ ತಂಪನ್ನು, ಅರಳಿದ ಹೂವಿನ ಸುವಾಸನೆಯನ್ನು ಹೇಗೆ ವರ್ಣಿಸಲಿ? ಅದರಂತೆ ಇಂಥ ವ್ಯಕ್ತಿಯ ಬಗ್ಗೆ ನಾನು ಹೆಚ್ಚು ಹೇಳಲಾರೆ. ನೀನೇ ಸ್ವತಃ ಅನುಭವಿಸಬೇಕು. ನೀನು ಭೇಟಿಮಾಡಿದಾಗ ತಿಳಿದೀತು". ಎಂದು ಹೇಳುವಲ್ಲಿ ಕಲಾಂರವರ ವ್ಯಕ್ತಿತ್ವ ಎಷ್ಟು ಎತ್ತರವಾದ್ದದ್ದು ಎಂಬುದು ತಿಳಿದುಬರುತ್ತದೆ.

"ಬುದ್ಧ ಪೌರ್ಣಿಮೆಯ ದಿನ ಬುದ್ಧನಷ್ಟೇ ಅನುಕಂಪವುಳ್ಳ ಅಬ್ದುಲ್ ಕಲಾಂ ನಮ್ಮ ಆಸ್ಪತ್ರೆಯನ್ನು ಉದ್ಘಾಟಿಸಿದರು. ಎರಡೂವರೆ ಸಾವಿರ ವರ್ಷಗಳ ಹಿಂದೆ 'ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ' ಕರುಣಾಳು ಬುದ್ಧನನ್ನು ನಾವಂತೂ ಕಂಡಿಲ್ಲ. ಆದರೆ ಅವನಂತೆ ಕರುಣಾಮಯಿಯಾದ ಇವರು ಹುಣ್ಣಿಮೆಯ ರಾತ್ರಿಯಂದು ತುಂಬು ಹೃದಯದಿಂದ ಒರಿಸ್ಸಾ ರಾಜ್ಯದಲ್ಲಿರುವ ಭುವನೇಶ್ವರದಲ್ಲಿ ಅತ್ಯಂತ ಮಾನವೀಯತೆಯಿಂದ ಆಸ್ಪತ್ರೆಯ ಉದ್ಘಾಟನೆಯನ್ನು ಮಾಡಿದರು". ಎಂದು ಲೇಖಕಿ ಸುಧಾ ಮೂರ್ತಿಯವರು ಅಭಿಮಾನದಿಂದ ಕಾವ್ಯಾತ್ಮಕವಾಗಿ ನಿರೂಪಿಸಿರುವ ಕ್ರಮ ಅತ್ಯುತ್ತಮವಾಗಿದೆ.

 ISBN Number : 978-93-342-6884-3

'ಜೀವನದಲ್ಲಿ ಯಾವುದೂ ಕೊನೆಯವರೆಗೆ ಇರುವುದಿಲ್ಲ, ಹೂವಾಗಲಿ, ಹಣ್ಣಾಗಲಿ, ಯೌವನವಾಗಲಿ, ಚಿನ್ನ ಬೆಳ್ಳಿಯಾಗಲಿ, ಕೊನೆಯವರೆಗೆ ಇರುವುದು ಕಲಿತ ವಿದ್ಯೆ ಮಾತ್ರ'. ಎಂದು ಸಾಲರುವ ಲೇಖನ **'ಯಾವುದು ಒಡವೆ?'**. 'ಶಾಲೆಗೊಂದು ಗ್ರಂಥಾಲಯ' ಎಂಬ ಧೇಯದೊಂದಿಗೆ ಪ್ರಾರಂಭವಾಗುವ ಈ ಲೇಖನ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ನಾಣ್ಣುಡಿಯೊಂದಿಗೆ ಪೂರ್ಣಗೊಳ್ಳುತ್ತದೆ.

ಕಥಾನಾಯಕಿ ಕುಟ್ಟಮ್ಮ ತನ್ನ ಮಗನಿಗೆ ಕಷ್ಟಪಟ್ಟು ದುಡಿದು, ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸುತ್ತಾಳೆ. ಮುಂದೆ ಅವನು ತನ್ನ ಕಾಲಮೇಲೆ ತಾನು ನಿಂತುಕೊಂಡಾಗ ಅವನಿಂದ ಅವಳು ನಿರೀಕ್ಷಿಸುವುದು ಸಮಾಜಪರ ಸೇವೆಯನ್ನೇ ಹೊರತು. ಸ್ವಾರ್ಥವನ್ನಲ್ಲ!

"ನನ್ನ ಮಗ ಒಂದುಬಾರಿ ನನ್ನನ್ನು ಕೇಳಿದ 'ಅಮ್ಮಾ, ನಾನು ಜೀವನದಲ್ಲಿ ಬೇಕಾದಷ್ಟು ಸಂಪತ್ತು ಗಳಿಸಿದ್ದೇನೆ. ನಿನಗೆ ಏನಾದರೂ ಚಿನ್ನ ಮಾಡಿಸಲಾ? ನಾನು ಕಾಲೇಜಿನಲ್ಲಿದ್ದಾಗ ನಿನ್ನ ಹತ್ತಿರ ಇದ್ದ ಚೂರುಪಾರು ಚಿನ್ನವನ್ನು ನೀನು ಮಾರಿಯೇ ನನ್ನ ಓದಿಗೆ ಸಹಾಯ ಮಾಡಿದ್ದೀಯಲ್ಲವೇ? ಅದಕ್ಕೆ ನಿನಗೆ ಎಷ್ಟು ಪವನ್ ಆದರೂ ಪರವಾಗಿಲ್ಲ ನಾನೂ ಕೊಂಡುಕೊಡುತ್ತೇನೆ". ಎಂದ ಮಗನ ಮಾತಿಗೆ ತಾಯಿಯ ಉತ್ತರ "ಮಗೂ, ಜೀವನದಲ್ಲಿ ನಿಜವಾದ ಆಭರಣವೆಂದರೆ ವಿದ್ಯೆ. ವಿದ್ಯೆಯಿಲ್ಲದವ ರಣ ಹದ್ದಿಗಿಂತ ಕಡೆ. ಮಗೂ, ನಾನೂ ಸಂಸ್ಕೃತ ಮಾಸ್ತ್ರ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರು ಒಂದು ಶ್ಲೋಕವನ್ನು ಹೇಳುತ್ತಿದ್ದರು". ಎಂದು ಹೇಳುವಲ್ಲಿ ತಾಯಿಗೆ ಸಮಾಜದ ಬಗೆಗಿದ್ದ ಒಲವು ಅಭಿವ್ಯಕ್ತವಾಗುತ್ತದೆ.

"ಈ ಹಳ್ಳಿಯಲ್ಲಿ ವಿದ್ಯಾದಾನವನ್ನು ಮಾಡು. ಇಲ್ಲಿ ಉಚಿತವಾಗಿ ಹೆಣ್ಣುಮಕ್ಕಳ ಶಾಲೆಯನ್ನು ತೆರೆ. ನನ್ನಕಾಲದಲ್ಲಿ ಉಚಿತ ಶಾಲೆಗಳು ಹತ್ತಿರವಿದ್ದಿದ್ದರೆ ನಾನು ಖಂಡಿತವಾಗಿ ಸೇರಿ ಓದುತ್ತಿದ್ದೆ. ನನ್ನ ಮಗ ನನ್ನ ಭಾವನೆಯನ್ನು ಅರ್ಥ ಮಾಡಿಕೊಂಡ. ಈಗ ಸ್ವಾತಂತ್ರ್ಯದ ನಂತರ ಅನೇಕ ಸರ್ಕಾರಿ ಶಾಲೆಗಳೂ ಬಂದಿವೆ. ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ನನ್ನ ಮಗ ಈಗಾಗಲೆ ಹುಡುಗಿಯರಿಗಾಗಿ ಹತ್ತು ಶಾಲೆಗಳನ್ನು ತೆಗೆದಿದ್ದಾನೆ". ಎಂದು ಹೇಳುವ ಕುಟ್ಟಮ್ಮ ಅಕ್ಷರಶಃ ಅಕ್ಷರದಮ್ಮನಾಗಿ ಕಂಡುಬರುತ್ತಾಳೆ. ತನಗೆ ಸಿಗದ ವಿದ್ಯೆ ಮತ್ತೊಬ್ಬರಿಗಾದರೂ ಸಿಗಲಿ ಎನ್ನುವ ವಿಶಾಲ ಮನೋಭಾವ ಇಲ್ಲಿ ವ್ಯಕ್ತವಾಗುತ್ತದೆ. ಪ್ರಸ್ತುತ ಇಂದು ಶಿಕ್ಷಣ ಎಂಬುದು ಉದ್ಯಮವಾಗಿ ಪರಿಣಮಿಸುತ್ತಿರುವುದು ವಿಷಾದದ ಸಂಗತಿಯಾಗಿದೆ. ಇವುಗಳ ನಡುವೆಯೂ ಕೆಲವು ದಾನಿಗಳು ಶಾಲಾ ಕಾಲೇಜುಗಳನ್ನು ಕಟ್ಟಿಸಿ ನಿಸ್ವಾರ್ಥವಾಗಿ ವಿದ್ಯಾದಾನವನ್ನು ಮಾಡುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ಲೇಖನದ ಪ್ರಾರಂಭದಲ್ಲಿ ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಕಂಡುಬರುವ ಅತಿಥಿ ಸತ್ಕಾರದ ಬಗೆಗಿನ ಪ್ರಸ್ತಾವನೆ ಕೃತಿಗೆ ಉತ್ತಮ ಚೌಕಟ್ಟನ್ನು ಒದಗಿಸುತ್ತದೆ.

ISBN Number : 978-93-342-6884-3

ಜೀವನ ಸೋಲು, ಅಪಮಾನ, ದುಃಖ ಏನೆಲ್ಲಾ ಪಾಠಗಳನ್ನು ಕಲಿಸುತ್ತದೆ? ಆ ಪಾಠಗಳಿಂದ ಐವತ್ತರ ಅಂಚಿನಲ್ಲಿ ಬರುವಾಗ ಯೌವನದ ಉತ್ಸಾಹ ಕಾದ ನೀರಿನಂತೆ ಮಾಯವಾಗಿ ಜೀವನದ ಬಟ್ಟಲು ಬರಿದೋ ಬರಿದು. ಒಂದು ಕಾಲಕ್ಕೆ ಯೌವನವಿದ್ದಿತ್ತು ಎಂಬುದು ಎಲ್ಲಿಯೋ ಮಾಸಿದ ನೆನಪು, ಪಿಸುಗುಟ್ಟುವ ಮಾತು. ರಾಜಕೀಯ ಮುತ್ಸದ್ದಿ ವಿನ್ಸ್‌ಟನ್ ಚರ್ಚಿಲ್ ರವರ ಅರ್ಥಪೂರ್ಣ ಮಾತುಗಳನ್ನು ಸ್ಮರಿಸುವ ಸುಧಾ ಮೂರ್ತಿಯವರ ಲೇಖನ **'ಅಪ್ರೋ ಜೆ.ಆರ್.ಡಿ.'.** ಈ ಸಾಲುಗಳನ್ನು ಓದುತ್ತಿದ್ದಂತೆ ನಮಗೆ ತ್ರಿವೇಣಿಯವರ **'ಬೆಳ್ಳಿಮೋಡ'** ಕಾದಂಬರಿಯ ಕಥಾನಾಯಕಿ ಕಾದಂಬರಿಯ ಕೊನೆಯಲ್ಲಿ ಹೇಳುವ 'ವಯಸ್ಸಾದ ಮುದುಕಿಗೆ ಯೌವನ ಒಂದು ನೆನಪುಮಾತ್ರ'.. ಎಂಬ ಸಾಲುಗಳು ನೆನಪಿಗೆ ಬರುತ್ತದೆ.

ಲೇಖಕಿಯವರು ಭಾರತೀಯ ವಿಜ್ಞಾನ ಮಂದಿರದಲ್ಲಿ ಕಂಪ್ಯೂಟರ್ ಸೈನ್ಸ್ ಎಂ.ಟೆಕ್. ಅಂತಿಮ ವರ್ಷದಲ್ಲಿ ಓದುತ್ತಿದ್ದಾಗ ನಡೆದ ಘಟನೆಯನ್ನು ಈ 'ಅಪ್ರೋ ಜೆ.ಆರ್.ಡಿ.' ಲೇಖನದಲ್ಲಿ ತಿಳಿಸಲಾಗಿದೆ. ಟೆಲ್ಕೋ ಕಂಪನಿಯು ಉದ್ಯೋಗಕ್ಕಾಗಿ ಅಭ್ಯರ್ಥಿಗಳನ್ನು ಅರ್ಜಿಸಲ್ಲಿಸಲು ತಿಳಿಸಿತ್ತು. ಆದರೆ ಮಹಿಳೆಯರಿಗೆ ಅವಕಾಶವಿಲ್ಲವೆಂದು ತಿಳಿಸಿತ್ತು. ಇದನ್ನು ಕಂಡು ಲೇಖಕಿಗೆ ಅಸಾಧ್ಯವಾದ ಕೋಪ ಬಂದಿತು, ವಿಷಾದವಾಗಲಿಲ್ಲ. ಮುಖ ಕೆಂಜಗದಂತೆ ಕೆಂಪೇರಿತು. ನಾನು ಜೀವನದಲ್ಲಿ ಪ್ರಥಮ ಬಾರಿಗೆ ಲಿಂಗಭೇದಕ್ಕೆ ಗುರಿಯಾಗಿದ್ದೆ. ಎಂದು ಹೇಳುವ ಸುಧಾ ಮೂರ್ತಿಯವರು ಸನ್ಮಾನ್ಯ ಜೆ.ಆರ್.ಡಿ ಟಾಟಾ ರವರಿಗೆ ಒಂದು ಪತ್ರವನ್ನು ಬರೆದರು. ಇದಕ್ಕೆ ಪ್ರತಿಯಾಗಿ ಅಲ್ಲಿಂದ ಒಂದು ಟೆಲಿಗ್ರಾಂ ಬರುತ್ತದೆ. ಸಂದರ್ಶನ ನಡೆದು, ಆಯ್ಕೆಯೂ ಆಗುತ್ತಾರೆ. ಇವರಿಗೆ ಉದ್ಯೋಗದ ಅನಿವಾರ್ಯತೆಯೇನೂ ಇರಲಿಲ್ಲ. ಅಲ್ಲದೆ ಅಮೇರಿಕಾದಲ್ಲಿ ಪಿ.ಹೆಚ್.ಡಿ ಮಾಡುವ ಯೊಚನೆಯಲ್ಲಿರುತ್ತಾರೆ. ತಂದೆಯವರು ಮಗಳ ಈ ವರ್ತನೆಯನ್ನು ಖಂಡಿಸುತ್ತಾರೆ. "ನಿನ್ನ ಮನಸ್ಸಿನಲ್ಲಿ ಹಾಗಿದ್ದರೆ ನೀನು ಪೋಸ್ಟ್ ಕಾರ್ಡ್ ಬರೆದದ್ದೇಕೆ? ನಾಲಿಗೆಗೆ ತೂಕವಿರುತ್ತದೆ. ಆ ಮಾತನ್ನು ಉಳಿಸಿಕೊಳ್ಳಬೇಕು. ಅದಕ್ಕೆ ನೀನು ಈ ಕೆಲಸವನ್ನು ತೆಗೆದುಕೊಳ್ಳಲೇಬೇಕು." ಎಂದು ಹೇಳುತ್ತಾರೆ.

ಕೆಲಸಕ್ಕೆ ಸೇರಿಕೊಂಡ ಸುಧಾ ಮೂರ್ತಿಯವರು ಮುಂದೆ ಜೆ.ಆರ್.ಡಿ ಯವರನ್ನು ಬಹಳ ಹತ್ತಿರದಿಂದ ನೋಡುತ್ತಾರೆ. ಅತ್ಯಂತ ಸರಳ ಸಜ್ಜನಿಕೆಯ ಮೇರು ವ್ಯಕ್ತಿಯೆಂಬುದು ಅರಿವಾಗುತ್ತದೆ. ಅವರ ಮಾರ್ಗದರ್ಶನ, ಪ್ರೋತ್ಸಾಹಗಳೇ ಇಂದು ತಮ್ಮ ಸಾಧನೆಗೆ ಕಾರಣವೆಂದು ಅಭಿಮಾನದಿಂದ ಹೇಳುತ್ತಾರೆ. "ಜಗತ್ತಿನಲ್ಲಿ ಕೃತಜ್ಞತೆ ಎನ್ನುವ ಗುಣವಿದ್ದರೆ ಅದು ದೇವರು ನನಗೆ ದಯಪಾಲಿಸಿದ ವರ. ಆದ್ದರಿಂದ ನಾನಿವರನ್ನು ನೆನೆಯುತ್ತೇನೆ". ಹಾಗಾದರೆ ಈ ವ್ಯಕ್ತಿಗಳು ಯಾರು? ಕಪ್ಪು ಬಿಳಿಯ ಚಿತ್ರದಲ್ಲಿರುವವರು ಸನ್ಮಾನ್ಯ 'ಜೇಮ್‌ಶೇಟ್‌ಜೀ ಟಾಟಾ',

 ISBN Number : 978-93-342-6884-3

ನೀಲಿ ಸೂಟಿನಲ್ಲಿರುವವರು ಸನ್ಮಾನ್ಯ 'ಜೆಆರ್‌ಡಿ ಟಾಟಾ', ನನ್ನ ಜೀವನದ ನದಿಯ ಪಾತ್ರವನ್ನೇ ಬದಲಿಸಿದವರು. ಎಂದು ಅಭಿಮಾನದಿಂದ ಈ ಲೇಖನದಲ್ಲಿ ಪರಿಚಯಿಸುತ್ತಾರೆ.

"ಊರಿಗೆ ಅರಸನಾದರೂ ತಾಯಿಗೆ ಮಗನಲ್ಲವೇ?" ಎಂಬ ಗುರು ಶಿಷ್ಯರ ಪವಿತ್ರ ಸಂಬಂಧವನ್ನು ಸೂಚಿಸುವ ಲೇಖನ **'ಮರೆತುಹೋದ ಇತಿಹಾಸ'.** ಸೆಪ್ಟೆಂಬರ್ ೫ನೇ ತಾರೀಖನ್ನು ನಮ್ಮ ದೇಶದಲ್ಲಿ ಸರ್ವಪಲ್ಲಿ ರಾಧಾಕೃಷ್ಣರ ಜನ್ಮದಿನದ ಪ್ರಯುಕ್ತ ಶಿಕ್ಷಕರ ದಿನಾಚಾರಣೆಯನ್ನು ಆಚರಿಸುತ್ತೇವೆ. ಈ ವಿಚಾರದ ಮಹತ್ವವನ್ನು ಇಂದಿನ ಪೀಳಿಗೆಗೆ ತಲುಪಿಸುವ ಪ್ರಯತ್ನವನ್ನು ಸುಧಾ ಮೂರ್ತಿಯವರು ಅರ್ಥಪೂರ್ಣವಾಗಿ ರಚಿಸಿದ್ದಾರೆ. ಇಂದಿನ ವಿದ್ಯಾರ್ಥಿಗಳಿಗೆ ವಿಶೇಷ ದಿನಾಂಕಗಳ ಬಗ್ಗೆ, ಪುರಾಣಗಳ ಬಗ್ಗೆ ಕನಿಷ್ಟ ಜ್ಞಾನದ ಅರಿವೂ ಇಲ್ಲದುದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ.

ವಿಶೇಷ ದಿನಾಚರಣೆಗಳಂದು ಶಾಲಾ ಕಾಲೇಜುಗಳಿಗೆ ರಜೆಯನ್ನು ಕೊಡುವುದರಿಂದ ಪ್ರಯೋಜನವಿಲ್ಲ. ಅದರ ಬದಲಿಗೆ ಕೆಲವು ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳ ಜ್ಞಾನ ಕ್ಷಿತಿಜವನ್ನು ವಿಸ್ತರಿಸಬೇಕೆಂದು ಸುಧಾ ಮೂರ್ತಿಯವರ ಆಶಯ. "ನಾನು ಶಿಕ್ಷಕಿಯಾಗಿ ಮಕ್ಕಳ ಅಜ್ಞಾನದ ಹೊಣೆಯನ್ನು ಶಿಕ್ಷಕರೇ ಹೊರಬೇಕು ಎನ್ನುತ್ತೇನೆ. ಮಕ್ಕಳಿಗೆ ರಜೆ ಕೊಡುವಾಗ ಏತಕ್ಕಾಗಿ ಎಂದು ತಿಳಿ ಹೇಳುವುದೇ ಇಲ್ಲ. ಹತ್ತಾರು ವರ್ಷ ಹಳೆಯದಾದ ರಾಧಾಕೃಷ್ಣರ ಜೀವನ ಚರಿತ್ರೆಯನ್ನು ಕಾಲೇಜಿನಲ್ಲಿ ಸ್ವಗತ ಎನ್ನುವಂತೆ ಓದುತ್ತೇವೆ. ಮಕ್ಕಳಿಗೆ ಆ ದಿನದ ನೆನಪನ್ನು ಖಾಯಂ ಆಗಿ ಉಳಿಯುವಂತೆ ಯಾವುದೇ ಪ್ರಯತ್ನ ಮಾಡುವುದಿಲ್ಲ. ನಾವು ಮಕ್ಕಳಿಂದ ಆ ದಿನ ಗಿಡ ನೆಡಿಸುವುದು, ಶ್ರಮದಾನ ಮಾಡುವುದು ಅಥವಾ ಪಿಕ್‌ನಿಕ್‌ಗೆ ಕರೆದುಕೊಂಡು ಹೋಗಿ ನಮ್ಮ ನಮ್ಮಲ್ಲಿಯ ಸಂಬಂಧಗಳನ್ನು ಹೇಳಿಸುವುದು, ಚರ್ಚಾಕೂಟಗಳನ್ನು ಏರ್ಪಡಿಸುವುದು. ಇಂಥ ವೇಳೆಯಲ್ಲಿ ಸದುಪಯೋಗವಾಗುವ ಯಾವುದೇ ಕಾರ್ಯಕ್ರಮ ಕೊಡುವುದಿಲ್ಲ. ಇಂಥ ಕಾರ್ಯಕ್ರಮ ಮಾಡಬೇಕಾದರೆ ನಾವು ತುಂಬಾ ಕೆಲಸ ಮಾಡಬೇಕಾಗುತ್ತದೆ, ಕಷ್ಟಪಡಬೇಕಾಗುತ್ತದೆ. ಮಕ್ಕಳಿಗಿಂತ ಹೆಚ್ಚು ರಜೆಯ ಆಸೆ ನಮಗಿರುತ್ತದೆ. ಶಿಕ್ಷಕರು ಈ ರೀತಿ ಇರಬೇಕಾದರೆ ಮಕ್ಕಳಿಗೆ ಜ್ಞಾನ ಹೇಗೆ ಬರಬೇಕು?" ಎಂದು ಆಲೋಚಿಸುವ ಸುಧಾ ಮೂರ್ತಿಯವರು ಸಿನಿಮಾ ನೋಡಲು ಬಂದಿದ್ದ ಶಾಲೆಯ ಮಕ್ಕಳಿಗೆ ಡಾ.ಸರ್ವಪಲ್ಲಿ ರಾಧಕೃಷ್ಣನ್ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸುತ್ತಾರೆ.

"ಹರಿಹರಿ ನಾನೆಂದು ಧನ್ಯನೇನೋ? ಪರರ ಹಿತವನರಿವ ಪರಮ ವೈಷ್ಣವ ಜನರ ಚರಣ ಕಮಲಕೆ ಬಾಗಿ ಧನ್ಯನೆಹೆನೋ?" ಎಂಬ ಗಾಂಧೀಜಿಯವರ ವೈಷ್ಣವ ಜನತೋ ಭಜನೆಯ ಸಾಲುಗಳನ್ನು ಸ್ಮರಿಸುವ ಲೇಖನ **"ಭಾರತದ ಜನಾರಣ್ಯ".**

ISBN Number : 978-93-342-6884-3

ನಮ್ಮ ಸ್ವಂತ ಮನೆ, ಸ್ಥಳಗಳನ್ನು ಬಹಳ ವ್ಯವಸ್ಥಿತವಾಗಿ ಇಟ್ಟುಕೊಳ್ಳುವ ನಾವು ಸಾರ್ವಜನಿಕ ಸ್ಥಳಗಳನ್ನು ನಿರ್ಲಕ್ಷ್ಯದಿಂದ ನೋಡುವುದರ ಬಗ್ಗೆ ಜಾಗೃತಿ ಮೂಡಿಸುವ ಲೇಖನ ಇದಾಗಿದೆ. ಸಾರ್ವಜನಿಕ ನಿಲ್ದಾಣ, ಶೌಚಾಲಯಗಳನ್ನು ಶುಚಿಯಾಗಿಡುವುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯವೆಂದು ಈ ಲೇಖನ ತಿಳಿಸುತ್ತದೆ. ವಿದೇಶದಲ್ಲಿ ಇದ್ದು ಭಾರತಕ್ಕೆ ಹಿಂದಿರುಗಿದ ಜನರು ಹೇಳುವ ಮಾತುಗಳೆಂದರೆ – ವಿದೇಶವೇ ಶ್ರೇಷ್ಠ, ನಮ್ಮ ದೇಶ ನಿಕೃಷ್ಠ. ಆದರೆ ಇದು ಎಷ್ಟರ ಮಟ್ಟಿಗೆ ಸರಿ? ಎಂಬುದನ್ನೂ ಓರೆಗೆ ಹಚ್ಚುವ ಪ್ರಯತ್ನ ಈ ಲೇಖನದಲ್ಲಿದೆ.

ನಮ್ಮ ಭಾರತದಲ್ಲಿ ನಾವೆಲ್ಲರೂ ಮನೆಗಳನ್ನು ತುಂಬಾ ವ್ಯವಸ್ಥಿತವಾಗಿ ಇಟ್ಟುಕೊಳ್ಳುತ್ತೇವೆ. ಆದರೆ ಸಾರ್ವಜನಿಕ ಸ್ಥಳಗಳನ್ನು ಹೊಲಸಾಗಿಡುತ್ತೇವೆ. ಸಾರ್ವಜನಿಕ ಮೂತ್ರ ವಿಸರ್ಜನೆ, ಬೀದಿ ಮುಂತಾದವುಗಳನ್ನು ನಮ್ಮದಲ್ಲ, ಬೇರೆ ಯಾರದೋ, ನಾವೇಕೆ ಅದರ ಮೇಲೆ ಹಣ, ವೇಳೆ ಖರ್ಚು ಮಾಡಿಕೊಳ್ಳಬೇಕು? ಎಂದುಕೊಳ್ಳುತ್ತೇವೆ. ಎಂದು ಹೇಳುತ್ತಾ, ತೆನಾಲಿರಾಮನ ಕಥೆಯನ್ನು ನೆನಪಿಗೆ ತರುತ್ತಾರೆ. ಕಲ್ಲಿನಿಂದ ಮುಚ್ಚಿರುವ ಗುಂಡಿಯಲ್ಲಿ ಪ್ರತಿಯೊಬ್ಬರೂ ಒಂದೊಂದು ಲೋಟ ಹಾಲು ಹಾಕುವ ಕೆಲಸ. ಇಲ್ಲರೂ ಮತ್ತೊಬ್ಬರು ಹಾಲನ್ನು ಹಾಕುತ್ತಾನೆ. ನಾನೊಬ್ಬ ನೀರು ಹಾಕಿದರೆ ತಪ್ಪೇನು? ಎಂದು ನೀರು ಸುರಿದನಂತೆ.. ಕೊನೆಗೆ ಗುಂಡಿ ತೆಗೆದು ನೋಡಿದರೆ, ಅದರ ತುಂಬಾ ನೀರೆ ತುಂಬಿತ್ತು! ಕಾರಣ ಎಲ್ಲರೂ ಹೀಗೆಯೇ ಎಣಿಸಿದ್ದರು. ಈ ಕತೆಯು ಸನ್ನಿವೇಶಕ್ಕೆ ಉತ್ತಮ ಕತೆಯಾಗಿ ಒಪ್ಪುತ್ತದೆ.

ಬೇರೆ ದೇಶಗಳೊಂದಿಗೆ ಹೋಲಿಸುತ್ತಾ, ನಮ್ಮ ದೇಶದ ಬಗ್ಗೆ, ಆಡಳಿತ ವ್ಯವಸ್ಥೆಯ ಬಗ್ಗೆ ಅಸಹನೆಯನ್ನೇ ವ್ಯಕ್ತಪಡಿಸುವವರ ನಡುವೆ ಗ್ರಾಮೀಣ ಭಾಗದಿಂದ ಬಂದರೂ ವಾಸ್ಥವತೆಯನ್ನು ಅರ್ಥ ಮಾಡಿಕೊಂಡಿದ್ದ ಬಸಮ್ಮನ ಮಾತುಗಳು ಗಮನಾರ್ಹವಾದುದಾಗಿದೆ. "ಅವ್ವಾರ ನೀವೇನು ಮಾತಾಡ್ತೀರಿ? ಅದೆಲ್ಲಾ ಚಂದ ಬ್ಯಾರೆ ದೇಶದಾಗ. ನಮ್ಮ ದೇಶದಾಂಗ ಜನಸಂಖ್ಯಾ ಇಲ್ರಿ, ನಾನಾ ನಮ್ಮಳ್ಯಾಗ ನೋಡೆನಿ. ವರ್ಷ ವರ್ಷ ಹೆಚ್ಚೆಚ್ಚು ಕಾಳು, ಕಡಿ ಬೆಳೆತೇವ್ರಿ, ಹಾಲು ಕರಿತೇವೆ. ಆದರೆ ಏನು ಉಪಯೋಗ? ಭಯಂಕರ ಜನಸಂಖ್ಯಾದಿಂದ ಬೆಳೆಸಿದ್ದನೆಲ್ಲಾ ನಾವ ತಿಂದಾಕ್ತೀವಿ. ಏನು ಕಟ್ಟಿಸಿದ್ರೂ ಸುಖ ಇಲ್ಲ. ಅಮೇರಿಕಾ ಅಂಥ ದೊಡ್ಡದೇಶದಾಗ ಇನ್‌ಸುರೆನ್ಸ್ ಇರಲಿಲ್ಲ ಅಂದ್ರ ಎಂಥ ಮನುಷ್ಯಾನು ದಾರ್ಯಾಗ ಸತ್ತುಹೋಗ್ತಾನೆ. ಆದ್ರೆ ನಮ್ಮ ದೇಶದಾಗ ಹಂಗಿಲ್ಲ. ಎಷ್ಟೇ ಬಡತನ ಇದ್ರೂ ಸರಕಾರಿ ಆಸ್ಪತ್ರೆ ಒಳಗ ಇವತ್ತಿಗೂ ಬಡವರಿಗೆ ಟ್ರೀಟ್‌ಮೆಂಟ್ ಸಿಗ್ತವೆ. ಪ್ರತಿ ದೇಶಕ್ಕೂ ಅದರದ್ದ ಕಷ್ಟ ಸುಖ ಇದ್ದೆ ಇರ್‌ತದ್ರೀ" ಎಂದು ಹೇಳುವಲ್ಲಿ ವಾಸ್ತವ ಸ್ಥಿತಿಯ ಪ್ರೌಢ ಚಿಂತನೆಗಳಿವೆ.

ISBN Number : 978-93-342-6884-3

"ಅಮ್ಮಾ ನಿನ್ನ ಕರ್ತವ್ಯವೇನು?" ಲೇಖನವು ತಾಯಿ ಮಗಳ ನಡುವಿನ ಸಂಭಾಷಣೆಯಿಂದ ಮುಂದುವರೆಯುವ ಘಟನೆಯಾಗಿದೆ. ಮಗಳೇ ತಾಯಿಗೆ ಉದಾರ ಗುಣವನ್ನು ತಿಳಿಸಿಕೊಡುವ ನೀತಿ ಮಾತುಗಳಿಂದ ಕೂಡಿದೆ."ಅಮ್ಮಾ ನೀನು ವಿದ್ಯಾವಂತಳಿದ್ದು ಇಷ್ಟೊಂದು ಪುಸ್ತಕಗಳನ್ನು ಓದಿದ್ದೀ, ಬರೆದಿದ್ದೀ, ಜಗತ್ತನ್ನೇ ಸುತ್ತಿ ಬಂದಿದ್ದೀಯಾ, ನಿನಗೆ ಹಣದ ಮೇಲೆ ಮೋಹವಿಲ್ಲ ಅದನ್ನು ಹೊಂದಿದ್ದಕ್ಕೆ ಗರ್ವವಿಲ್ಲ. ಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡುವುದು ನಿನ್ನ ಕರ್ತವ್ಯವಲ್ಲವೇ?" ಎಂದು ಹೇಳಿದ ಮಾತುಗಳಿಂದ ಪ್ರಭಾವಿತಳಾಗಿ ಬಡ ವಿದ್ಯಾರ್ಥಿಯ ಬಾಳು ಬೆಳಕಾಗಲು ಕಾರಣವಾಗುತ್ತದೆ. ಅಲ್ಲದೆ ಮುಂದೆ ಇಕನಾಮಿಕ್ ಟೈಮ್ಸ್ ಅತ್ಯುನ್ನತ ಮನ್ನಣೆಯೂ ದೊರೆಯುತ್ತದೆ. ಒಟ್ಟಾರೆ ಈ ಲೇಖನವು ಗುರು ಶಿಷ್ಯರ ನಡುವಿನ ಉದಾರ ಗುಣದ ದ್ಯೋತಕವಾಗಿದೆ.

ಬಹು ಹಿಂದೆ ಇಂಗ್ಲೇಂಡ್ ಅಥವಾ ಐರ್ಲ್ಯಾಂಡ್ ದೇಶದಲ್ಲಿ ಇದ್ದ ಸುಪ್ರಸಿದ್ಧರಾದ ವೈದ್ಯ ತಂದೆ-ಮಗನ ಕತೆಯನ್ನು ಒಳಗೊಂಡ ಲೇಖನ **"ಲೋಕಕಲ್ಯಾಣಕ್ಕಾಗಿ ಬಲಿ".** ಇಲ್ಲಿ ಮಗ ವೈದ್ಯಕೀಯ ಕ್ಷೇತ್ರದ ಸೇವೆಗಾಗಿ ತನ್ನ ನೋವನ್ನು ಸಹಿಸಿಕೊಳ್ಳುವ ಧಾರುಣ ತ್ಯಾಗ ಅಭಿನಂದನೀಯವಾದುದು. ಕ್ಲೋರೋಫಾರಂ ಮಿಶ್ರಣ ಸರಿಯಾಗಿಲ್ಲದ್ದರಿಂದ ಪ್ರಯೋಗಕ್ಕೆ ಒಳಗಾದ ಮಗ ಸಂಪೂರ್ಣ ನೋವನ್ನು ಅನುಭವಿಸುತ್ತಿದ್ದರೂ ಮುಖದಲ್ಲಿ ತೋರ್ಪಡಿಸುವುದಿಲ್ಲ. ಇದು ವೈದ್ಯನೊಬ್ಬನ ತ್ಯಾಗದ ಪ್ರತೀಕ. "ಅಪ್ಪಾ, ನೀನು ಬೇಕೆಂದು ಇದನ್ನು ಮಾಡಲಿಲ್ಲ. ಸಾವಿರಾರು ಜನರ ಸುಖಕ್ಕಾಗಿ ನಾನು ನನ್ನ ನೋವನ್ನು ತಡೆದುಕೊಂಡಿದ್ದೆ". ಎಂದು ಹೇಳುವ ಮಗನ ಮಾತುಗಳೇ ಇದಕ್ಕೆ ಸಾಕ್ಷಿ.

"ಅಮ್ಮಾ ಅಳಬೇಡ ನನ್ನ ಸಾವಿನಿಂದ ವೈದ್ಯರಿಗೆ ಇನ್ನು ಪ್ರಾಣ ಉಳಿಸಲು ಎಷ್ಟು ಪ್ರಮಾಣದ ಔಷಧಿ ಕೊಡಬೇಕೆನ್ನುವುದು ಗೊತ್ತಾಗಿದೆ. ಅದರಿಂದ ಸಾವಿರಾರು ಜನರು ಹಳದಿ ಜ್ವರದಿಂದ ಬಳಲದೇ ಮುಕ್ತರಾಗುತ್ತಾರೆ. ಅವನ ತಾಯಂದಿರು ನಿನ್ನ ಹಾಗೆ ಅಳುವ ಪ್ರಮೇಯ ಬರುವುದಿಲ್ಲ. ಸಾವಿರ ಜನರ ಒಳಿತಿಗಾಗಿ ಒಬ್ಬನ ಬಲಿ ಅವಶ್ಯವಾಗಿದೆ".. ಎಂದು ಹೇಳುವ ತರುಣನೊಬ್ಬನ ಮಾತುಗಳು "ಲೋಕಕಲ್ಯಾಣಕ್ಕಾಗಿ ಬಲಿ" ಎಂಬ ಶೀರ್ಷಿಕೆಗೆ ಒಪ್ಪುವಂತಿದೆ.

"ಭಾಗ – ವಿಭಾಗ" ಲೇಖನವು ಹಿರಿಯರ ಅನುಭವದ ಬುದ್ದಿ ಮಾತುಗಳು ಎಂತಹ ಅವಗಡಗಳನ್ನೂ ತಪ್ಪಿಸುತ್ತದೆ ಎಂಬುದಕ್ಕೆ ಒಂದು ಉದಾಹರಣೆಯಾಗಿದೆ. ಆಸ್ತಿ ಪಾಲುಗಾರಿಕೆಯಲ್ಲಿ ಅಣ್ಣ ತಮ್ಮಂದಿರ ನಡುವೆ ನಡೆಯುವ ಜಗಳ ಇಲ್ಲಿನ ಕಥಾ ವಸ್ತು. ಕುದುರೆಗಳ ಭಾಗದ ಸನ್ನಿವೇಶ ಸ್ವಾರಸ್ಯಕರವಾಗಿದೆ. ಅಲ್ಲದೆ "ಜೀವನದಲ್ಲಿ

ISBN Number : 978-93-342-6884-3

ಅನುಭವವೇ ಹಿರಿಯ ಗುರು. ನಿಮ್ಮ ತಂದೆಗದು ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಅವರು ಉಯಿಲನ್ನು ಈ ರೀತಿ ಬರೆದರು. ಹಲವು ವೇಳೆ ಅತ್ಯಂತ ಕಠಿಣವಾದ ಕೆಲಸಗಳನ್ನು ಸಣ್ಣ ಸೂಚನೆಯಿಂದ ಬಗೆಹರಿಸಬಹುದು. ಜೀವನದ ಯಾತ್ರೆಯಲ್ಲಿ ನೀವಿನ್ನೂ ಈಗ ತಾನೆ ಹೊರಟ ಪ್ರಯಾಣಿಕರು. ಈ ದಾರಿಯನ್ನು ಸವೆಸಬೇಕಾದರೆ ನಿಮ್ಮ ಸ್ವಚ್ಛ ಮನಸ್ಸು ಮತ್ತು ಹಿರಿಯರಿಂದ ಬಂದ ತಿಳುವಳಿಕೆಯೂ ಬೇಕು". ಎಂಬ ಮಾತುಗಳು ಸಾರ್ವತ್ರಿಕ ಸತ್ಯ.

"ಸಲಿಸು ಎನ್ನ ವಚನವ" ಎಂಬ ಲೇಖನವು ಸುಧಾ ಮೂರ್ತಿಯವರ ಇತರ ಲೇಖನಗಳಂತೇ ವಿದ್ಯೆಯ, ಪುಸ್ತಕದ ಮಹತ್ವವನ್ನು ಸಾರುವ ಕೃತಿಯಾಗಿದೆ. ಲೇಖಕಿಗೆ ತನ್ನ ಅಜ್ಜ ವಿದ್ಯೆ, ಪುಸ್ತಕ, ಗುರುವಿನ ಮಹತ್ವದ ಬಗ್ಗೆ ತಿಳಿಕೊಡುವ ಪರಿ ಅತ್ಯುತ್ತಮವಾಗಿದೆ. ಗುರುವಿನ ಬಗ್ಗೆ ಅರ್ಜುನ ಹೇಳುವಂತೆ "ಈ ಜಗತ್ತಿನಲ್ಲಿ ಯೌವನ, ರಾಜ್ಯ, ಭೂಮಿ, ಚಿನ್ನ ಎಲ್ಲವೂ ಕ್ಷಣಿಕ. ಹಂಚುತ್ತಾ ಹೋದರೆ ಭೂಮಿ ಎಷ್ಟು ದಿನ ಉಳಿದೀತು? ಚಿನ್ನ ಎಷ್ಟು ದಿನ ತಾಳೀತು? ಈ ಧನವನ್ನೆಲ್ಲಾ ಒಂದಿಲ್ಲೊಂದು ದಿನ ಶತ್ರುಗಳು ಬಂದು ತೆಗೆದುಕೊಂಡು ಹೋಗಬಹುದು. ಯೌವನ ಕಾಲಾಂತರದಲ್ಲಿ ನಾಶವಾಗಬಹುದು. ಆದರೆ ವಿದ್ಯೆ ಮಾತ್ರ ಹಾಗಲ್ಲ, ಅದನ್ನು ಯಾರಿಂದಲೂ ದೋಚಲು ಸಾಧ್ಯವಿಲ್ಲ. ಅದನ್ನು ಹಂಚಿದಷ್ಟೂ ಹೆಚ್ಚುತ್ತಾ ಹೋಗುತ್ತದೆ. ಹಾಗೆ ವಿದ್ಯೆಯನ್ನು ಹಂಚುವವನು ಗುರು ಮಾತ್ರ. ಆದ್ದರಿಂದ ಗುರು ದ್ರೋಣರು ನನಗಿಂತ ಸಿರಿವಂತರು". ಎಂಬುದು ಎಷ್ಟು ಅರ್ಥಪೂರ್ಣವಾದುದಾಗಿದೆ. ಅಜ್ಜನ ಮಾತುಗಳನ್ನು ಪರಿಪಾಲಿಸಿದ ಸುಧಾ ಮೂರ್ತಿಯವರು ಇಂದು ಇನ್‌ಫೋಸಿಸ್ ಪ್ರತಿಷ್ಠಾನದ ಅಡಿಯಲ್ಲಿ ಶಾಲೆಗೊಂದು ಗ್ರಂಥಾಲಯ ಯೋಜನೆಯಲ್ಲಿ ಹತ್ತು ಸಾವಿರ ಗ್ರಂಥಾಲಯಕ್ಕೆ ಪುಸ್ತಕ ಕೊಟ್ಟಿರುವುದು ಅಭಿನಂದನೀಯವಾದ ವಿಚಾರವಾಗಿದೆ.

ಸುಖ ಯಾರ ಮನೆಯ ಸೊತ್ತಲ್ಲ, ಎಂದು ಸಾರುವ ಕತೆಯೇ **"ಮರಳುಗಾಡಿನಲ್ಲಿ ಪಯಣ"** ಎಂಬ ಲೇಖನ. ಇಲ್ಲಿ ಬರುವ ಗೋಪಾಲ ಮತ್ತು ರಾಮ ಎಂಬ ಇಬ್ಬರು ತಬ್ಬಲಿ ಮಕ್ಕಳಿಗೆ ಸುಧಾ ಮೂರ್ತಿಯವರು ತೋರುವ ಪ್ರೀತಿ, ವಾತ್ಸಲ್ಯ, ಕರುಣೆ, ಮಮಕಾರ ಎಲ್ಲವೂ ಆದರಣೀಯವಾದುದು. ಓದುವ ವಯಸ್ಸಿನಲ್ಲಿ ಗ್ಯಾರೇಜಿನಲ್ಲಿ ದುಡಿಯುತ್ತಿದ್ದ ಆ ಬಡಪಾಯಿಗಳಿಗೆ ತಿಂಡಿ, ಬಟ್ಟೆ ಕೊಟ್ಟು, ಓದಲು ಪುಸ್ತಕ ಕೊಡುತ್ತಿದ್ದ ಸುಧಾ ಮೂರ್ತಿಯವರ ಉದಾರ ಗುಣಕ್ಕೆ ಅವರೇ ಸಾಟಿ. ಅಲ್ಲದೆ ಬಿಡುವು ಮಾಡಿಕೊಂಡು ಮಕ್ಕಳಿಗೆ ಸಮಯ ಸಿಕ್ಕಾಗ ಹೇಳುತ್ತಿದ್ದ ನೀತಿ ಕತೆಗಳು ಮುಂದೆ ಅವರ ಭವಿಷ್ಯದ ದಿಕ್ಕನ್ನೇ ಬದಲಿಸುವಂತೆ ಮಾಡಿದ್ದು ಅವಿಸ್ಮರಣೀಯ.

"ಅಮ್ಮಾ, ಈ ಕಥೆಯಲ್ಲಿ ನೀವು ಹೇಳಿದ ಕೆಲವು ಮಾತುಗಳನ್ನು ನಾನು ಇನ್ನೂ ಮರೆತಿಲ್ಲ. ವಿದ್ಯಾರ್ಥಿಗಳ ಬಾಳೆಂದರೆ ಒಂದು ಮರುಭೂಮಿ, ಪರೀಕ್ಷೆಯೆಂದರೆ ಒಂದು ಪ್ರಖರವಾದ ಸೂರ್ಯ, ಓದುವಾಗ ಆಗುವ ತೊಂದರೆಗಳೆಂದರೆ ಬಿಸಿ ಮರಳು, ಅಭ್ಯಾಸವೆಂದರೆ ಹಸಿವು ನೀರಡಿಕೆ. ವಿದ್ಯಾರ್ಥಿ ದೆಸೆಯಲ್ಲಿ ನೀವು ಒಬ್ಬರೇ

ISBN Number : 978-93-342-6884-3

ಇರುತ್ತೀರಿ. ಅದೇ ಮರಳುಗಾಡಿನ ಪ್ರವಾಸ. ದಾರಿಯಲ್ಲಿ ಸಿಗುವ ಕಲ್ಲುಗಳೆಂದರೆ ಗಳಿಸಿರುವ ವಿದ್ಯೆ. ನೀವು ಹೆಚ್ಚೆಚ್ಚು ಕಲ್ಲುಗಳನ್ನು ಕೂಡಿಸಿದಷ್ಟೂ, ಹೆಚ್ಚೆಚ್ಚು ವಜ್ರಗಳನ್ನು ಕೂಡಿಸಿದಂತೆ". ಎಂದು ಹೇಳುವ ರಾಮನು ಸುಧಾ ಮೂರ್ತಿಯವರ ಮಾತುಗಳಿಂದ ಪ್ರಭಾವಿತನಾಗಿ ಇಂದು ಕಷ್ಟಪಟ್ಟು ಓದಿ, ಒಂದು ಗ್ಯಾರೇಜಿನ ಮಾಲೀಕನಾದ ಕತೆ ಓದರುಗರಿಗೆ ಸ್ಪೂರ್ತಿಯ ಸೆಲೆಯಾಗುತ್ತದೆ.

"ಯಾರು ಶ್ರೇಷ್ಠರು?" ಎಂಬ ಲೇಖನವು 'ದೃಷ್ಠಿಯಂತೆ ಸೃಷ್ಠಿ' ಎಂಬ ಹೇಳಿಕೆಗೆ ಪುಷ್ಟಿ ಕೊಡುತ್ತದೆ. ಇಲ್ಲಿ ಬರುವ ರತ್ನಪ್ರಭಾ ಎಂಬ ಹೆಣ್ಣು ಗುರುಗಳನ್ನು ಗೌರವಿಸುವುದು. ಗುರುಗಳು ವಿದ್ಯಾರ್ಥಿನಿಯ ಒಳಿತನ್ನು ಗೌರವಿಸುವುದು. ವಿದ್ಯಾರ್ಥಿನಿಯ ತಂದೆ – ಮಗಳನ್ನು ಮತ್ತು ಗುರುಗಳನ್ನು ಗೌರವಿಸುವುದು, ಕಳ್ಳ ವಿದ್ಯಾರ್ಥಿನಿಯ ಪ್ರಾಮಾಣಿಕತೆಯನ್ನು ಗೌರವಿಸುವುದು.. ಪರಸ್ಪರ ಎಲ್ಲವೂ ಶ್ರೇಷ್ಠ ಪಾತ್ರಗಳೇ ಆಗಿರುತ್ತವೆ.

ರತ್ನಪ್ರಭಾ ಗುರುಗಳಿಗೆ ಗುರುದಕ್ಷಿಣೆ ಕೊಡಲೇ ಬೇಕೆಂದು ಸವಾಲನ್ನು ಎದುರಿಸುವುದು, ತಂದೆ ಮಗಳ ಮಾತನ್ನು ಗೌರವಿಸುವುದು, ಗುರು ವಿದ್ಯಾರ್ಥಿನಿಯ ಶ್ರೇಯಸನ್ನು ಬಯಸುವುದು, ಕಳ್ಳ ವಿದ್ಯಾರ್ಥಿನಿಯ ಪ್ರಾಮಾಣಿಕತೆಯನ್ನು ಗೌರವಿಸುವುದು.. ಇವೆಲ್ಲಾ ಅವರವರ ದೃಷ್ಟಿಯಲ್ಲಿ ಬೇರೆ ಬೇರೆ ಯಾಗಿಯೇ ನಿಲ್ಲುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಪಾತ್ರಗಳು ಶ್ರೇಷ್ಠವೆನಿಸುತ್ತದೆ. ರತ್ನ ಪ್ರಭಾ ಮತ್ತು ಕಳ್ಳನ ನಡುವಿನ ಸಂಭಾಷಣೆಯು ನಮಗೆ ಪುಣ್ಯಕೋಟಿಯ ಕತೆಯನ್ನು ನೆನಪಿಗೆ ತರದೆ ಇರಲಾರದು.

" ಪ್ರತಿ ಪ್ರಶ್ನೆಗೆ ಉತ್ತರವಿದೆ ಎನ್ನುವುದು ನಿಜ, ಕೆಲವು ಬಾರಿ ಉತ್ತರವೇ ಇರುವುದಿಲ್ಲ ಇನ್ನುವುದೂ ನಿಜ, ಮಾನವೀಯ ಸಂಬಂಧಗಳಲ್ಲಿ ಇದೇ ಸರಿಉತ್ತರ ಎನ್ನುವುದೂ ತಪ್ಪು. ನಾವು ವ್ಯಕ್ತಿಗಳನ್ನು ಯಾವ ದೃಷ್ಟಿಕೋನದಿಂದ ನೋಡುತ್ತೇವೋ ಅದರಂತೆ ನಾವು ನಮ್ಮ ಅಭಿಪ್ರಾಯವನ್ನು ಹೊಂದಬಹುದು. ಅದಕ್ಕೆ ಒಂದೇ ಅಭಿಪ್ರಾಯವಿರುವುದಿಲ್ಲ" ಎಂಬ ಮಾತು ಈ ಮೇಲಿನ ಕತೆಗೆ ಅತ್ಯುತ್ತಮ ಉದಾಹರಣೆಯಾಗಿದೆ.

"ನಿನ್ನ ಜೀವನದಲ್ಲಿ ನಿನಗೆ ಅತ್ಯಂತ ಉತ್ತಮವಾದ ಸ್ನೇಹಿತನೆಂದರೆ ನೀನೇ. ಅದರಂತೆ ನಿನ್ನ ಜೀವನದಲ್ಲಿ ನಿನಗೆ ಅತೀ ಕಠಿಣ ಶತ್ರುವೆಂದರೆ ನೀನೇ". ಎಂಬ ಮಾತನ್ನು ಸಮರ್ಥಿಸುವ ಲೇಖನ **"ನಮ್ಮ ಕಥೆ".** ಇಲ್ಲಿ ಸುಧಾ ಮೂರ್ತಿ ಮತ್ತು ಇನ್ಫೋಸಿಸ್‌ನ ಚೇರ್‌ಮನ್ ಶ್ರೀ ಎನ್.ಆರ್.ನಾರಾಯಣ ಮೂರ್ತಿಯವರು ಪಟ್ಟ ಪರಿಶ್ರಮ, ಛಲ.. ಎಲ್ಲವೂ ಓದುಗರಿಗೆ ಸ್ಫೂರ್ತಿಯನ್ನು ಒದಗಿಸುತ್ತದೆ.

"ಸ್ವಾತಂತ್ರ್ಯವೆಂದರೆ..?" ಎಂಬ ಲೇಖನವು ಮಕ್ಕಳಿಗೆ ಅತಿಯಾದ ಕಾಳಜಿಯು ಉಂಟುಮಾಡುವ ಪರಿಣಾಮದ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿ ಶ್ರೀಮಂತ ಕುಟುಂಬದ ದಂಪತಿಗಳು ತಮ್ಮ ಮಗನಿಗೆ ಮೆಡಿಕಲ್

ISBN Number : 978-93-342-6884-3

ಸೀಟ್ ಸಿಕ್ಕಾಗ ಅವನನ್ನು ಅಡ್ಮಿಷನ್ ಮಾಡಲು ಅವನ ಜೊತೆಗೇ ಹೋಗುವುದು, ಚಿಕ್ಕ ಮಗುವನ್ನು ನೋಡಿಕೊಳ್ಳುವಂತೆ ನೋಡಿಕೊಳ್ಳುವುದು.. ಒಂದು ಕಡೆ ಕಂಡು ಬಂದರೆ; ಮತ್ತೊಂದು ಕಡೆ ಬಡ, ಮಧ್ಯಮ ವರ್ಗದ ಹುಡುಗ ತಾನೊಬ್ಬನೇ ಪ್ರಯಾಣ ಮಾಡುವುದು.. ಇವೆಲ್ಲವೂ ಭವಿಷ್ಯತ್ತಿನಲ್ಲಿ ಎಂತಹ ಪರಿಣಾಮ ಬೀರುತ್ತವೆಂಬುದರ ಮೇಲೆ ಬೆಳಕು ಚೆಲ್ಲುತ್ತದೆ.

"ಸರಿಯಾದ ದಿಕ್ಕಿನಲ್ಲಿರುವ ಸ್ವಾತಂತ್ರ್ಯ, ನಿಮ್ಮ ಬಾಳಿನಲ್ಲಿ ನಿಮಗೆ ಬೇಕಾದ್ದು ಆರಿಸುವ ಸ್ವಾತಂತ್ರ್ಯ**"** ನಿಮ್ಮ ಆಸಕ್ತಿಯನ್ನು ಗುರುತಿಸಿ ಅದರ ಹಿಂದೆ ಓಡುವ ಸ್ವಾತಂತ್ರ್ಯ, ಆದರೆ ನಮ್ಮ ಸ್ವಾತಂತ್ರ್ಯದಿಂದ ಆಗುವ ಪರಿಣಾಮ ಸಮಾಜಕ್ಕಾಗಲೀ, ದೇಶಕ್ಕಾಗಲೀ ಕೆಟ್ಟ ಪರಿಣಾಮ ತರಬಾರದು. ನಾನು ನಿಜಕ್ಕೂ ಸುದೈವಿ. ಕಾಡಿನಲ್ಲಿ ನಿರಾತಂಕವಾಗಿ ಬೆಳೆದ ಗಿಡದಂತೆ ಇದ್ದೇನೆ.**"** ಎಂಬ ಬಾಲಕನ ಮಾತುಗಳು ಇಂದಿನ ಯುವ ಜನತೆಗೆ ಉಪಯುಕ್ತವಾದುದಾಗಿದೆ.

"ಬಂಜೆ" ಎಂಬ ಶೀರ್ಷಿಕೆಯಲ್ಲಿ ರಚನೆಯಾಗಿರುವ ಸುಧಾ ಮೂರ್ತಿಯವರ ಲೇಖನವು ತಮ್ಮ ಬಾಲ್ಯದಲ್ಲಿ ಪಾಠ ಹೇಳಿದ ಗೌರಮ್ಮ ಎಂಬ ಶಿಕ್ಷಕಿಯ ಜೀವನವನ್ನು ಕುರಿತುದ್ದಾಗಿದೆ. ಜೀವನದಲ್ಲಿ ಎಷ್ಟೇ ಕಷ್ಟ, ಅಪಮಾನ, ಅವಮಾನ, ನಿಂದನೆಗಳಿದ್ದರೂ ಅದನ್ನೆಲ್ಲಾ ಜಯಿಸಿ, ಗೆಲುವನ್ನು ಸಾಧಿಸಿದ ಕತೆಯಾಗಿದೆ. ಸುಧಾ ಮೂರ್ತಿಯವರು ಪ್ರಾಧ್ಯಾಪಕಿಯಾದ ಮೇಲೆ ಪಾಠದ ನಡುವೆ ಜೀವನಕ್ಕೆ ಬೇಕಾದ ನೀತಿಗತೆಗಳನ್ನು ಹೇಳಲು ಬಾಲ್ಯದ ಶಿಕ್ಷಕಿಯಾದ ಗೌರಮ್ಮನೇ ಸ್ಫೂರ್ತಿ, ಕಾರಣವೆಂದು ಅಭಿಮಾನದಿಂದ ಹೇಳಿರುವುದು ನಿಜಕ್ಕೂ ಶ್ಲಾಘನೀಯ.

"ತಾಳ್ಮೆ ಇರಲಿ. ತಾಳಿದವನು ಬಾಳಿಯಾನು. ಪ್ರತಿಯೊಬ್ಬರ ಜೀವನದಲ್ಲಿ ಕಷ್ಟಗಳು ಬಂದೇ ಬರುತ್ತವೆ. ಆಗ ನೀವು ವ್ಯಕ್ತಿತ್ವವನ್ನು ಕಷ್ಟಗಳಿಗಿಂತ ದೊಡ್ಡದಾಗಿ ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಈ ರೀತಿ ಬೆಳೆಸಿಕೊಳ್ಳುವ ಸಾಮರ್ಥ್ಯವಿರುತ್ತದೆ. ಆದರೆ ಅದರ ಅರಿವಿರುವುದಿಲ್ಲ. ನೀವು ಕಷ್ಟಗಳಿಗಿಂತ ದೊಡ್ಡದಾಗಿ ಬೆಳೆದರೆ ನಿಮ್ಮೆದುರಿಗೆ ಆ ಸಮಸ್ಯೆಯು ಚಿಕ್ಕದಾಗುತ್ತದೆ. ಆಗ ನೀವು ಅದನ್ನು ಸುಲಭವಾಗಿ ಪರಿಹರಿಸಬಹುದು. ಅಕಸ್ಮಾತ್ ನೀವು ಕಷ್ಟಗಳಿಗೆ ಹೆದರಿಕೊಂಡರೆ ಅವು ಹಿಮಾಲಯ ಪರ್ವತದಂತೆ ಬೆಳೆದು ನಿಮ್ಮನ್ನು ಜಜ್ಜಿ ಹಾಕುತ್ತವೆ..**"** ಎಂದು ಹೇಳುವ ಸುಧಾ ಮೂರ್ತಿಯವರ ಮಾತುಗಳು ಪ್ರತಿಯೊಬ್ಬರಿಗೂ ಉಪಯುಕ್ತವಾಗುವ ಸರ್ವಕಾಲಿಕ ಸತ್ಯಗಳಾಗಿವೆ.

ISBN Number : 978-93-342-6884-3

ಹೀಗೆ ಸುಧಾ ಮೂರ್ತಿಯವರ **"ಗುಟ್ಟೊಂದು ಹೇಳುವೆ"** ಎಂಬ ಕೃತಿಯು ಹಲವು ಅನುಭವದ ಲೇಖನಗಳನ್ನೊಳಗೊಂಡ ಕಥಾ ಕಣಜ, ಸಾರಾಮೃತವಾಗಿ ಕಂಡುಬರುತ್ತದೆ. ಸಾಮಾಜಿಕ ಸಮಾನತೆಯನ್ನು ಸಾರುವ ಕೃತಿಯಾಗಿ ಕಂಡುಬರುತ್ತದೆ.

ಗ್ರಂಥ ಋಣ

೧. ಗುಟ್ಟೊಂದು ಹೇಳುವೆ – ಡಾ. ಸುಧಾ ಮೂರ್ತಿ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು. ಪೂರ್ಣಿಮಾ ಪ್ರಿಂಟರ್ಸ್, ಮಾರ್ಚ್ ೨೦೨೩.

 ISBN Number : 978-93-342-6884-3

ಜಾಗತಿಕ ಸಂದರ್ಭದಲ್ಲಿ 'ನಿಮ್ಮೊಡನಿದ್ದೂ ನಿಮ್ಮಂತಾಗದೆ': ಒಂದು ಅವಲೋಕನ

ಮೊಹಮ್ಮದ್ ಮುಸೇಬ್

ಕನ್ನಡ ಅಧ್ಯಯನ ವಿಭಾಗ,

ಜೈನ್ ವಿಶ್ವವಿದ್ಯಾಲಯ, ಜೆ.ಪಿ ನಗರ,

ಬೆಂಗಳೂರು- 560078

ಇವನಾರವ, ಇವನಾರವ, ಇವನಾರವ? ನೆಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯ. ಬಸವಣ್ಣನವರ ಈ ವಚನವನ್ನು ತಾರ್ಕಿಕವಾಗಿ ಅವಲೋಕಿಸಿದಾಗ ಯಾವುದೇ ಒಬ್ಬ ವ್ಯಕ್ತಿಯಲ್ಲಿ ಪರಕೀಯ ಭಾವನೆ ಉಂಟಾಗುವಲ್ಲಿ ಬೇರೆ ಯಾರೂ ಕಾರಣವಾಗಿರದೆ, ಸ್ವತಹ ನಾವೇ ಕಾರಣವೆಂಬ ಭಾವನಾಂಶ ಇಲ್ಲಿ ವ್ಯಕ್ತಗೊಳ್ಳುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನದ ಶೀರ್ಷಿಕೆ ಹಾಗೂ ಕವನವನ್ನು ವಿಶ್ಲೇಷಿಸಿದಾಗ ಇದೇ ಭಾವನೆಗಳು ವ್ಯಕ್ತಗೊಂಡಿರುವುದು ಸ್ಪಷ್ಟಗೊಳ್ಳುತ್ತದೆ. ಆದರೆ ಬಸವಣ್ಣನವರು ನಮ್ಮ ಸಂಬಂಧ ನಮ್ಮವರೊಂದಿಗೆ ಹೇಗಿರಬೇಕೆಂದು ಸೂಚಿಸುತ್ತಿದ್ದರೆ, ಕೆ.ಎಸ್ ನಿಸಾರ್ ಅಹಮದ್‌ರವರು ತನ್ನ ಸಂಬಂಧ ತನ್ನವರೊಂದಿಗೆ ಹೇಗಾಗಿದೆ ಎಂದು ವಿಷಾಧಿಸುತ್ತಿರುವುದು ಅತ್ಯಂತ ಚಿಂತಾಜನಕ ವಿಚಾರವಾಗಿದೆ.

"ಸಂಜೆ ಐದರ ಮಳೆ" ಕವನ ಸಂಕಲನದಲ್ಲಿರುವ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆಯು, 28 ಡಿಸೆಂಬರ್ 1969ರಲ್ಲಿ ಮೊದಲ ಬಾರಿಗೆ 'ಕರ್ಮವೀರ' ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು, ಅತ್ಯಂತ ಸೂಕ್ಷ್ಮ, ಭಾವ ಪ್ರಧಾನ ಸಂವೇದನೆಯುಳ್ಳ ಕವಿತೆಯಾಗಿ ಕಂಡು ಬರುತ್ತದೆ. ಬಹು ಸಂಸ್ಕೃತಿಯಲ್ಲಿ ಸಾಂಸ್ಕೃತಿಕ ಮಹತ್ವಕ್ಕೆ ಬೆಲೆಯನ್ನು ಕಟ್ಟುವ ನಾಡಿನಲ್ಲಿ ಹುಸಿತನ, ಕಪಟತನ, ಸಂಶಯ, ಅನುಮಾನ, ತೋರಿಕೆಯ ಸಂಬಂಧಕ್ಕೆ ಬಲವಂತವಾಗಿ ಜ್ಯೋತಿ ಬೀಳಬೇಕಾದ ಅನಿವಾರ್ಯತೆಯನ್ನು ವಿಡಂಬನಾತ್ಮಕವಾಗಿ ವ್ಯಕ್ತಪಡಿಸಿರುವುದು, ನಿಜಕ್ಕೂ ಸಂವೇದನೆ ಉಳ್ಳವರಿಗೆ ಮನದಾಳದಿಂದ ಕಾಡುವ ಕವಿತೆಯಾಗಿ ಕಂಡುಬರುತ್ತದೆ.

ಈ ಕವಿತೆಯ ಆಳಕ್ಕೆ ಹೊಕ್ಕಿ ನೋಡುವ ಸಂದರ್ಭದಲ್ಲಿ ಮೊದಲಿಗೆ ಎದುರುಗೊಳ್ಳುವುದು ಕವಿತೆ ರಚನೆಯಾದ ನವ್ಯ ಕಾಲ ಸಂದರ್ಭ. ಪರಿಕೀಯತೆ, ಅನಾಥ ಪ್ರಜ್ಞೆ, ಆತಂಕ, ನಿರಾಸೆ, ಶೋಧನೆ, ವಿಡಂಬನೆಯೇ

ISBN Number : 978-93-342-6884-3

ಮುಖ್ಯ ಲಕ್ಷಣಗಳುಳ್ಳ ಕಾವ್ಯ ಸಂದರ್ಭದಲ್ಲಿ ಒಬ್ಬ ನವ್ಯ ಕವಿಯಿಂದ ಬಯಸುವಂತಹದುದ್ದೆ 'ನಿಮ್ಮೊಡನಿದ್ದೂ ನಿಮ್ಮಂತಾಗದೆ'. ಇಲ್ಲೇ ಹುಟ್ಟಿ, ಇಲ್ಲೇ ಬೆಳೆದು, ತನ್ನವರೊಡನೆಯೇ ಇದ್ದು, ತನ್ನವರ ನಡುವೆಯೇ ಪರಕೀಯರಾಗುವ ಮಾನಸಿಕ ತೊಳಲಾಟ, ತಾಕಲಾಟ, ಸಂಕಟದೊಂದಿಗೆ ಕವಿ ಎಷ್ಟರ ಮಟ್ಟಕ್ಕೆ ಇಕ್ಕಟ್ಟಿನ ಬದುಕನ್ನು ಸಾಗಿಸಿದ್ದಾರೆ ಎಂಬುದಕ್ಕೆ ಈ ಕವಿತೆಯೇ ಸಾಕ್ಷಿ. ಪರಕೀಯ ಭಾವನೆ ಎಂಬುದು ಪರಕೀಯರಾದರೆ ಮಾತ್ರವಲ್ಲದೆ, ಸ್ವಜನ, ಬಂಧು-ಬಾಂಧವರ ನಡುವೆಯೂ ಬರಬಹುದು. ಸಾಮಾಜಿಕ ಸ್ಥಿತಿ-ಗತಿ, ಧಾರ್ಮಿಕ ಬೇಧ ಭಾವ, ಭಾಷಿಕ ತಾರತಮ್ಯ, ರಾಜಕೀಯ ದೊಂಬರಾಟಗಳಿಂದ ನಮ್ಮವರ ನಡೆವೆಯೂ ನಾವು ಪರಕೀಯರಾಗಿರುವುದನ್ನು ಈ ಕವಿತೆ ಕಟ್ಟಿಕೊಡುತ್ತದೆ.ಇಲ್ಲಿ ಕವಿಯ ಮನಸ್ಸು ತೀರ ಆಘಾತಕ್ಕೆ ಒಳಗಾಗುತ್ತಿರುವುದು ಅನುಮಾನಿಸುತ್ತಿರುವವರು, ಪರಕಿಯರಾಗಿಸುತ್ತಿರುವವರು, ಅನಾಥ ಪ್ರಜ್ಞೆಗೆ, ಆತಂಕಕ್ಕೆ, ನಿರಾಸೆಗೆ ದೂಡುತ್ತಿರುವವರು ಅನ್ಯರಾರಲ್ಲ, ತಮ್ಮವರೇ ಆಗಿರುವುದರಿಂದ ಎಂಬುದು ಗ್ರಹಿಸಬೇಕಾಗುತ್ತದೆ. ಮುಖವಾಡಗಳನ್ನು ಧರಿಸಿ ಬದುಕುವ ತನ್ನವರ ನಡುವೆಯೇ ತಾನೂ ಒಂದು ಮುಖವಾಡ ಧರಿಸಿಕೊಂಡು ಬದುಕಬೇಕಾದ ಅನಿವಾರ್ಯ ಹಾಗೂ ಸಂಕಟದ ಸ್ಥಿತಿಯನ್ನು ಕವಿ ಒಪ್ಪಿತ ಮನಸ್ಸಿನಿಂದ ಅನುಸರಿಸದೇ, ಬಲು ಕಷ್ಟದ ಕೆಲಸ ಎನ್ನುವಾಗ ಇದರ ಆಳ ಮತ್ತಷ್ಟು ಹುದುಗಿ ಅದು ಕವಿತೆಯೊಳಗೆ ಬಹಿರಂಗವಾಗಿ ವ್ಯಕ್ತಪಡಿಸಿದ್ದಾರೆ ಎನ್ನಬಹುದು.

"ನಿಮ್ಮೊಡನೆಯೇ ಇದ್ದು, ನಿಮ್ಮವನೆಂದು ಭಾವಿಸಲಿಲ್ಲ" ಎಂಬ ತಕರಾರಿನೊಂದಿಗೆ ಹಾಗೂ "ನಿಮ್ಮೊಡನೆಯೇ ಇದ್ದು ನಿಮ್ಮಂತಾಗಲಿಲ್ಲ" ಎನ್ನುವ ಎರಡು ವಿಷಾದದ ಭಾವನೆಗಳು ಎದುರು-ಬದರುಗೊಂಡು, ಕವಿಯು ತನ್ನೊಳಗಿನ ಸೂಕ್ಷ್ಮ ಸಂವೇದನೆಗಳನ್ನು ಹೊರಹಾಕುತ್ತಿರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. 'ಜಗ್ಗಿದ ಕಡೆ ಬಾಗದೆ, ನಾನು ನಾನೇ ಆಗಿ', 'ನಿಮ್ಮ ಕಪಟ ಗೊತ್ತಿದ್ದರೂ ಗೊತ್ತಿಲ್ಲದಂತೆ ನಟಿಸಿ' ಎನ್ನುವ ಸಾಲುಗಳ ಮೂಲಕ ಕವಿ ತನ್ನತನವನ್ನು ಎಂದೂ ಬಿಟ್ಟುಕೊಡದೆ, ನಿತ್ಯನಿರಂತರ ಕಾಪಾಡಿಕೊಳ್ಳುತ್ತಾ, ತನ್ನ ಸಭ್ಯತೆಯನ್ನು, ಸಂಯಮವನ್ನೂ ಎಂದು ಕಳೆದುಕೊಳ್ಳದೆ, ಕವಿತೆಯ (ಬದುಕಿನ) ಉದ್ದಕ್ಕೂ ಸ್ವಾಭಿಮಾನವನ್ನು ಉಳಿಸಿಕೊಂಡಿರುವ ಬಗೆ ಇಲ್ಲಿ ಮತ್ತೆ-ಮತ್ತೆ ಸಹೃದಯರಲ್ಲಿ ಹೊಸ ಆಲೋಚನೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಕವಿ ತನ್ನ ವೈಯುಕ್ತಿಕ ಭಾವನೆಗಳಾದ ಆತಂಕ, ಭಯ, ನಿರಾಸೆ, ಶೋಧಗಳೆಲ್ಲವೂ ವಿಸ್ಮೃತಗೊಳ್ಳುತ್ತಾ, ವೈಯುಕ್ತಿಕ ನೆಲೆಯಿಂದ ಸಾಮೂಹಿಕ ನೆಲೆಗೆ ಜಿಗಿಯುತ್ತಿರುವುದೇ ಇಂದು ಈ ಕವಿತೆ ಮತ್ತೆ ಚರ್ಚೆಗೆ ಒಳಗಾಗುತ್ತಿದೆ ಎಂದು ಭಾವಿಸಬೇಕಾಗುತ್ತದೆ.

ISBN Number : 978-93-342-6884-3

'ಮನುಷ್ಯ ಜಾತಿ ತಾನೊಂದೆ ವಲಂ', 'ಕಾಯ ಸಂಬಂಧ, ಜೀವ ಸಂಬಂಧ, ಪ್ರಾಣ ಸಂಬಂಧ, ಇಂತೀ ತ್ರಿವಿಧ ಸಂಬಂಧವನರಿದಡೆ ಆತನೇ ಸಂಬಂಧಿ ಕಾಣ ಗುಹೇಶ್ವರ'. 'ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ', 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುತ್ತಾ ಶತ-ಶತಮಾನಗಳಿಂದಲೂ ಜ್ಞಾನ ದೀವಿಗೆಯನ್ನು ಉಜ್ವಲಿಸುತ್ತಿರುವ ಕಂನಾಡಿನಲ್ಲಿ ನವ್ಯ ಕವಿಗಳಿಗೆ ಕಾಡುವ ಪರಕೀಯತೆ ಇಲ್ಲಿ ಪ್ರಶ್ನಾರ್ಹವಾಗಿ ಉಳಿಯುತ್ತದೆ. ಅಥವಾ ಕಾಲದ ಒತ್ತಡವೋ ಎಂಬ ಅನುಮಾಣವೂ ಹುಟ್ಟಿಸುತ್ತದೆ. ಆದರೆ ಅದು ಕೇವಲ ನವ್ಯ ಕಾಲ ಅಥವಾ ನಿಸಾರ್ ಅಹಮದ್ ರವರಿಗೆ ಮಾತ್ರ ಸೀಮಿತಗೊಳ್ಳದೆ, ೨೧ನೇ ಶತಮಾನದ ಜಾಗತಿಕ ಸಂದರ್ಭದಲ್ಲೂ ಒಂದಲ್ಲಾ ಒಂದು ಕಾರಣದಿಂದ, ಮನುಷ್ಯ ಅದು ತನ್ನ ಹುಟ್ಟು, ಜಾತಿ, ಧರ್ಮ, ಭಾಷೆ, ಲಿಂಗ, ಸಂಪ್ರದಾಯ, ಸಂಸ್ಕೃತಿಗಳಿಂದ ಪರಕೀಯನಾಗಿಯೇ ಉಳಿದಿರುವುದು ನಿಮ್ಮೊಡನಿದ್ದು ನಿಮ್ಮಂತಾಗದೆ ಕವಿತೆಯು, ಬಹುಸಖ್ಯಾತರ ಸರ್ವಕಾಲಿಕ ಸತ್ಯಕ್ಕೆ ರೂಪಕವಾಗಿ ಬೆಳೆದು ನಿಂತಿದೆ ಎನ್ನಬಹುದು.

ಜಾಗತಿಕ ಸಂದರ್ಭದಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ, ಸರ್ವೋದಯ, ಮಾನವೀಯ ಮೌಲ್ಯ, ಸಮ-ಸಮಾಜ, ಸಬ್ ಕಾ ಸಾಥ್- ಸಬ್ ಕಾ ವಿಕಾಸ್ ಎಂಬುದೇ ಅಂತರ್ಜಾಲ, ಸಾಮಾಜಿಕ ಜಾಲತಾಣ ಹಾಗೂ ಭಾಷಣಗಳ ಉತ್ತುಂಗದ ವಿಚಾರಗಳಾದರೂ, ಎಲ್ಲರೊಂದಿಗಿದ್ದು, ಎಲ್ಲರಂತಾಗದ ಮನೋಸ್ಥಿತಿ ಮಾತ್ರ ಯಥಾವತ್ತಾಗಿ ಉಳಿದಿದೆ ಎಂಬುದನ್ನು ಕಡೆಗಣಿಸಲಾಗದು. ಪ್ರಜಾಪ್ರಭುತ್ವದಲ್ಲಿ ಮಾನವೀಯ ಮೌಲ್ಯಗಳೇ ಮೂಲ ಬಿಂದುವಾಗಿ ಬಿಂಬಿಸಿದರೂ, ಚರ್ಚು, ಬಸದಿ, ಮಸೀದಿ, ಗುರುದ್ವಾರಗಳ ಮೇಲಿನ ದಾಳಿ ನಿಲ್ಲಲಿಲ್ಲ. ಜನರ ನಡುವೆ ಅವರ ಆಹಾರ, ಬಟ್ಟೆ, ಆಚಾರ-ವಿಚಾರ, ಸಂಪ್ರದಾಯ, ನಂಬಿಕೆಗಳ, ಅಪನಂಬಿಕೆ ಮುಕ್ತಾಯಗೊಳ್ಳಲಿಲ್ಲ. ಕಲೆ, ಸಾಹಿತ್ಯ, ಆಟ, ಪೀಠಗಳಲ್ಲಿ ರಾಷ್ಟ್ರೀಯತೆಯ ಧಾತು ಸಾಬೀತಾಗಲಿಲ್ಲ. ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದರೂ, ದಾಖಲೆಗಳನ್ನು ಮಾಡಿಸಿಕೊಳ್ಳಲಾಗಲಿಲ್ಲ. ಮಾಡಿಸಿಕೊಂಡರು ನಂಬಿಸಲಾಗದೆ ಮತ್ತೆ-ಮತ್ತೆ ಪರಕೀಯನೆಂಬ ಭಾವನೆಗಳಿಗೆ ಮನಸ್ಸು ಒಡ್ಡುವಂತಹದ್ದು ಸಹಜವಾಗಿಯೇ ಬಿಟ್ಟಿದೆ. ಆದರೆ ಏಕೆ? ಇಂತಹ ನೂರಾರು ಪ್ರಶ್ನೆಗಳು ಇಂದಿಗೂ ಪ್ರಶ್ನಾರ್ಥಕವಾಗಿ ಉಳಿದಿರುವುದು ಆತಂಕದ ವಿಚಾರ.

ಈ ಪ್ರಶ್ನೆಗಳು ಬಹುಸಂಖ್ಯಾತರಲ್ಲಿ ಆಗಾಗ ಕಿಚ್ಚನ್ನು ಹತ್ತಿಸುತ್ತಿದ್ದರೂ, ಕಿರುಚಿಕೊಳ್ಳುತ್ತಿರುವವರ ಬಾಯಿಯ ಎಂಜಲೇ ಅದನ್ನು ಶಮನಗೊಳಿಸುತ್ತಿರುವುದು, ನಿಮ್ಮಡನಿದ್ದೂ ನಿಮ್ಮಂತಾಗದೆ ಎಂಬ ಭಾವವನ್ನು ಮತ್ತೆ-ಮತ್ತೆ ಉದ್ರೇಕಿಸುತ್ತದೆ. ಅಧಿಕಾರದ ಪತಾಕೆ ಏರುತ್ತಿದ್ದಂತೆ ಅದರ ಬಣ್ಣ, ಆಕಾರಗಳೆಲ್ಲವೂ-ವಿಕಾರಗೊಂಡು ಮೂಲ ಯಾವುದು? ಮೂಲದವರು ಯಾರು? ಸತ್ಯ ಯಾವುದು? ಸತ್ಯದವರು ಯಾರು? ಎಂಬಂತಾಗಿ ಅಲ್ಪ

ISBN Number : 978-93-342-6884-3

ಸಂಖ್ಯಾತರು ಮಾತ್ರವಲ್ಲದೆ, ಬಹು ಸಂಖ್ಯಾಥರೂ 'ನಿಮ್ಮೊಡನಿದ್ದೂ ನಿಮ್ಮಂತಾಗದೆಯ ಭಾವ ತೀವ್ರತೆ ಎದ್ದು ಕಾಣುತ್ತಾ, "ಪರಕೀಯನಾಗಿ ತಲೆ ಎತ್ತುವುದಿದೆ ನೋಡಿ, ಅದು ಬಲು ಕಷ್ಟದ ಕೆಲಸ" ಎಂಬ ಸಾಲುಗಳು ಈ ಸಂದರ್ಭದಲ್ಲಿ ತುಂಬಾ ಅರ್ಥಗರ್ಭಿತವಾಗಿದೆ.

ನಾನು ನಾನೇ ಆಗಿ, ಈ ನೆಲದಲ್ಲಿ ಬೇರೊತ್ತದರೂ, ಗುಂಪುಗಾರಿಕೆಯನ್ನು ಮಾಡಿ, ಒಳಗೊಳಗೆ ಬೇರು ಕೊಯ್ದು, ಲೋಕದೆದುರಲ್ಲಿ ನೀರು ಹೋಯ್ದು, ಮಾತುಗಳಲ್ಲಿ ಹುದುಗಿದ ಬೆಕ್ಕು ಸಂಶಯ ಪಂಜವೆತ್ತಿ, ನನ್ನ ನಂಬಿಕೆ ನಿಯತ್ತು ಹಕ್ಕು, ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ ನೋವಿಗೆ ಕಣ್ಣು ತುಂಬಿದರೂ ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ ತನಿಖೆಮಾಡುವ ಕ್ಷಣವನ್ನು ಹುಸಿ ನಗುತ್ತಾ ಎದುರಿಸುವಿದಿದೆಯಲ್ಲ, ಅದು ಬಲು ಕಷ್ಟದ ಕೆಲಸ ಎಂಬುದು ಇಂದಿಗೂ ಅಕ್ಷರಶಃ ಸತ್ಯ.

ಆದರೂ "ಎಂದಿಗಾದರೂ ಸಾಮಾಜಿಕವಾದ ಒಂದು ರೀತಿಯ ಅನ್ಯಾಯವಾಗಿದೆ ಎಂದಾಗ ಆ ನೋವಿನಲ್ಲಿ ಹುಟ್ಟಿದ ಕವಿತೆ" ಎಂಬ ದುಃಖವನ್ನು ನಿಸಾರ್ ಅಹಮದ್ ರವರು ಆಗಾಗ ವ್ಯಕ್ತಪಡಿಸಿದರು, 18 ಜನವರಿ 1970ರಲ್ಲಿ 'ಕರ್ಮ ವೀರ' ಪತ್ರಿಕೆಯಲ್ಲಿ ಈ ಕವಿತೆಯನ್ನು ಕುರಿತಂತೆ ಪೂಣೆಯಿಂದ 'ಜಪ್ಪು ಮಾದೇವ ನಾಯಕ್' ರವರು ವ್ಯಕ್ತಪಡಿಸಿದ ಟೀಕೆ 'ಸುದ್ದಿ ಜೀವಿ' ಅಂತರ್ಜಾಲ ಚಾನೆಲ್ ನಲ್ಲಿ ಗಮನಿಸಿದಾಗ, ಅದು ಮತ್ತೊಂದು ಚರ್ಚೆಗೆ ಎಡೆ ಮಾಡಿ ಕೊಡುತ್ತದೆ. ಯಾವುದೇ ಕವಿ-ಕಾವ್ಯವೂ ವಿಮರ್ಶೆಗೆ ಒಳಪಡಿದಾಗಲೇ ಅದರ ಸತ್ಯಾಸತ್ಯತೆ ಹೊರಬರಲು ಸಾಧ್ಯ ಎಂದಾದರೂ, ಕೆಲವೊಂದು ಪೂರ್ವಗ್ರಹಿಕೆಗಳು, ಅಪನಂಬಿಕೆಗಳು ಮಿತಿಮೀರಿ ಆಲೋಚಿಸಿ, ಗ್ರಹಿಕೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿ ಸಾಮಾಜಿಕ ಅಸ್ವಸ್ಥತೆಗೆ ಎಡೆಮಾಡಿಕೊಡುತ್ತದೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಕನ್ನಡ ನಾಡಿನ ಭಾಷೆಯ ಹಿರಿಮೆ-ಗರಿಮೆ, ವೈಭವವನ್ನು ತಮ್ಮ ಕಾವ್ಯದ ಮೂಲಕ ಸಾರುತ್ತಾ, ನಿತ್ಯೋತ್ಸವ ಕವಿ ಎಂದೇ ಗುರುತಿಸಿಕೊಂಡು, 'ಮನಸುಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮೂಹೂರ್ತ' ಇತ್ಯಾದಿ ಕವನ ಸಂಕಲನಗಳನ್ನು ಪ್ರಕಟಿಸಿ, ಆಗಾಗಲೇ ನಾಡಿನಾದ್ಯಾಂತ ಜನ ಮನ್ನಣೆ ಗಳಿಸಿಕೊಂಡಿದ್ದರು, ನಿಮ್ಮೊಡನಿದ್ದೂ ನಿಮ್ಮಂತಾಗದೆ ಕವಿತೆ ಪ್ರಕಟಗೊಂಡ 20 ದಿನಗಳಲ್ಲೇ ತೀರಾ ಅನುಮಾನ, ಅಪಮಾನ, ಟೀಕೆ, ಚರ್ಚೆಗಳಿಗೆ ಒಳಗಾಗಿ, ಕೇವಲ ವ್ಯಕ್ತಿನಲೆ ಹಾಗೂ ಧರ್ಮದ ಚೌಕ್ಕಟ್ಟಿನಲ್ಲೇ ಉಸಿರುಗಟ್ಟಿಸಿದ್ದು, ಒಬ್ಬ ಕವಿಯ ವೈಯುಕ್ತಿಕ ಭಾವನೆ, ಆತಂಕ, ನಿರಾಸೆಗಳಿಗೆ ಯಾವುದೇ ಬೆಲೆ ಇಲ್ಲದಂತೆ ಮಾಡಿ, ಮತ್ತಷ್ಟು ಪರಕಿಯರಾಗಿಸಿದ್ದು, ಈ ಕವಿತೆಯ ಗಂಭೀರತೆಯು ಮತ್ತಷ್ಟು ಹೆಚ್ಚಿ, ಅದನ್ನು ಮತ್ತದೇ ಪತ್ರಿಕೆಯಲ್ಲಿ ಕವಿ ತನ್ನನ್ನು ತಾನು ಸಮರ್ಥಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರುಗೊಳ್ಳುತ್ತದೆ. ಈ ವಿಚಾರದಲ್ಲಿ ಕವಿ ತನ್ನನ್ನು

ISBN Number : 978-93-342-6884-3

ತಾನೂ ಸಮರ್ಥಿಸಿಕೊಂಡರೂ ಸಾಮಾಜ ಹೇಗೆ ಗ್ರಹಿಸಿತ್ತೆಂಬುದು ಗ್ರಹಣವಾಗಿಯೆ ಉಳಿದಿದೆ. ಆದರೆ ಪ್ರಸ್ತುತ ಜಾಯಮಾನದಲ್ಲಿ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕುತ್ತಿರುವ ಬಹುಸಂಖ್ಯಾತರ ಭಾವನೆಗಳಿಗೆ ಇನ್ನೆಷ್ಟರ ಮಟ್ಟಿಗೆ ಪೆಟ್ಟನ್ನು ತರುತ್ತಿದೆ ಎಂಬುದು ಗ್ರಹಿಸಲು ಅಸಾಧ್ಯವಾದ ಮಾತಾಗಿ, ಎಲ್ಲವನ್ನು ಹೀರಿಕೊಳ್ಳುವ ಈ ನೆಲದ ಗುಣ ಎತ್ತ ಸಾಗುತ್ತಿದೆ ಎಂಬುದು ಈ ಸಂದರ್ಭದಲ್ಲಿ ಮತ್ತೆ ಆಲೋಚಿಸುವ ವಿಷಯವಾಗಿಯೇ ಉಳಿದಿದೆ.

ಸಾಹಿತ್ಯ, ಸಮಾಜ, ಧರ್ಮ, ರಾಜಕೀಯ ಹಾಗೂ ಸಾಂಸ್ಕೃತಿಕ ಲೋಕದಲ್ಲಿ ಗುಂಪುಗಾರಿಕೆಯನ್ನು ನಿರಾಕರಿಸುವ ಕವಿಯ ಭಾವನೆಯನ್ನು ಗ್ರಹಿಸದೆ (ವೃತ್ತದಲ್ಲಿ ಉನ್ಮತ್ತರಾದ), ಈ ಕವಿತೆಯನ್ನು, ಕವಿಯ ಬದುಕನ್ನೂ ಈ ಸಮಾಜ ತೀರ ಸರಳವಾಗಿ ಗುರುತಿಸಿಕೊಂಡಿದ್ದು, ಅಂದು ಮಾತ್ರವಲ್ಲದೆ ಇಂದಿಗೂ ಸಂವೇದನಾಶೀಲ ಜನ ಸಮುದಾಯವನ್ನು ಕಾಡುವ ಕವಿತೆಯಾಗಿ ಹಾಗೂ ಸ್ವತಂತ್ರ ಭಾರತದಲ್ಲಿ ನಿರ್ದಿಷ್ಟ ಸಮುದಾಯಗಳಿಗೆ ರಾಷ್ಟ್ರೀಯತೆ ಎಂಬುದು ನಿತ್ಯ-ನಿರಂತರ ಒಡ್ಡುತ್ತಿರುವ ಸವಾಲು, ಆತಂಕಗಳೆಂಬುದು ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಡೆರಿಡಾನ ನಿರಚನವಾದದಂತೆ, ಪೂರ್ವ ಗ್ರಹಿಕೆಗಳನ್ನು ಬಿಟ್ಟು ಈ ಕವಿತೆಯನ್ನು ಆಲೋಚಿಸಿದೆ ಆದರೆ ಹಾಗೂ ಕವಿಯ ಮನಸ್ಸಿಗೆ ಮನಸ್ಸನ್ನು ಕೊಟ್ಟು, ನೋವಿಗೆ ಕಿವಿಯಗೊಟ್ಟು ಆಲಿಸಿದ್ದರೆ, ಬಹುಶ: ಈ ಕವಿತೆ ಹಾಗೂ ಕವಿಯ ಭಾವ ಸಾರ್ಥಕವೆನಿಸುತ್ತಿತ್ತು. ಅಥವಾ ನಿಸಾರ್ ಅಹಮದ್ ಅವರ ಬದಲಾಗಿ ಬೇರೆ ಯಾರಾದರೂ ಈ ಕವಿತೆಯನ್ನು ಬರೆದಿದ್ದರೆ ಇದರ ಆಳ, ವಿಸ್ತಾರ, ಗ್ರಹಿಕೆಗಳೆ ಬದಲಾಗುತ್ತಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ

ಧರೆ ಹತ್ತಿ ಉರಿದರೆ ನಿಲಲೂಬಾರದು.

ಇಂದು ಜಾತಿ, ಧರ್ಮ, ಭಾಷೆ, ಪ್ರಾಂತ್ಯ, ಲಿಂಗ ತಾರತಮ್ಯದಿಂದಾಗಿ ಕನ್ನಡ ನಾಡೂ ಸೇರಿದಂತೆ, ಭಾರತದದ್ಯಾಂತ ಒಳಗೊಳಗೆ ಅಘಾತಕಾರಿಯಾದ ಲಾವರಸವೆ ಕುದಿಯುತ್ತಿದ್ದು, ಯಾವಾಗ ಹೊಡೆದು ಎಲ್ಲವೂ ಭಸ್ಮವಾಗುತ್ತದೆ ಎನ್ನುವುದೇ ಆತಂಕಕಾರಿಯಾಗಿದೆ. ಒಬ್ಬ ಕ್ರಿಯಾಶೀಲ ಕವಿಯ ಮನಸ್ಸು ಇಡೀ ಸಮಾಜದ ಮನಸ್ಸು ಎಂದು ಒಪ್ಪುವುದಾದರೇ ಇಂದಿನ ಪ್ರತಿಯೊಂದು ಬೆಳವಣಿಗೆಯನ್ನು ಅನುಮಾನ, ಗುಮಾನಿಯಿಂದ

ISBN Number : 978-93-342-6884-3

ಕಾಣುವುದನ್ನು ಬಿಟ್ಟು ಎಲ್ಲವನ್ನೂ ಮುಕ್ತ ಮನಸಿನಿಂದ ಸ್ವೀಕರಿಸಿ, ಎಲ್ಲರನ್ನೂ ಸಹಕರಿಸಿ ನೋಡುವುದರಲ್ಲೇ ಸರ್ವ ಜನಾಂಗದ ಶಾಂತಿಯ ತೋಟವನ್ನು ಬೆಳೆಸಲು ಸಾಧ್ಯ.

ಪರಾಮರ್ಶನ ಗ್ರಂಥಗಳು:

1. ಸಂಜೆ ಐದರ ಮಳೆ (ಕವನ ಸಂಕಲನ) - ಕೆ. ಎಸ್. ನಿಸಾರ್ ಅಹ್ಮದ್

2. ಆಶೀಶ್ ನಂದಿ ವಿಚಾರ – (ಸಂ) – ಡಾ. ಡಿ. ಆರ್ ನಾಗರಾಜ್

3. ಜಾಗತಿಕ ವಿಚಾರ ಸಾಹಿತ್ಯ – ಎಚ್. ದಂಡಪ್ಪ

4. ವಿಕಿಪಿಡಿಯಾ

https://kn.wikipedia.org/wiki/%E0%B2%95%E0%B3%86._%E0%B2%8E%E0%B2%B8%E0%B3%8D._%E0%B2%A8%E0%B2%BF%E0%B2%B8%E0%B2%BE%E0%B2%B0%E0%B3%8D_%E0%B2%85%E0%B2%B9%E0%B2%AE%E0%B2%A6%E0%B3%8D

ISBN Number : 978-93-342-6884-3

"ಉಚಲ್ಯಾ"- ಕಳಂಕಿತ ಸಮುದಾಯದ ಕಹಿ ಸತ್ಯ

ನವೀನ್ ಕುಮಾರ್ ಬಿ ಸಿ
ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ. ರಾಜೇಶ್ ಬೆಜ್ಜಂಗಳ
ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಒಬ್ಬ ವ್ಯಕ್ತಿ ತನ್ನ ಬದುಕನ್ನ ಒಮ್ಮೆ ಹಿಂದಿರುಗಿ ನೋಡುತ್ತಾ ತನ್ನದೇ ಆದ ನೆನಪುಗಳನ್ನು ಮೆಲುಕು ಹಾಕಿ ಅವುಗಳಿಗೆ ಅಕ್ಷರ ರೂಪ ಕೊಟ್ಟಾಗ ಅದು ಸಾಹಿತ್ಯ ಕೃತಿಯಾಗುತ್ತದೆ. ಅಂತಹ ಸಾಹಿತ್ಯ ಕೃತಿಗಳಿಗೆ ಆತ್ಮಕಥೆ ಅಥವಾ ಆತ್ಮಚರಿತ್ರೆ ಎಂದು ಕರೆಯುತ್ತಾರೆ. ಅಂದರೆ ಒಬ್ಬ ವ್ಯಕ್ತಿ ತನ್ನ ಜೀವನಾನುಭವ, ತನ್ನ ನೋವು - ಸಂತೋಷಗಳು, ಸಾಧನೆ - ವಿಫಲತೆಗಳು, ಸ್ಮೃತಿಗಳು, ವಿಚಾರಗಳು ಇತ್ಯಾದಿಗಳನ್ನು ಸ್ವತಃ ಬರೆಯುವ ಬರಹ. ಆತ್ಮಕಥೆಗಳು ಒಬ್ಬ ವ್ಯಕ್ತಿಯ ಅನುಭವಗಳಾಗಿದ್ದರೂ ಇನ್ನೊಬ್ಬರಿಗೆ ಮಾರ್ಗದರ್ಶನವಾಗಬಹುದು. ಅಲ್ಲದೆ ಒಂದು ಕಾಲಘಟ್ಟದ ದಾಖಲೆಗಳಾಗಿ ಇರಬಹುದು. ಇದರಿಂದ ಸಮಾಜ, ಸಂಸ್ಕೃತಿ, ಸನ್ನಿವೇಶ ಇತಿಹಾಸದ ಚಿತ್ರಣ ದೊರಕುತ್ತದೆ. ಕನ್ನಡ ಸಾಹಿತ್ಯದಲ್ಲಿ ದಲಿತ ಆತ್ಮಕತೆಗಳು ವಿಫುಲವಾಗಿವೆ. ಅದು ಮರಾಠಿ ಆತ್ಮಕತೆಗಳ ಪ್ರಭಾವವೆಂದು ಹೇಳಲಾಗುತ್ತದೆ.

ಆತ್ಮಕಥೆಯ ಮುಖ್ಯ ಅಂಶಗಳು:

- ವೈಯಕ್ತಿಕ ಅನುಭವ - ಬರಹಗಾರನು ತನ್ನ ಜೀವನವನ್ನು ತಾನು ಕಂಡ ಹಾಗೆ, ಅನುಭವಿಸಿದ ಹಾಗೆ ವಿವರಿಸುತ್ತಾನೆ.
- ಸತ್ಯಸಂಧತೆ - ಕಲ್ಪನೆಗಿಂತಲೂ ವಾಸ್ತವ ಜೀವನಕ್ಕೆ ಹೆಚ್ಚಿನ ಒತ್ತು ಇರುತ್ತದೆ.
- ಸಮಾಜದ ಪ್ರತಿಫಲನ - ಒಬ್ಬರ ಆತ್ಮಕಥೆ ಕೇವಲ ಅವರ ಜೀವನವಷ್ಟೇ ಅಲ್ಲ; ಅದು ಅವರು ಬದುಕಿದ ಕಾಲ, ಸಮಾಜ, ಸಂಸ್ಕೃತಿ, ರಾಜಕೀಯ ಪರಿಸ್ಥಿತಿ ಇತ್ಯಾದಿಗಳನ್ನೂ ತೋರಿಸುತ್ತದೆ.
- ಸ್ಮೃತಿ ಮತ್ತು ಮೌಲ್ಯಮಾಪನ - ಆತ್ಮಕಥೆಯಲ್ಲಿ ಬಾಲ್ಯಸ್ಮೃತಿ, ಕುಟುಂಬ ಸ್ಮೃತಿ, ಶಿಕ್ಷಣ, ಉದ್ಯೋಗ, ವಲಸೆ, ರಾಜಕೀಯ - ಸಾಮಾಜಿಕ ಅನುಭವಗಳ ಮೌಲ್ಯಮಾಪನ ಇರುತ್ತದೆ.
- ಅಸ್ತಿತ್ವದ ಅನ್ವೇಷಣೆ - ವ್ಯಕ್ತಿ ತನ್ನ ಜೀವನದ ಅರ್ಥ, ತನ್ನ ಸ್ಥಾನ, ತನ್ನ ಸಫಲತೆ - ಅಸಫಲತೆಗಳನ್ನು ಹುಡುಕುವ ಪ್ರಯತ್ನ.

ISBN Number : 978-93-342-6884-3

ಆತ್ಮಕಥೆಗಳ ವಿಧಗಳು:

- ❖ ವೈಯಕ್ತಿಕ ಆತ್ಮಕಥೆ - ವೈಯಕ್ತಿಕ ಜೀವನಕತೆ (ಉದಾ: ಬಾಲ್ಯ, ಶಿಕ್ಷಣ, ಕುಟುಂಬ).
- ❖ ಸಾಮಾಜಿಕ - ರಾಜಕೀಯ ಆತ್ಮಕಥೆ - ಸಮಾಜಸೇವೆ, ರಾಜಕೀಯ ಹೋರಾಟ, ಸ್ವಾತಂತ್ರ್ಯ ಚಳುವಳಿ ಮೊದಲಾದವುಗಳನ್ನು ವಿವರಿಸುವುದು.
- ❖ ಸಾಹಿತ್ಯಾತ್ಮಕ ಆತ್ಮಕಥೆ - ಸಾಹಿತ್ಯ-ಕಲೆಯ ಬದುಕು, ಸೃಜನಾತ್ಮಕ ಪ್ರಕ್ರಿಯೆಗಳನ್ನು ತಿಳಿಸುವುದು.

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕಥೆ ಪ್ರಕಾರ ಭಾರತೀಯ ಉಳಿದ ಸಾಹಿತ್ಯಗಳಿಗಿಂತ ಮರಾಠಿ ಸಾಹಿತ್ಯದಲ್ಲಿ ಪ್ರಖರವಾಗಿ ಬೆಳೆಯಿತೆಂದು ಹೇಳಬಹುದು. ಇದಕ್ಕೆ ಕಾರಣ ಸುಮಾರು 70ರ ದಶಕದಲ್ಲಿ ದಲಿತ ಪ್ಯಾಂಥರಿನ ಪ್ರಭಾವ ಹೆಚ್ಚಾಗಿ ಕಂಡು ಬರುವುದು. ಮರಾಠಿ ಸಾಹಿತ್ಯ ಉಳಿದ ಸಾಹಿತ್ಯದಂತೆ ಆತ್ಮಕಥೆಗಳ ಮೇಲೂ ಅದರ ಪ್ರಭಾವ ಬೀರಿದೆ ಮತ್ತು ಆ ಸಂದರ್ಭದಲ್ಲಿ ಉತ್ತಮ ಆತ್ಮಕಥೆಗಳು ಬಂದಿವೆ. ಮರಾಠಿ ಸಾಹಿತ್ಯದಲ್ಲಿ ಉಳಿದ ಪ್ರಕಾರಗಳಿಗಿಂತ ಆತ್ಮಕಥೆಗಳಿಗೆ ಉನ್ನತ ಸ್ಥಾನವಿದೆ. ಈ ಆತ್ಮಕಥೆಗಳಿಂದ ಮರಾಠಿ ಸಾಹಿತ್ಯ ಸಮೃದ್ಧವಾಗಿದೆ. ಭಾರತೀಯ ಸಾಹಿತ್ಯದಲ್ಲಿ ಉಳಿದ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವ ಆತ್ಮಕಥೆಗಳಿಗಿಂತ ಮರಾಠಿ ಆತ್ಮಕತೆಗಳು ಸಂಖ್ಯೆ ಮತ್ತು ಕಲಾತ್ಮಕತೆಗಳೆರಡರಿಂದಲೂ ಶ್ರೇಷ್ಠ ಮಟ್ಟದ್ದಾಗಿರುತ್ತವೆ. ಮರಾಠಿ ಆತ್ಮಕಥೆಗಳು ಕೇವಲ ಮಧ್ಯಮ ಅಥವಾ ಮೇಲ್ವರ್ಗದವರಿಂದ ರಚನೆಗೊಂಡಿಲ್ಲ, ಅವು ವಿವಿಧ ವ್ಯವಸಾಯದಲ್ಲಿ ನಿರತರಾದ ಬೇರೆ ಬೇರೆ ಜಾತಿ - ಜನಾಂಗಕ್ಕೆ ಸೇರಿದ ವ್ಯಕ್ತಿಗಳಿಂದಲೂ ರಚಿಸಲ್ಪಟ್ಟಿದ್ದರಿಂದ ಅವು ವಾಸ್ತವ ನೆಲೆಯನ್ನು ಕಂಡುಕೊಂಡಿವೆ.

ಉಚಲ್ಯಾ ಕೃತಿಯು ಮರಾಠಿ ಆತ್ಮಕಥೆ. ಲೇಖಕರು ಲಕ್ಷ್ಮಣ ಗಾಯಕವಾಡ. ಇವರು ಮರಾಠಿ ಭಾಷೆಯ ಪ್ರಸಿದ್ಧ ಲೇಖಕರು. ಸಂಘಟಕರು, ಸ್ವತ: ಹೋರಾಟಗಾರರು, ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಚಂದ್ರಕಾಂತ ಪೋಕಳೆ. ಈ ಕೃತಿಗೆ 1988ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಈ ಕೃತಿಯಲ್ಲಿ ಲೇಖಕರೇ ಸೂಚಿಸುವಂತೆ "ಕಳ್ಳತನವೇ ಮುಖ್ಯ ಕಸುಬಾದ "ಜಂಗಮ" ಜಾತಿಯ ಅಲೆಮಾರಿ ಜನಾಂಗಕ್ಕೆ ಸೇರಿದ ವ್ಯಕ್ತಿಯೊಬ್ಬನ ಆತ್ಮಕಥೆ.

ಹೊಲ - ಮನೆಯಿಲ್ಲ, ನಿಶ್ಚಿತವಾದ ಒಂದು ಊರಿಲ್ಲ. ಅಷ್ಟೇ ಏಕೆ ಜಾತಿಯು ಇಲ್ಲದಂತ ಒಂದು ಅಲೆಮಾರಿ ಪಂಗಡದಲ್ಲಿ ಲಾತೂರ ತಾಲೂಕಿನ ಧನೇಗಾಂವ ಎಂಬ ಊರಲ್ಲಿ ಜನಿಸಿದೆ. ಈ ರೀತಿ ತಾನು ಹುಟ್ಟಿದ ಪರಿಸ್ಥಿತಿಯನ್ನು ವಿವರಿಸುವುದರೊಂದಿಗೆ ಆತ್ಮಕಥೆಯು ಆರಂಭವಾಗುತ್ತದೆ. ನಂತರದಲ್ಲಿ ತನ್ನ ಜನರ ಮೂಲ ಕಸುಬಾದ ಕಳ್ಳತನ, ತರಬೇತಿ, ಅವರ ಹಸಿವು, ದಾರಿದ್ರ್ಯ, ನಿರುದ್ಯೋಗ, ಕ್ರಿಮಿನಲ್ ಟ್ರೈಬ್ಸ್ ಎಂಬ

ISBN Number : 978-93-342-6884-3

ಹಣೆಪಟ್ಟಿ ಅಂಟಿಸಿಕೊಂಡ ತಪ್ಪಿಗಾಗಿ ನಡೆಸುವ ನಿರಂತರ ಅಲೆಮಾರಿ ಜೀವನ. ಇತ್ಯಾದಿಗಳನ್ನು ಗ್ರಂಥದ ಪೂರ್ವಾರ್ಧದಲ್ಲಿ ತಿಳಿಸಿದ್ದಾರೆ. ಉತ್ತರಾರ್ಧ ಭಾಗದಲ್ಲಿ ತನ್ನ ಜನಾಂಗದ ಸಾಂಸ್ಕೃತಿಕ ಬದುಕು, ಜನಾಂಗದ ಮೇಲಾದ ಅನ್ಯಾಯ, ಕಳ್ಳತನದ ಹಲವು ಮಾದರಿಗಳು, ಆರ್ಥಿಕ ಮುಗ್ಗಟ್ಟು, ಪೊಲೀಸ್ ದಾಳಿ, ದೌರ್ಜನ್ಯ, ಶಿಕ್ಷೆ ಇತ್ಯಾದಿಗಳನ್ನು ತಿಳಿಸಿದ್ದಾರೆ.

ಲಕ್ಷ್ಮಣ ಗಾಯಕ್ವಾಡರು ತಮ್ಮ ಜೀವನದುದ್ದಕ್ಕೂ ಹಸಿವಿನಿಂದ ಅನ್ನಕ್ಕಾಗಿ ಹಪಹಪಿಸುತ್ತಾರೆ. ಈ ಹಸಿವು ಕೇವಲ ಗಾಯಕ್ವಾಡರಿಗೆ ಸೀಮಿತವಾಗಿರಲಿಲ್ಲ, ಇಡೀ ಜನಾಂಗವನ್ನೇ ಆವರಿಸಿತ್ತು. ಈ ಕೃತಿಯಲ್ಲಿ ಗಾಯಕ್ವಾಡರು ತನ್ನ ಉಚಲ್ಯಾ ಜನಾಂಗದ ಹಸಿವನ್ನು ಮತ್ತು ಆ ಹಸಿವನ್ನ ನೀಗಿಸಿಕೊಳ್ಳಲು ಕ್ರಿಮಿನಲ್ ಟ್ರೈಬ್ಸ್ ಎಂಬ ಹಣೆಪಟ್ಟಿ ಕಟ್ಟಿಕೊಂಡಂತಹ ಈ ಅಲೆಮಾರಿ ಜನಾಂಗದ ಹಸಿವಿನ ತಲ್ಲಣಗಳನ್ನ ಮನೋಜ್ಞವಾಗಿ ಚಿತ್ರಿಸಿದ್ದಾರೆ. ದಲಿತ ಅಥವಾ ಅಲೆಮಾರಿ ಜನಾಂಗಗಳು ಸಾಮಾನ್ಯವಾಗಿ ಮಾಂಸಾಹಾರಿಗಳಾಗಿರುತ್ತಾರೆ. ಇಲ್ಲಿ ಇವರು ಸಹ ತಮ್ಮ ಆಹಾರ ಪದ್ಧತಿ, ಆಚರಣೆಗಳಗಳಲ್ಲಿ ಇದರಿಂದ ಹೊರತಾಗಿರಲಿಲ್ಲ. ಮಾಂಸಾಹಾರ ಮತ್ತು ಬೇಟೆಗಳನ್ನು ಲೇಖಕರು ಹೆಚ್ಚು ಇಷ್ಟಪಡುತ್ತಿದ್ದರು. ಒಂದುಕಡೆ ಲೇಖಕರೇ ಹೇಳುತ್ತಾರೆ **"ನಾವು ತಿನ್ನುವ ಹಂದಿ ಮಾಂಸ ನೋಡಿ ಸಂಡಾಸಿಗೆ ಕುಳಿತ ಹೆಂಗಸರು ಮೂಗು ಮುಚ್ಚಿಕೊಳ್ಳುತ್ತಿದ್ದರು. ನನಗೆ ಮಾತ್ರ ಇನ್ನೂ ಬೇಕೆನಿಸುತ್ತಿತ್ತು. ಯಾಕೆಂದರೆ ಹಂದಿ ಮಾಂಸ ಕೊಬ್ಬರಿಯ ಹಾಗಿತ್ತು. ಹಾಗೆ ನೋಡಿದರೆ ಊರ ಹೆಂಗಸರು ಅಲ್ಲಿ ಸಂಡಾಸ ಮಾಡುವುದರಿಂದ ನಮಗೆ ಲಾಭವೇ ಇತ್ತು. ಯಾಕೆಂದರೆ ನಮ್ಮ ಹಂದಿಗಳು ಅವರ ಮಲ ತಿಂದು ಕೊಬ್ಬುತ್ತಿದ್ದವು. ಹೀಗಾಗಿ ಅವರೆಲ್ಲ ನಮ್ಮ ಮನೆಯ ಎದುರು ಕೂತೇ ಸಂಡಾಸ ಮಾಡಲೆಂದು ಹಾರೈಸುತ್ತಿದ್ದೆವು".** ಎಂದು ಇಷ್ಟರ ಮಟ್ಟಿಗೆ ಹಸಿವು ಲೇಖಕರಿಗೆ ಕಾಡುತ್ತಿತ್ತು. ಅವರು ಹಸಿವನ್ನು ನೀಗಿಸಲು ಹಲವಾರು ಕೆಲಸಗಳನ್ನು ಮಾಡುತ್ತಿದ್ದರು.

ಉಚಲ್ಯಾ ಅಥವಾ ಇಂದು ಗಂಟಿಚೋರ ಎಂದು ಗುರುತಿಸಲ್ಪಡುವ ಜನಾಂಗದ ಬ್ರಿಟೀಷ್ ಪೂರ್ವ ಚರಿತ್ರೆಯನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿಸಿದ್ದಾರೆ. ಸ್ವತ: ಲೇಖರೇ ಆ ಜನಾಂಗದ ಪ್ರತಿನಿಧಿಯಾಗಿ, ಚಿಕ್ಕಂದಿನಿಂದಲೇ ತಾವು ಅನುಭವಿಸಿದ ಹಸಿವು, ಬಡತನ, ದಾರದ್ರ್ಯ, ಪೊಲೀಸರ ದೌರ್ಜನ್ಯ, ನಿರುದ್ಯೋಗ ಮುಂತಾದ ಹತ್ತು ಹಲವಾರು ಸಮಸ್ಯೆಗಳನ್ನು ಆತ್ಮಕಥೆಯುದ್ದಕ್ಕೂ ಮಾರ್ಮಿಕವಾಗಿ ಹಿಡಿದಿಟ್ಟಿದ್ದಾರೆ. ಮನುಷ್ಯನಿಗೆ ಹಸಿವು ಬದುಕಿನ ಪಾಠವನ್ನು ಕಲಿಸುತ್ತದೆ. ಈ ಕೃತಿಯಲ್ಲಿ ಲೇಖಕರು ತಮ್ಮ ಜನಾಂಗ ಕಳ್ಳತನವನ್ನು ಯಾಕೆ ಮಾಡುತ್ತಿದ್ದರು ಎನ್ನುವುದನ್ನು ಕೂಡ ತಿಳಿಸಿದ್ದಾರೆ. **"ಉಪಜೀವನದ ಎಲ್ಲ ಮಾರ್ಗಗಳು ಮುಚ್ಚಿದ್ದರಿಂದ ನಾವು ಅನಿವಾರ್ಯವಾಗಿ ಕಳ್ಳತನಕ್ಕಿಳಿಯಬೇಕಾಯಿತು. ಕಳ್ಳತನವೊಂದೇ ನಮ್ಮ**

ISBN Number : 978-93-342-6884-3

ಜನರ ಎದುರಿಗಿರುವ ಏಕೈಕ ಮಾರ್ಗ. ನಮ್ಮ ಮೇಲೆ ಬಲವಂತದಿಂದ ಹೇರಿದ ಈ ವ್ಯವಸಾಯದ ಉಪಯೋಗವನ್ನು ಮೇಲ್ವರ್ಗದ ಜನ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರು. ಹುಟ್ಟಿನಿಂದಲೇ ಗುನ್ಹೇಗಾರರೆಂಬ ಹಣೆಪಟ್ಟಿ ಹಚ್ಚಿಕೊಂಡ ಏಕಮೇವ ಜಾತಿ ನಮ್ಮದು. ನಮ್ಮ ಜನಾಂಗದ ಸ್ಥಿತಿಗೆ ಈ ಸಮಾಜವೇ ಕಾರಣವೆಂದು ಹತಾಶರಾಗಿ ನಾವು, ಹಸಿವಿಗಾಗಿ ಕಳ್ಳತನ ಮಾಡಿದರೆ, ಈ ಸಮಾಜದಲ್ಲಿ ಕೊಟ್ಯಂತರ ರೂಪಾಯಿಗಳನ್ನು ನ್ಯಾಯಯುತವಾಗಿ ಕಳ್ಳತನ ಮಾಡುವ ಸುಶಿಕ್ಷಿತ, ಪ್ರತಿಷ್ಠಿತ ಸಮಾಜವೂ ಇದೆ. ಲಂಚ ಬ್ರಷ್ಟಾಚಾರಗಳ ಮೂಲಕ ಲಕ್ಷಗಟ್ಟಲೆ ಹಣ ಗಳಿಸುವ ಜನ ಗುನ್ಹೇಗಾರರೆಂದು ಪರಿಗಣಿಸಲ್ಪಡುವುದಿಲ್ಲ, ಆದರೆ ಹೊಟ್ಟೆ ಪಾಡಿಗೆ ಹತ್ತಿಪ್ಪತ್ತು ರೂಪಾಯಿ ಕಳ್ಳತನ ಮಾಡುವ ಜನ ಗುನ್ಹೇಗಾರರೆನಿಸುತ್ತಾರೆ". ಲೇಖಕರ ಈ ಮಾತು ಸಮಾಜದ ಮೇಲ್ವರ್ಗದ ನೀತಿಯನ್ನು ಎತ್ತಿ ತೋರಿಸುತ್ತದೆ.

ಈ ಜನಾಂಗದ ಮುಖ್ಯ ಕಸುಬು ಕಳ್ಳತನ ಜಾತ್ರೆಯಲ್ಲಿ ಪಟ್ಟಣದಲ್ಲಿ ಊರಿನಲ್ಲಿ ಹೀಗೆ ಯಾವ ಯಾವ ಸ್ಥಳಗಳಲ್ಲಿ ಹೆಚ್ಚು ಜನರಿರುತ್ತಾರೆ ಅಲ್ಲೆಲ್ಲಾ ಕಳ್ಳತನ ಮಾಡುತ್ತಿರುತ್ತಾರೆ. ಕದ್ದಮಾಲನ್ನು ಊರ ಗೌಡನಿಗೆ ಮಾರಿ ಅದರಿಂದ ಬಂದ ಹಣದಿಂದ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಎಲ್ಲೇ ಕಳ್ಳತನವಾದರೂ ಪೋಲಿಸರು ನೇರ ಇವರ ಮನೆಗಳಿಗೆ ಬಂದು ನುಗ್ಗಿ ಹಿಂಸಿಸುತ್ತಿದ್ದರು. ಒಂದು ಸಲ ಪಟ್ಟಣದಲ್ಲಿ ಐದು ನೂರು ರೂಪಾಯಿಯ ಕಳ್ಳತನದ ಕೇಸಿನಲ್ಲಿ ಒಬ್ಬ ಪೊಲೀಸ್ ಸೀದಾ ಲೇಖಕರ ಮನೆಯ ಹತ್ತಿರ ಬಂದು ಅವರ ತಾಯಿ ಒಂದು ಹೆಣ್ಣು ಅನ್ನುವುದನ್ನು ಮರೆತು ದೌರ್ಜನ್ಯ ಮಾಡುತ್ತಾನೆ. ಅಂತಹ ಸಂದರ್ಭದಲ್ಲಿ ಅವರ ತಂದೆ ತಾನು ಕಳ್ಳತನ ಮಾಡದಿದ್ದರೂ ಪೊಲೀಸರಿಗೆ ಐದು ನೂರು ರೂಪಾಯಿ ಕೊಡಬೇಕಾಗುತ್ತದೆ ಕೊಡದಿದ್ದರೆ ಅವರ ಮೇಲೆ ದೌರ್ಜನ್ಯ ನಡೆಸುತ್ತಿದ್ದರು. ಆಗ ತಂದೆ ಊರ ಸಾಹುಕಾರನಿಂದ ಐದು ನೂರು ರೂಪಾಯಿಯ ಸಾಲ ತಂದು ಅವರಿಗೆ ಕೊಟ್ಟದ್ದಾಯಿತು. ಈ ಘಟನೆಯ ನಂತರ ಗಾಯಕ್ವಾಡರು ಯೋಚಿಸುತ್ತಾರೆ ಒಂದು ಕಡೆ ಸಾಲ ಮಾಡಿ ಲಂಚ ಕೊಡಬೇಕು ಮತ್ತೊಂದು ಕಡೆ ಆ ಸಾಲ ತೀರಿಸಲು ತನ್ನ ಕುಟುಂಬಸ್ಥರು ಮತ್ತೆ ಕಳ್ಳತನ ಮಾಡಬೇಕಿತ್ತು. ಇವರು ಶಾಲೆಗೆ ಹೋದರೆ "ಕಳ್ಳ ಬಂದ್ನಪ್ಪೋ ಕಳ್ಳ" ಎಂದು ಸಹಪಾಠಿಗಳು ಜರಿಯುತ್ತಿದ್ದರು. ಇವೆಲ್ಲಾ ಘಟನೆಗಳಿಂದ ಲೇಖಕರು ಸಿಡಿದೇಳುತ್ತಾರೆ.

ಗಾಯಕ್ವಾಡರು ಶಿಕ್ಷಣ ಪಡೆಯುತ್ತಾ ಪಡೆಯುತ್ತಾ ಅರಿವು ಬಂದಮೇಲೆ ನಾವೆಲ್ಲ ಭಾರತೀಯರಾದರೆ ನಮಗೆ ಮಾತ್ರ ಏಕೆ ಇಂತಹ ಶಿಕ್ಷೆ? ಕಳ್ಳರು ಅಥವಾ ಕಳ್ಳ ಜಾತಿ ಎಂಬ ಆರೋಪವಿಕೆ? ನಮ್ಮ ಮೇಲೆ ಏಕೆ ದೌರ್ಜನ್ಯ, ಶೋಷಣೆ ನಡೆಸುತ್ತಾರೆ? ನಾವು ಕೂಡ ಗೌರವಯುತವಾಗಿ ಬದುಕಲು ಈ ಸಮಾಜ ಏಕೆ ನಮ್ಮನ್ನು ಬಿಡುತ್ತಿಲ್ಲ ಎಂದು ಯೋಚಿಸಿ ಇದಕ್ಕೆಲ್ಲ ಪರಿಹಾರ ಶಿಕ್ಷಣ. ನಮ್ಮ ಜನಾಂಗದವರು ಅಕ್ಷರಸ್ಥರಾದರೆ

ISBN Number : 978-93-342-6884-3

ಆಗ ಅವರು ಗೌರವದಿಂದ ಬದುಕು ನಡೆಸುತ್ತಾರೆ. ಎಂದು ತೀರ್ಮಾನಿಸಿ ಕವತೆಯಲ್ಲಿ ಒಂದು ಶಿಕ್ಷಣ ಸಂಸ್ಥೆಯನ್ನು ಆರಂಭಿಸಿ ಅದರ ಮೂಲಕ ತಮ್ಮ ಜನಾಂಗದ ಅಭಿವೃದ್ಧಿಗೆ ಕಾರಣರಾದರು ಹಾಗೂ ಇದಕ್ಕೆಲ್ಲಾ ಹೋರಾಟವೇ ದಾರಿ ಎಂದು ತಮ್ಮ ಜೀವನದ ಉದ್ದಕ್ಕೂ ಅದನ್ನು ನಿರೂಪಿಸುತ್ತಾ ಬಂದರು.

ಒಂದು ನೊಂದ ಜನಾಂಗದ ಹಸಿವು, ನೋವು, ಕಳ್ಳತನ, ಮೇಲ್ವರ್ಗದವರ ದೌರ್ಜನ್ಯ,ಶೋಷಣೆ ಹೀಗೆ ಎಲ್ಲವನ್ನೂ ಗಾಯಕ್ವಾಡರು ಸ್ವತಃ ತಾವೇ ಅನುಭವಿಸಿ ಅದನ್ನು ಕೃತಿರೂಪಕ್ಕೆ ಇಳಿಸಿದ್ದಾರೆ. ಶಿಕ್ಷಣ ಮತ್ತು ಹೋರಾಟದಿಂದ ಎಂತಹ ಬದಲಾವಣೆಯನ್ನು ಬೇಕಾದರೂ ತರಬಹುದು ಎಂದು ಲೇಖಕರು ತೋರಿಸಿ ಕೊಟ್ಟಿದ್ದಾರೆ. ಉಚಲ್ಯಾ ಜನಾಂಗದ ಬದುಕಿನ ನರಕ ಸದೃಶ್ಯ ಜೀವನವನ್ನು ಗಾಯಕ್ವಾಡರು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಈ ಕೃತಿಯನ್ನು ನಾವೆಲ್ಲರೂ ಸಾಹಿತ್ಯಕವಾಗಿ ನೋಡಿದರೂ ಕೂಡ, ಸಮಾಜಶಾಸ್ತ್ರೀಯ ನೆಲೆಯಲ್ಲಿ ನೋಡಿದಾಗ ಆ ಜನಾಂಗದ ಜೀವನ ಶೈಲಿ, ಹಸಿವು, ಕಷ್ಟ, ಶೋಷಣೆ, ದೌರ್ಜನ್ಯ ಎಲ್ಲವನ್ನು ಕಾಣುತ್ತೇವೆ. ಲೇಖಕರು ತಮ್ಮ ಕಥೆಯನ್ನು ಹೇಳುವಾಗ ಉದ್ವೇಗವಾಗದೆ ವಸ್ತುಸ್ಥಿತಿಯನ್ನು, ನಿರ್ಲಿಪ್ತತೆಯನ್ನು ಕಾಯ್ದುಕೊಳ್ಳುವ ಪರಿ ಅನನ್ಯವಾದದು ಮತ್ತು ತಮ್ಮ ಮೇಲಿನ ದೌರ್ಜನ್ಯ, ಶೋಷಣೆಗಳನ್ನು ಹೇಳುವಾಗ ಯಾವುದೇ ಅಲಂಕಾರಿಕ ಶಬ್ದಗಳಿಲ್ಲದೆ ತಣ್ಣನೆಯ ದನಿಯಲ್ಲಿ ಹೇಳುತ್ತಾ ಓದುಗರ ಕಣ್ಣುಗಳನ್ನು ಒದ್ದೆ ಮಾಡಿದರು.

ಪರಾಮರ್ಶನ ಗ್ರಂಥಗಳು;

1. ಉಚಲ್ಯಾ-ಲಕ್ಷ್ಮಣ ಗಾಯಕ್ವಾಡ, ಅನುವಾದ: ಚಂದ್ರಕಾಂತ ಪೋಕಳೆ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

2. ದಲಿತ ಯುಗ ಮತ್ತು ಕನ್ನಡ ಸಾಹಿತ್ಯ-ಡಾ.ಅರವಿಂದ ಮಾಲಗತ್ತಿ, ಚೇತನ್ ಬುಕ್ ಹೌಸ್, ಬೆಂಗಳೂರು.

3. ದಲಿತ ಪದ ಕಥನ – ಡಾ. ಮೋಗಳ್ಳಿ ಗಣೇಶ್, ಪ್ರಸಾರಂಗ, ಕನ್ನಡ ವಿ.ವಿ. ಹಂಪಿ.

4. ಆತ್ಮಕಥೆಗಳಲ್ಲಿ ಕರ್ನಾಟಕದ ಕತೆ –ಬಿ.ಎಂ. ಪುಟ್ಟಯ್ಯ. ಪ್ರಸಾರಂಗ, ಕನ್ನಡ ವಿ. ವಿ. ಹಂಪಿ.

5. ದಲಿತ್ಯ ಸಾಹಿತ್ಯ ಪರ್ವ -ಡಾ. ಅರವಿಂದ ಮಾಲಗತ್ತಿ, ಪ್ರಸಾರಂಗ ಮೈಸೂರು ವಿ.ವಿ. ಮೈಸೂರು.

6. ಶತಮಾನದ ಸಾಹಿತ್ಯ ವಿಮರ್ಶೆ –ಸಂ. ಡಾ. ಎಚ್ ಎಸ್ ರಾಘವೇಂದ್ರ ರಾವ್.

7. ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆಗಳು -ಡಾ. ಶರಣಮ್ಮ ಗೋರೆಬಾಳ, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ,ಗದಗ.

8. ದಲಿತ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ -ಡಾ. ಅರ್ಜುನ ಯ. ಗೊಳಸಂಗಿ.

ISBN Number : 978-93-342-6884-3

ಗುತ್ತು, ಅಳಿಯಕಟ್ಟು ಮತ್ತು ಒಡ್ಡು ಉಂಗುರ: ತುಳುನಾಡಿನ ಬಂಟ ಸಮುದಾಯದ ಹೆಗ್ಗುರುತುಗಳು

ಸುಮಿತಾ ಯನ್.ಕೆ,
ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ.ರಾಜೇಶ್ ಬೆಜ್ಜಂಗಳ
ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಸಾರುವ ದೇಶ. ಇಲ್ಲಿನ ಪ್ರತಿಯೊಂದು ಸಂಸ್ಕೃತಿಯು ತನ್ನದೇ ಆದ ಇತಿಹಾಸ, ಸಂಪ್ರದಾಯ ಮತ್ತು ಜೀವನ ವಿಧಾನವನ್ನು ಹೊಂದಿದೆ. ತುಳುನಾಡಿನ ಬಂಟ ಸಮುದಾಯವೂ ಇದಕ್ಕೊಂದು ಉತ್ತಮ ಉದಾಹರಣೆ. ಯೋಧ ವರ್ಗದವರಾದ ಇವರು, ನಾಗವಂಶಿ ಕ್ಷತ್ರಿಯರು ಎಂದು ಗುರುತಿಸಿಕೊಂಡಿದ್ದಾರೆ. ಈ ಸಮುದಾಯವು ಕೃಷಿ, ವಾಣಿಜ್ಯ ಮತ್ತು ಆಧುನಿಕ ವೃತ್ತಿಗಳಲ್ಲಿ ತಮ್ಮ ಪ್ರಭಾವವನ್ನು ಸ್ಥಾಪಿಸಿದೆ. ಬಂಟ ಸಮುದಾಯದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು, ಅವರ ವಿಶಿಷ್ಟ ಸಂಸ್ಕೃತಿಯ ಭಾಗವಾಗಿರುವ ಮೂರು ಪ್ರಮುಖ ಅಂಶಗಳನ್ನು ತಿಳಿಯುವುದು ಅವಶ್ಯಕ: ಗುತ್ತು ಮನೆಗಳು, ಅಳಿಯಕಟ್ಟು ಪದ್ಧತಿ ಮತ್ತು ಒಡ್ಡು ಉಂಗುರ.

ಗುತ್ತು ಮನೆಗಳು: ಸಾಮಾಜಿಕ ನ್ಯಾಯದ ಕೇಂದ್ರಗಳು

ಪ್ರಾಚೀನ ಕಾಲದಲ್ಲಿ, ಗುತ್ತು ಎಂಬ ಶಬ್ದವು ಭಾರ ಹೊರುವ ಅಥವಾ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯವನ್ನು ಸೂಚಿಸುತ್ತದೆ. ದಾರಿಯಲ್ಲಿ ಹೊರೆಯನ್ನು ಹೊತ್ತು ಸಾಗುವವರಿಗೆ ವಿಶ್ರಾಂತಿ ನೀಡಲು ಸ್ಥಾಪಿಸಲಾಗಿದ್ದ ಕಂಬವನ್ನು "ಗುತ್ತಿನ ಕಂಬ" ಅಥವಾ "ಗಣ್ಣಾಣೆ" ಎಂದು ಕರೆಯಲಾಗುತ್ತಿತ್ತು. ಇದರಂತೆಯೇ, ಸಮಾಜದ ಕಷ್ಟ ಕಾರ್ಪಣ್ಯಗಳ ಭಾರವನ್ನು ಹೊತ್ತು ಪರಿಹರಿಸುವ ಮನೆಗಳಿಗೆ ಗುತ್ತಿನ ಮನೆಗಳು ಎಂದು ಹೆಸರು ಬಂತು. ಇವು ಕೇವಲ ವಾಸಸ್ಥಳಗಳಾಗಿರದೆ, ಸಮಾಜದಲ್ಲಿ ನ್ಯಾಯ ತೀರ್ಮಾನಗಳನ್ನು ಕೈಗೊಳ್ಳುವ ಮತ್ತು ಸಮಸ್ಯೆಗಳನ್ನು ಬಗೆಹರಿಸುವ ಕೇಂದ್ರಗಳಾಗಿದ್ದವು.

ಆದರೆ, 1974ರ ಭೂಮಸೂದೆ ಮತ್ತು ನಂತರದ ಬದಲಾವಣೆಗಳಿಂದಾಗಿ, ಈ ಗುತ್ತು ಮನೆಗಳ ಸಾಮಾಜಿಕ ಪಾತ್ರ ಕುಂದಿತು. ಆರ್ಥಿಕ ಕುಸಿತ ಮತ್ತು ಆಧ್ಯಾತ್ಮಿಕ ತಳಹದಿಯ ಕೊರತೆಯಿಂದಾಗಿ, ಇವು ತಮ್ಮ ಮೂಲ ಉದ್ದೇಶದಿಂದ ದೂರ ಸರಿದು, ಇಂದು ದೈವಾರಾಧನೆಗೆ ಮಾತ್ರ ಸೀಮಿತವಾಗಿವೆ. ಆದರೂ, ಬಂಟ ಸಮುದಾಯದ ಇತಿಹಾಸದಲ್ಲಿ ಅವುಗಳ ಪಾತ್ರ ಅವಿಸ್ಮರಣೀಯ.

ISBN Number : 978-93-342-6884-3

ಅಳಿಯಕಟ್ಟು ಪದ್ಧತಿ: ಮಾತೃವಂಶದ ಶ್ರೇಷ್ಠತೆ

ಬಂಟ ಸಮುದಾಯದ ಮತ್ತೊಂದು ವಿಶಿಷ್ಟ ಸಂಪ್ರದಾಯವೆಂದರೆ ಅಳಿಯಕಟ್ಟು ಪದ್ಧತಿ, ಅಥವಾ ಮಾತೃವಂಶದ ಆಳ್ವಿಕೆ. ಈ ಪದ್ಧತಿಯಲ್ಲಿ, ಕುಟುಂಬದ ಆಸ್ತಿ, ಅಧಿಕಾರ ಮತ್ತು ವಂಶಾವಳಿ ಹೆಣ್ಣುಮಕ್ಕಳ ಮೂಲಕ ಮುಂದುವರೆಯುತ್ತದೆ. ಈ ಕಾರಣದಿಂದಾಗಿ, ಬಂಟ ಮಹಿಳೆಯನ್ನು ಕುಟುಂಬದ ಕೇಂದ್ರಬಿಂದು ಎಂದು ಪರಿಗಣಿಸಲಾಗುತ್ತದೆ. ಅವಳು ಕೇವಲ ಸೌಂದರ್ಯದ ಪ್ರತೀಕ ಮಾತ್ರವಲ್ಲ, ಕೃಷಿ ಮತ್ತು ಕುಟುಂಬ ನಿರ್ವಹಣೆಯಲ್ಲಿ ಸಕ್ರಿಯ ಪಾತ್ರ ವಹಿಸುತ್ತಾಳೆ. ಅವಳ ಶ್ರಮ ಮತ್ತು ತ್ಯಾಗವೇ ಇಡೀ ಕುಟುಂಬದ ಶಕ್ತಿಯಾಗಿ ಮತ್ತು ಆರ್ಥಿಕ ಭದ್ರತೆಗೆ ಆಧಾರವಾಗಿತ್ತು.

ಅಳಿಯಕಟ್ಟು ಪದ್ಧತಿಯ ಪ್ರಕಾರ, ಮದುವೆಯಾಗಿ ಗಂಡನ ಮನೆಗೆ ಹೋದರೂ, ಹೆಣ್ಣುಮಗಳು ತನ್ನ ತಾಯಿ ಮನೆಯಲ್ಲಿ ಪರಿಪೂರ್ಣ ಹಕ್ಕನ್ನು ಹೊಂದಿರುತ್ತಾಳೆ. ಅವಳ ಮಕ್ಕಳು ಸಹ ತಮ್ಮ ತಾಯಿಯ ಕುಟುಂಬದ ಮೂಲದವರಾಗುತ್ತಾರೆ. ಇದು ಮಹಿಳೆಗೆ ಸಮಾಜದಲ್ಲಿ ಹೆಚ್ಚಿನ ಗೌರವ ಮತ್ತು ಭದ್ರತೆಯನ್ನು ನೀಡುತ್ತದೆ.

ಒಡ್ಡು ಉಂಗುರ: ಸಂಬಂಧಗಳ ಸೇತುವೆ

ಬಂಟರ ಮದುವೆಯಲ್ಲಿ ಒಡ್ಡು ಉಂಗುರ ಅಥವಾ ಪೇರ್ ಉಂಗಿಲಕ್ಕೆ ವಿಶೇಷ ಮಹತ್ವವಿದೆ. ಇದು ಕೇವಲ ಒಂದು ಆಭರಣವಾಗಿರದೆ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಸಂದೇಶಗಳನ್ನು ಹೊತ್ತಿದೆ. ಮದುಮಗಳಿಗೆ ಈ ಉಂಗುರವನ್ನು ತೊಡಿಸುವ ಮೊದಲು, ಅದನ್ನು ಹಾಲು ಅಥವಾ ಎಳನೀರಿನಲ್ಲಿ ಹಾಕಿಡುವುದು ವಾಡಿಕೆ. ಹಾಲಿನಂತಹ ಶುದ್ಧ ಮತ್ತು ದೀರ್ಘಕಾಲದ ಸಂಬಂಧವನ್ನು ಈ ಉಂಗುರ ಪ್ರತಿನಿಧಿಸುತ್ತದೆ.

ಈ ಉಂಗುರವು ಹೆಣ್ಣುಮಗಳನ್ನು ಎರಡು ಮನೆಗಳಿಗೆ ಸೇತುವೆಯಂತೆ (ಒಡಿ) ಜೋಡಿಸುವ ಸಂಕೇತವಾಗಿದೆ. ಮದುವೆಯಾದ ನಂತರವೂ, ಅವಳು ತನ್ನ ತವರು ಮನೆಯ ಕೊಂಡಿಯಾಗಿ ಉಳಿದುಕೊಳ್ಳುತ್ತಾಳೆ. ಇದು ಆಕೆಯ ಕುಟುಂಬದ ನೆನಪು, ಮೂಲ ಮತ್ತು ಸಂಪ್ರದಾಯಗಳನ್ನು ಉಳಿಸಿಕೊಳ್ಳುವ ಸಂಕಲ್ಪವನ್ನು ಬಿಂಬಿಸುತ್ತದೆ. ಈ ಉಂಗುರವು ಹೆಣ್ಣುಮಗಳ ಮುತ್ತೈದೆ ಲಕ್ಷಣವೂ ಹೌದು. ನಾಗವಂಶಿ ಕ್ಷತ್ರಿಯರಾದ ಬಂಟರು, ನಾಗದೇವರ ಹೆಡೆಯಂತೆ ಕಾಣುವ ಈ ಉಂಗುರವನ್ನು ನಾಗದೇವರ ರಕ್ಷಣೆಯ ಸಂಕೇತವೆಂದು ಸಹ ಭಾವಿಸುತ್ತಾರೆ.

ISBN Number : 978-93-342-6884-3

ಆಧುನಿಕ ಬಂಟ ಮಹಿಳೆ

ಆಧುನಿಕ ಶಿಕ್ಷಣ ಮತ್ತು ವೃತ್ತಿ ಅವಕಾಶಗಳು ಬಂಟ ಮಹಿಳೆಗೆ ಹೊಸ ದಾರಿಗಳನ್ನು ತೆರೆದಿವೆ. ಈಗ ಅವರು ಕೃಷಿ ಮತ್ತು ಕುಟುಂಬ ನಿರ್ವಹಣೆಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ, ವೈದ್ಯರು, ಇಂಜಿನಿಯರ್‌ಗಳು, ವಕೀಲರು, ಉದ್ಯಮಿಗಳು, ಕಲಾವಿದರು ಮತ್ತು ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುತ್ತಿದ್ದಾರೆ. ಆದರೂ, ತಮ್ಮ ಮೂಲ ಸಂಪ್ರದಾಯ ಮತ್ತು ಪರಂಪರೆಯನ್ನು ಉಳಿಸಿಕೊಂಡು ಹೋಗುವ ಮಹತ್ವವನ್ನು ಅವರು ಅರಿತಿದ್ದಾರೆ. ಇಂದಿಗೂ ಅನೇಕ ಕುಟುಂಬಗಳಲ್ಲಿ, ಹಿರಿಯರು ಧರಿಸುತ್ತಿದ್ದ ಆಭರಣಗಳನ್ನು ಪ್ರೀತಿಯಿಂದ ಸಂರಕ್ಷಿಸಲಾಗುತ್ತದೆ ಮತ್ತು ವಿಶೇಷ ಸಂದರ್ಭಗಳಲ್ಲಿ ಧರಿಸಲಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಟ ಸಮುದಾಯವು ಕೇವಲ ಒಂದು ಪ್ರಬಲ ಜನಾಂಗವಾಗಿರದೆ, ತಮ್ಮ ಶ್ರೀಮಂತ ಪರಂಪರೆ ಮತ್ತು ವಿಶಿಷ್ಟ ಸಂಪ್ರದಾಯಗಳನ್ನು ಸಂರಕ್ಷಿಸಿಕೊಂಡು ಬರುತ್ತಿರುವ ಸಮುದಾಯವಾಗಿದೆ. ಗುತ್ತು ಮನೆಗಳು, ಅಳಿಯಕಟ್ಟು ಪದ್ಧತಿ ಮತ್ತು ಒಡ್ಡು ಉಂಗುರದಂತಹ ಸಂಕೇತಗಳು ಅವರ ಜೀವನಶೈಲಿ, ನಂಬಿಕೆಗಳು ಮತ್ತು ಸಾಮಾಜಿಕ ರಚನೆಯನ್ನು ಪ್ರತಿಬಿಂಬಿಸುತ್ತವೆ. ಇವು ಅವರ ಗುರುತಿನ ಅವಿಭಾಜ್ಯ ಅಂಗಗಳಾಗಿದ್ದು, ಭವಿಷ್ಯದ ಪೀಳಿಗೆಗೂ ಇದೇ ಪರಂಪರೆಯನ್ನು ಉಳಿಸಿಕೊಂಡು ಹೋಗಬೇಕಿದೆ.

ಆಕರ ಗ್ರಂಥಗಳು:

1. "ಬಂಟರು ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ" - ಡಾ. ಇಂದಿರಾ ಹೆಗ್ಗಡೆ
2. "ಆರೋಗ್ಯ ಮತ್ತು ಅನಾರೋಗ್ಯ ಬಗ್ಗೆ ಮೂಢನಂಬಿಕೆಗಳು" - ಡಾ. ಎಂ. ಬಿ. ರೇಣುಕಾರ್ಯ
3. "ಮದುವೆ" - ಡಾ. ಶ್ರೀನಿವಾಸ್
4. "ಮಬ್ಬಿನಿಂದ ಇಬ್ಬನಿಗೆ" - ಸಿದ್ದರಾಮಯ್ಯ ಎಸ್. ಜಿ.
5. "ಭಾರತೀಯ ಇತಿಹಾಸ ಪುರಾಣಗಳು" - ನಾರಾಯಣಾಚಾರ್ಯ ಕೆ. ಎಸ್. (ಸಾಹಿತ್ಯ ಪ್ರಕಾಶನ)
6. "ಪ್ರಾಚೀನ ಭಾರತದಲ್ಲಿ ಶೂದ್ರರು" - ಶರ್ಮ ಆರ್. ಎಸ್.

ISBN Number : 978-93-342-6884-3

7. "ಪ್ರಾಚೀನ ಭಾರತವೆಂಬ ಅದ್ಭುತ" (ಖಿಜ ಘಹುಟಿಜಜಡಿ ಖಿಚಿಣ ಘಚಿ ಋಟಿಜಿಚಿ) - ಬಾಶಮ್ ಎ.ಎಲ್.

8. "ಪೂರ್ವೇತಿಹಾಸ" - ಇರ್ಫಾನ್ ಹಬೀಬ್

9. "ಭಾರತದ ಹಳ್ಳಿಗಳು" - ರವೀಂದ್ರ ಧನವಂತ ಹಳಿಂಗಳಿ

10. "ಕರ್ನಾಟಕದ ಸಾಂಸ್ಕೃತಿಕ ಇತಿಹಾಸ: ಆಯ್ದ ಟಿಪ್ಪಣಿಗಳು" - ಪ್ರಭಾಕರ ರಾವ್ ಕೆ.

11. "ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ" - ಕೊಸಾಂಬಿ ಡಿ.ಡಿ.

12. "ಭಾರತೀಯ ಸಾಂಸ್ಕೃರಿಕ ಅಸ್ಮಿತೆ" - ಪ್ರೇಮಶೇಖರ (ಸಾಹಿತ್ಯ ಪ್ರಕಾಶನ)

13. "ಬೂದಿಯಾಗದ ಕೆಂಡ - ಇದು ಹೊಲೆ ಮಾದಿಗರ ಪಾಡು" - ವಿಜಯಕುಮಾರ್ ಸಿಗರನಹಳ್ಳಿ

14. "ಬಾಳಿಗೊಂದು ನಂಬಿಕೆ" - ಡಿ.ವಿ.ಜಿ. (ಸಾಹಿತ್ಯ ಪ್ರಕಾಶನ)

15. "ಪಿರಕೆದ ಬಂಟರ್" - ಬಿ.ಸಚ್ಚಿದಾನಂದ ಹೆಗ್ಡೆ (ತುಳು ಕಾದಂಬರಿ)

16. "ತುಳು ನುಡಿ ಸಂಸ್ಕೃತಿ" - ಡಾ.ಹರಿಕೃಷ್ಣ ಭರಣ್ಯ

17. "ಕಳಸೆ" - ಡಾ.ದುಗ್ಗಪ್ಪ ಕಜೆಕಾರ್

ISBN Number : 978-93-342-6884-3

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟದ ನೆಲೆಗಳು

ಪ್ರಭಾವತಿ ಜೆ

ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

ಡಾ. ರಾಜೇಶ್ ಬೆಜ್ಜಂಗಳ

ಮಾರ್ಗದರ್ಶಕರು
ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ
ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಹುಡುಕುವಾಗ ತಮ್ಮ ಇಡೀ ವಿಚಾರಗಳ ಅಭಿವ್ಯಕ್ತಿಯ ನೆಲೆಯೇ ಹೋರಾಟದ ವಸ್ತುವಾಗಿರುವುದನ್ನು ನೋಡಬಹುದು ಆಗಿದೆ ಸಾಮಾಜಿಕ ನ್ಯಾಯ ವ್ಯವಸ್ಥೆಯ ಲೋಪ ದೋಷಗಳ ವಿರುದ್ಧ ಪಾತ್ರಗಳ ಮುಖಾಂತರ ದನಿ ಎತ್ತುತ್ತ ಓದುಗನಲ್ಲೂ ಸಹ ಅರಿವನ್ನು ಮೂಡಿಸುವ ಸಮಸ್ತೆ ಪ್ರಜ್ಞೆಯ ಜಾಗೃತ ಚಿಂತನೆಗಳನ್ನು ಮೂಡಿಸುತ್ತದೆ.

ಸಾಮಾಜಿಕ ಅಸಮಾನತೆ ಸಾಮಾಜಿಕ ನ್ಯಾಯ ಸಾಮಾಜಿಕ ಸಮಸ್ಯೆಗಳು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಸಂಘರ್ಷವನ್ನು ಉಂಟುಮಾಡುವ ವಿಚಾರಗಳ ಬಗ್ಗೆ ವಿವರಿಸಲಾಗುತ್ತದೆ ಒಂದು ಸಮಷ್ಟಿ ಪ್ರಜ್ಞೆಯಲ್ಲಿ ಉತ್ತಮವಾದ ಭವಿಷ್ಯ ರೂಪಿಸುವಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಲಾಗದ ಅಂಶಗಳನ್ನು ಶೋಧಿಸಲಾಗಿದೆ ಪಟ್ಟ ಭದ್ರ ಹಿತಾಸಕ್ತಿಗಳ ಉನ್ನಾರ ಮತ್ತು ತಳ ಮೂಲ ಸಮುದಾಯಗಳನ್ನು ತುಳಿಯುವ ಬದುಕನ್ನು ಚಿತ್ರಗೆ ಒಳಿಸುವ ದೋರಣೆಯು ಸಮಾಜದ ಮೇಲೆ ಬೀರಿದ ಪರಿಣಾಮ ಕಾರಂತರ ಕಾದಂಬರಿಗಳಲ್ಲಿ ವ್ಯಕ್ತವಾದ ರೀತಿಯನ್ನು ನೋಡ ಲಾಗಿದೆ ಇಲ್ಲಿ ಮರಳಿ ಮಣ್ಣಿಗೆ ಅಳಿದ ಮೇಲೆ ಚಿಗುರಿದ ಕನಸು ಚೋಮನ ದುಡಿ ಕಾದಂಬರಿಗಳ ಪ್ರಭಾವ ಹೆಚ್ಚಾಗಿ ಬೀರುತ್ತದೆ.

ಕಾರಂತರ ಕಾದಂಬರಿಗಳಲ್ಲಿ ರಾಜಕಾರಣ ಮತ್ತು ದಲಿತ ಜಾತಿ ಸಂಘರ್ಷದ ನೆಲೆಗಳನ್ನು ಶೋಧಿಸಿ ನೋಡುವಾಗ ಭಾರತದಂತಹ ಭಾವೈಕ್ಯತೆಯ ರಾಷ್ಟ್ರದಲ್ಲಿ ಪರಿಹರಿಸಲು ಅಸಾಧ್ಯವಾದಂತಹ ಸಾಮಾಜಿಕ ಸಮಸ್ಯೆಯಾದ ಜಾತೀಯತೆಯ ಪರಿಕಲ್ಪನೆ ಕಾದಂಬರಿಗಳಲ್ಲಿ ಅನಾವರಣಗೊಂಡಿರುವ ಸ್ವರೂಪ ಕರಾಳತೆಯ ದಿಗ್ದರ್ಶನ ವನ್ನೇ ನೀಡುತ್ತದೆ ಗ್ರಾಮೀಣ ಭಾಗಗಳಲ್ಲಿನ ದಲಿತ ಸಮುದಾಯವನ್ನು ತಳ ಸಮುದಾಯಗಳ ಸ್ಥಿತಿಯ ಹೋರಾಟದ ಬದುಕು ಅಸ್ತಿತ್ವದ ಅಳಿವಿನ ದಾರಿಯನ್ನೇ ತೋರಿಸುತ್ತದೆ.

ISBN Number : 978-93-342-6884-3

ಕಾರಂತರ ಕಾದಂಬರಿಗಳಲ್ಲಿ ರಾಜಕಾರಣ ರಾಜಕೀಯ ಬೀರಿದ ಪರಿಣಾಮಗಳ ಮತ್ತು ಅದರ ಉದ್ದೇಶವನ್ನು ಶೋಧಿಸುವಾಗ ಚೋಮನ ದುಡಿಯ ಜಾತಿ ರಾಜಕಾರಣದಿಂದಾಗಿ ಆತ ತನ್ನ ಮಹತ್ವಾಕಾಂಕ್ಷೆಯಾದ ಭೂಮಿಯ ಒಕ್ಕಲುತನವನ್ನು ಕೈ ಬಿಡಬೇಕಾಗುವ ದುಃಖ ಸ್ಥಿತಿಯನ್ನು ನೆನೆದು ತಾನು ಈ ಜಾತಿಯಲ್ಲಿ ಹುಟ್ಟಿದ್ದೇ ಶಾಪ ಎನ್ನುವಂತಹ ಕೀಳರಿಮೆ ಆತನಲ್ಲಿ ಮಾಡುವಂತೆ ಮಾಡುತ್ತದೆ.

ಸಾಮಾಜಿಕ ಸಮಸ್ಯೆಗಳಾಗಿ ಕಾಣುವ ಜಾತೀಯತೆ ಅಂತರ್ಜಾತೀಯ ವಿವಾಹಗಳನ್ನು ಅದನ್ನು ಪ್ರಶ್ನಿಸುವ ಮಾತುಗಳು ಕಾರಂತರ ಕಾದಂಬರಿಗಳಲ್ಲಿ ಸದಾ ಎಚ್ಚರವಾಗಿಯೇ ಇರುತ್ತದೆ ಅದರಲ್ಲಿ ಸಮಾಜದಿಂದ ಪಿಡುಗಾಗಿ ಪರಿಣಮಿಸಿದ್ದ ಅಥವಾ ವಿಧವಾ ವಿವಾಹವನ್ನು ವ್ಯವಸ್ಥೆಯ ವಿರೋಧದ ನಡುವೆಯೂ ಸಹ ಚಾಲನೆಗೆ ತಂದವರು ಸ್ವತಃ ಕಾರಂತರು ಈ ದೃಷ್ಟಿಯಿಂದ ಕನ್ಯಾ ಬಲಿ ಕಾದಂಬರಿ ಸಾಂಸ್ಕೃತಿಕವಾಗಿ ಮಹತ್ವದ್ದಾಗುತ್ತದೆ ಕಲಾತ್ಮಕ ಯಶಸ್ಸಿನ ದೃಷ್ಟಿಯಿಂದ ಗಮನಿಸಿದಾಗ ರೂಢಿಗತ ಹಿಂದೂ ಸಂಸ್ಕೃತಿಯನ್ನು ಕಟುವಾಗಿ ಪ್ರಶ್ನಿಸುವ ಎಲ್ಲಾ ಹಳೆಯ ಶಾಸ್ತ್ರ ಪುರಾತನ ನಂಬಿಕೆಗಳನ್ನು ಧಿಕ್ಕರಿಸಿ ವಿರೋಧಿಸುವ ಆಚರಣೆ ನಂಬಿಕೆಗಳ ಹಿಂದಿನ ಸ್ವಯಂ ವಿರೋಧ ವ್ಯಂಗ್ಯಗಳನ್ನು ಬಯಲು ಈ ಕಾದಂಬರಿ ಮಾಡುತ್ತದೆ ಹೆಣ್ಣು ಒಬ್ಬಳ ಮೇಲೆ ವಿಧವೆಯಾದ ನಂತರ ವೈವಿಧ್ಯವನ್ನು ಧರಣಿಯನ್ನು ಹೇರುವ ಮೂಲಕ ಅವಳಿಗೆ ಬದುಕನ್ನು ನಿರಾಕರಿಸುವ ಸಂಪ್ರದಾಯಬದ್ಧ ಸಮಾಜ ಆಕೆಯ ದುರಂತಕ್ಕೆ ತಾನೇ ಕಾರಣವಾಗುವ ಕ್ರೌರ್ಯವನ್ನು ಬಯಲು ಮಾಡುತ್ತದೆ. ತನ್ನ ಅಣ್ಣನ ಮದುವೆ ಸಡಗರ ಸಂಭ್ರಮದ ಹಿನ್ನೆಲೆಯಲ್ಲಿ ಬಾಲ್ಯ ವಿಧವೆ ಮಾಲತಿ ಅನುಭವಿಸುವ ಮಾನಸಿಕ ಯಾತನೆಯಿಂದ ಪ್ರಾರಂಭವಾಗುವ ಕನ್ಯಾ ಬಲಿ ಕ್ರಮೇಣ ಆಕೆ ಪ್ರಬಲನೆಂಬ ತರುಣನನ್ನು ಮದುವೆಯಾಗುವ ವಿಫಲ ಪ್ರಯತ್ನಗಳನ್ನು ದಾಟಿ ಆಕೆ ಅನಿವಾರ್ಯ ಎಂಬಂತೆ ವೇಶ್ಯವೃತ್ತಿಗೆ ತನ್ನನ್ನು ತಾನು ಕೊಳ್ಳುವವರಿಗೆ ಬೆಳೆಯುತ್ತದೆ.

ಮಾಲತಿಯ ತಂದೆ ತಾಯಿಯರು ಸಂಪ್ರದಾಯನಿಷ್ಠರು, ತಂದೆ ಮಧುಕರು ಹೇಳುವುದು ನೀನು ವಿಧವಾ ಕುಲ ಶಿಲೆ ಕುಲತೆ ಎಲ್ಲಾ ಸೂಳೇ ಎಲ್ಲಾ ಆದರೆ ಈ ಶೀಲದ ಹಿಂದೆ ಇರುವ ಬಲವಂತ ಲೈಂಗಿಕ ನಿರ್ಬಂಧಗಳು ಕರಾಳ ಅಮಾನವೀಯ ಧೋರಣೆಗಳು ಜೀವ ವಿರೋಧಿ ಪ್ರವೃತ್ತಿಗಳು ಅವನಿಗೆ ಅರ್ಥವಾಗುವುದೇ ಇಲ್ಲ ಶೀಲದ ಹೆಸರಿನಲ್ಲಿ ನಡೆಯುವ ಜೀವ ವಂಚನೆಗಿಂತ ಜೀವವಿರುವ ವೇಶ್ಯಾವೃತ್ತಿಯ ಮೇಲೂ ಕಾರಂತರು ಭಾವಿಸಿದ ಹಾಗಿದೆ.

ಮೈ ಮನಗಳ ಸುಳಿಯಲ್ಲಿ ಧರ್ಮರಾಯನ ಸಂಸಾರ ಚೋಮನ ದುಡಿಯಲ್ಲಿ ಪ್ರಶ್ನೆಗಳು ಹೇಳುವಂತೆ ಮಾಲತಿಯ ತಾಯಿ ಶಾರದೆಗೆ ಕೇಳುವ ಮುಂಡೆಗೆ ಮದುವೆ ಆಗಬೇಕೆನ್ನುತ್ತೀಯಾ ಎಂಬ ಪ್ರಶ್ನೆಗೆ ಪುರುಷ

ISBN Number : 978-93-342-6884-3

ಪ್ರಧಾನ ವ್ಯವಸ್ಥೆಯ ಹಿಂದಿನ ಹುನ್ನಾರವೇ ಆಗಿರುತ್ತದೆ ಚೋಮನ ದುಡಿಯ ಬೆಳ್ಳಿಯು ಸಹ ತನ್ನ ಆಸೆಗಳನ್ನು ಹತ್ತಿಕ್ಕಲಾಗದ ವಯೋ ಸಹಜವಾದ ಭಾವನೆಗಳಿಗೆ ಒಳಗಾಗಿ ಮನ್ವೇಲನ ಪ್ರೀತಿಯ ಬಲೆಯಲ್ಲಿ ಬಿದ್ದು ಸಮಾಜದ ವಿರುದ್ಧವಾಗಿ ಸಂಬಂಧ ಬೆಳೆಸಿಕೊಂಡು ಹೋಗುವುದು ತಾನು ಸಮಾಜದ ಒಪ್ಪಂದವಾದ ಮದುವೆ ವಿವಾಹವಾಗಿ ಬಂದವಳಲ್ಲ ಎಂಬ ಪ್ರಜ್ಞೆ ಇದ್ದರೂ ಮುಂದುವರೆದು ಮನ್ವೇಲ ಗುಡಿಸಲ ಬಳಿ ಒಂದಾಗಲು ಸಮಾಜದ ವ್ಯವಸ್ಥೆಗೆ ಮುಖಾಮುಖಿಯಾಗಲಾರದ ಅದೇ ವಾಸ್ತವ್ಯಕ್ಕೆ ಕಟ್ಟು ಬೆಳೆಯಬೇಕಾದ ಹೋರಾಟವನ್ನು ಕಾಣುತ್ತೇವೆ.

ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟಗಳನ್ನು ಮುನ್ನಡೆದಂತೆ ಚೋಮನ ದುಡಿಯ ಚೋಮ ಸಂಕಪ್ಪಯ್ಯ ದಶಿಗಳಲ್ಲಿ ಕೇಳುವ ತನಗೆ ಸ್ವಂತ ಹೊಲ ಹೊಂದುವ ಮಾತೆ ಆಶ್ರಯ ಮತ್ತು ಭಯಾನಕತೆ ಹುಟ್ಟಿಸುವಂತಾಗುತ್ತದೆ ಸಾಮಾಜಿಕ ತಾರತಮ್ಯಗಳು ಬುಡ ಮೇಲಾಗಿ ಸಮಾನತೆ ಹೊಂದುವ ದಿಕ್ಕು ಎಂಬಂತೆ ಭಾವಿಸುವ ದಣಿಗಳು ತನ್ನ ತಾಯಿಯನ್ನು ಕೇಳಿ ಹೇಳುತ್ತೇನೆ ಅದಕ್ಕೆ ಮುದ್ರೆ ಇರಬೇಕು ಎನ್ನುವಾಗ ಚೋಮನ ಆಸೆ ನಿರಾಸೆಯಾಗುತ್ತದೆ ಕಾರಣ ಪೂರ್ವ ಪರಂಪರೆ ಸಂಕಪ್ಪಯ್ಯ ದಣಿಗಳ ತಾಯಿ ಹೊಳೆಯವರು ಸ್ವಂತ ಬೇಸಾಯವಾದರೆ ನೇಗಿಲು ಹಿಡಿದರೆ ಪ್ರಳಯವೇ ಸಂಭವಿಸುತ್ತದೆ ಎಂಬ ಯಜಮಾನದ ಮಾತುಗಳನ್ನು ಕೇಳಿ ಸಾಮಾಜಿಕ ಅಸಮಾನತೆಗೆ ಚೋಮನ ಶ್ರಮದ ಬದುಕು ನಿರರ್ಥಕವಾಗುತ್ತದೆ.

ಸಮಾಜ ಚೋಮನ ಮಾನವ ಸಹಜ ಅಭಿಪಯೇಯೊಂದನ್ನು ಈಡೇರಿಸುವಷ್ಟು ಬದಲಾಗಿಲ್ಲ, ಪ್ರತುಭಟನೆಯ ಮೂಲಕ ತನ್ನ ಆಸೆಯನ್ನು ಪೂರೈಸಿಕೊಳ್ಳುವಷ್ಟು ರಾಜಕೀಯ ಸಾಮರ್ಥ್ಯವನ್ನು ಚೋಮನ ವರ್ಗ ಪಡೆದುಕೊಂಡಿಲ್ಲ ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲೇ ದಲಿತರ ಸಮಸ್ಯೆಗಳು ಬಗೆಹರಿಯುವಷ್ಟು ಸಮಾಜ ಬೆಳೆದಿಲ್ಲ ಚೋಮನ ಸಮಸ್ತೆ ಅವನ ವರ್ಗದ ಸಮಸ್ಯೆಯು ಹೌದು ವರ್ಣ ಸಮಸ್ಯೆಯು ಹೌದು ಚೋಮನ ಸಮಸ್ಯೆಯ ಮೂಲ ಅವನು ಅನುಭವಿಸುವ ಜಾತೀಯತೆಯ ಅಂಶ ಅದು ತನ್ನ ವರ್ಗದ ರಕ್ತದಲ್ಲಿ ಹರಿದು ಬಂದಿದೆ ಅದೆಂದು ಬದಲಾಗಲು ಸಾಧ್ಯವಿಲ್ಲ ಎಂಬಂತೆ ತಾನು ನೋವನ್ನು ಅನುಭವಿಸುತ್ತಾನೆ ಜಾತೀಯತೆಯ ರಾಜಕೀಯ ಹಿಂದೆ ಮುಂದೆ ಈ ಸಂಸ್ಕೃತಿಯಲ್ಲಿ ಬದಲಾಗದ ನಿರಾಶಾವಾದಿಯಾಗುತ್ತಾನೆ.

ಚೋಮನ ಸಮಸ್ಯೆ ಅವನ ವರ್ಗದ ಸಮಸ್ಯೆಯು ಆಗಿದೆ ವರ್ಣದ ಸಮಸ್ಯೆ ಸಹ ಆಗಿದೆ ದಲಿತರ ಸಮಸ್ಯೆಗಳು ಸಮಾಜದ ಚೌಕಟ್ಟಿನಲ್ಲಿ ಬಗೆಹರಿಯುವಷ್ಟು ಇನ್ನು ಮುಂದುವರೆದಿಲ್ಲವೆಂಬ ಕಹಿ ಸತ್ಯ ಬೆಳ್ಳಿಗೆ ತಿಳಿದಿರುತ್ತದೆ ಇದು ಶತ ಶತಮಾನಗಳ ವಾಸ್ತವ

ISBN Number : 978-93-342-6884-3

ಚೋಮನ ದುಡಿಯ ಕಾಲ ದೇಶಗಳ ಸಂದರ್ಭದಲ್ಲಿ ಭಾರತೀಯ ಸಮಾಜ ಒಂದು ಹೊಸ ಮೌಲ್ಯ ವ್ಯವಸ್ಥೆಯ ಪ್ರವೇಶವನ್ನು ಎದುರುಗೊಂಡಿದೆ ಮತಾಂತರ ಚಟುವಟಿಕೆಗಳಲ್ಲಿ ತೊಡಗಿದ್ದರೆ ಮುಖ್ಯವಾಗಿ ದಲಿತರು ಕ್ರೈಸ್ತ ಮತಕ್ಕೆ ಸೇರಲಾರಂಭಿಸಿದ್ದರು ಈ ಮತಾಂತರದ ಹಿಂದಿನ ಒಂದು ಮುಖ್ಯ ಪ್ರೇರಣೆಯೆಂದರೆ ಸಾಮಾಜಿಕ ವರ್ಣ ಸಮಸ್ಯೆ ವರ್ಣ ಸಮಸ್ಯೆ ಮಿಷನರಿಗಳು ನೀಡುವ ಆರ್ಥಿಕ ಪ್ರಲೋಚನೆ ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದರೆ ಆರ್ಥಿಕವಾಗಿ ಸಿಗುವ ಅನುಕೂಲ ಆಕರ್ಷಿತರನ್ನಾಗಿ ಮಾಡುತ್ತದೆ ಅಂತೆಯೇ ಮಿಷನರಿಗಳು ಉಳಲು ಭೂಮಿ ಯನ್ನು ಕೊಡುತ್ತಿದ್ದಾರೆ ಸ್ವಂತ ಭೂಮಿ ಹೊಂದುವ ಆಸೆ ಈ ರೀತಿಯಾಗಿ ನನಸಾಗುತ್ತಿದ್ದ ಸಂದರ್ಭ ಈ ಆಸೆಯನ್ನು ಇದೆ ಜಾತಿಯಲ್ಲಿದ್ದುಕೊಂಡು ಪೂರೈಸುವುದು ಸಾಧ್ಯವಾಗಲಿಲ್ಲ.

ಮತಾಂತರವನ್ನು ದಲಿತ ವಿಮೋಚನೆಯ ಒಂದು ಸಾಧ್ಯತೆಯನ್ನಾಗಿ ಗಮನಿಸುತ್ತಿರುವ ಕಾದಂಬರಿ ಅಸಾಧ್ಯತೆಯನ್ನು ಪರ ಎಂಬಂತೆ ನೋಡುತ್ತಿಲ್ಲ ಮತಾಂತರದ ಚಟುವಟಿಕೆಗಳ ಹಿಂದಿನ ಸಾಮ್ರಾಜ್ಯ ಶಾಹಿ ವಸಾಹತುಶಾಹಿ ರಾಜಕಾರಣವನ್ನ ಕಾದಂಬರಿ ಚೋಮನ ದುಡಿಯು ಬಿಂಬಿಸುತ್ತದೆ ಭೂಮಿಯ ಕಾರಣಕ್ಕೆ ಮತಾಂತರವಾಗಿ ಪಡೆಯಬೇಕೆಂದು ಹೋರಾಟ ಚೋಮನ ದುಡಿಯ ಮಾರ್ಗ ಮಧ್ಯದಲ್ಲಿ ಸಿಗುವ ಪಂಜುರ್ಲಿ ದೈವದ ಆದೇಶದಂತೆ ಮರಳಿ ತನ್ನ ಸಂಸ್ಕೃತಿಗೆ ತೆರಳುತ್ತಾನೆ ಇದು ಒಂದು ವಾಸ್ತವವಾಗಿ ಕಾದಂಬರಿಯಾಗುವುದಿಲ್ಲ ಹೊಸ ೧೦ಶಾಹಿ ವಿರೋಧಿಯ ಕಾದಂಬರಿಯು ಆಗುತ್ತದೆ ಒಂದು ಸಮಾಜದ ಆಳ ಅಗಲವನ್ನು ನೋಡುತ್ತಾ ಹೋದಂತೆ ಅಲ್ಲಿನ ಹುಳುಕುಗಳು ಬೇರೆ ಬೇರೆ ರೀತಿಯಾಗಿ ಕಾಣುವಂತೆ ಚೋಮನ ದುಡಿಯಲ್ಲೂ ಸಹ ಸಾಮಾಜಿಕ ನ್ಯಾಯದ ಮುಂದುವರೆದಂತೆ ಸರಸಮ್ಮನ ಸಮಾಧಿಯಲ್ಲಿ ಸರಸಮ್ಮ ಸತಿ ಸಹಗಮನ ಪದ್ಧತಿಯನ್ನು ಹಲವು ಆಯಾಮಗಳಲ್ಲಿ ಅಂದರೆ ಅಂದಿನ ಸಾಮಾಜಿಕ ವ್ಯವಸ್ಥೆಯ ರೂಪದಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ ಇಲ್ಲಿ ದಾಂಪತ್ಯ ಜೀವನದ ವಿರಸಗಳ ವಿವಿಧ ಚಿತ್ರಗಳನ್ನು ಸಚಿತ್ರವಾಗಿ ನೀಡುತ್ತದೆ ಪ್ರತಿಯೊಬ್ಬಳು ಪತಿಯಾದವನು ಮಡಿದಾಗ ಅವನ ಚಿಂತೆಗೆ ಬಲವಂತವಾಗಿ ನೂಕಲ್ಪಟ್ಟ ಅದೇ ಜನರಿಂದ ಗುಡಿ ಕಟ್ಟಿಸಿಕೊಂಡು ಮಹಾಸತಿ ಎನಿಸಿಕೊಂಡರು ದೇಹದ ಬಯಕೆಗಳಿಂದ ಅತೃಪ್ತಿಗೊಂಡು ಪ್ರೇತ ಸ್ವರೂಪಿಯಾಗಿ ಅಲೆಯುತ್ತಾಳೆ ಅತೃಪ್ತ ದಾಂಪತ್ಯ ಜೀವನದಿಂದ ನೋಂದವರೆಲ್ಲರೂ ಈ ಮಹಾಸತಿಯ ಗುಂಪಿಗೆ ಸುತ್ತು ಬಂದು ತಮ್ಮ ದಾಂಪತ್ಯ ಜೀವನ ಸುಗಮವಾಗಲೆಂದು ಹರಕೆ ಹೇಳಿಕೊಳ್ಳುವ ವಿಪರ್ಯಾಸ ಸಮಾಜದ ಅಂದ ಆಚರಣೆಗಳ ಪ್ರತಿ ರೂಪದಂತಿದೆ.

ಸತಿ ಪದ್ಧತಿಯ ಸಾಮಾಜಿಕ ಅನ್ಯಾಯವನ್ನು ಕಥೆಯ ಸೂಚ್ಯವಾಗಿ ತಿಳಿಸುತ್ತದೆ ಅಲ್ಲದೆ ನಮ್ಮ ಜನರ ಧಾರ್ಮಿಕ ಮೂಢನಂಬಿಕೆಯನ್ನು ಅನಾವರಣಗೊಳಿಸುವ ಸನ್ನಿವೇಶವನ್ನು ಸೃಷ್ಟಿಸಿದೆ ಕಥೆಯ ಅಂತ್ಯವು

ISBN Number : 978-93-342-6884-3

ಅವಾಸ್ತವಿಕ ನಾಟಕೀಯ ಸನ್ನಿವೇಶಗಳು ಇದ್ದರೂ ಮೂಡನಂಬಿಕೆಯ ಜಿಡ್ಡುಗಟ್ಟಿದ ಮನಸ್ಸನ್ನು ಬಡಿದೆಬ್ಬಿಸುವ ನಿಟ್ಟಿನಲ್ಲಿ ಕಾದಂಬರಿ ಪ್ರಸ್ತುತ ಸಮಾಜವನ್ನು ಜಾಗುತಗೊಳಿಸುತ್ತದೆ.

ಕಾರಂತರ ಸರಸಮ್ಮನ ಸಮಾಧಿಯಲ್ಲಿನ ಚಂದ್ರಯ್ಯ ನನ್ನು ಹಂಬಲಿಸುವುದು ತಾನು ಮೊದಲೇ ವಿವಾಹಿತವಾದರೂ ತನ್ನ ಗಂಡನಿಂದ ಹೊರಬಂದು ತಂದೆಯ ಮನೆಯಲ್ಲಿ ವಾಸಿಸುವಾಗ ಸಮಾಜದ ದೃಷ್ಟಿಯಿಂದ ಗಂಡ ಬಿಟ್ಟವಳು ಎನಿಸಿಕೊಂಡ ಹಾಗೆ ಹೆಂಡತಿ ಬಿಟ್ಟವಳು ಎನಿಸಿಕೊಳ್ಳುತ್ತಾನೆ ಎಂದು ಹೇಳುವಲ್ಲಿ ಸಮಾಜದಲ್ಲಿ ಗಂಡು ಹೆಣ್ಣಿನ ಹಗಲುವಿಗೆ ಸಮಾಜ ದೃಷ್ಟಿಯ ಕಂದಕಗಳನ್ನೇ ನಿರ್ಮಿಸುತ್ತದೆ.

ಕಾರಂತರು ಸಮಾಜದ ಎಲ್ಲಾ ತರದ ಜನರನ್ನು ಕುರಿತು ತಮ್ಮ ಚಿಂತನೆಯನ್ನು ವಿಸ್ತರಿಸಿದವರು ಸಮಾಜದ ಮುಖ್ಯ ಅಂಗವಾಗಿದ್ದರು ಬೇರೆ ಬೇರೆ ಕಾರಣಗಳಿಂದ ಮುಖ್ಯ ವಾಹಿನಿಯಿಂದ ದೂರವಾದ ವೇಷಯರ ಬದುಕನ್ನು ಕಾರಂತರಷ್ಟು ವ್ಯಾಪಕವಾಗಿ ನೋಡಿದ ಮತ್ತೊಬ್ಬ ಕನ್ನಡದ ಲೇಖಕರು ವಿರಳ ವೇಷಯೊಬ್ಬಳ ಅಂತರಂಗವನ್ನು ಪಾಪ ಪುಣ್ಯಗಳ ಪರದೆಯಿಂದ ಬಿಡಿಸಿ ಅವರನ್ನು ಕೇವಲ ಮನುಷ್ಯರಾಗಿ ನೋಡುವ ಅದ್ಭುತ ಪ್ರಯತ್ನ ಮೈಮನಗಳ ಸುಳಿಯಲ್ಲಿ ಕಾದಂಬರಿಯಲ್ಲಿದೆ ತಾಯಿತನದ ಬಯಕೆ ಪ್ರತಿಯೊಬ್ಬ ಹೆಣ್ಣಿನ ಜೀವನದ ಉನ್ನತ ಆಕಾಂಕ್ಷೆ ಯಾಗಿರುವಂತೆ ವೇಶ್ಯೆಯೊಬ್ಬಳು ಮಗುವಿಗಾಗಿ ಹಂಬಲಿಸುವ ಬರಿಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಈ ಕಾದಂಬರಿಯಲ್ಲಿ ವೈಚಾರಿಕ ಚಿಂತನೆಗಳ ಸಂಘರ್ಷವಾಗಿ ಕಾಣುತ್ತದೆ.

ಸಮಾಜದಲ್ಲಿ ಕುಟುಂಬ ಕೇಂದ್ರೀತ ವ್ಯವಸ್ಥೆಯಲ್ಲಿ ಕೌಟುಂಬಿಕ ಸಮಸ್ಯೆಯ ದಾಂಪತ್ಯದ ರೂಪುರೆಷೆಗಳು ಕಟ್ಟುಪಾಡುಗಳಿಗೆ ಒಳಗಾಗಿ ಅನೇಕ ಸಮಸ್ಯೆ ಸವಾಲುಗಳ ನಡುವೆಯೂ ಸಹ ದಿಗ್ಬಂಧನಗಳ ನಡುವೆ ಸಮಾಜದಲ್ಲಿ ಸರಿತೂಗಿಸಿಕೊಂಡು ಹೋಗುವ ಸನ್ನಿವೇಶ ನೂಡಬಹುದು ದಾಂಪತ್ಯ ವಿರಸದಿಂದ ಕೆರೆಗೆ ಹಾರಿದ ಸುನಾಲಿಯನ್ನ ಭೇಟಿಯಾಗಿ ಅವಳನ್ನು ಸಾವಿನಿಂದ ತಪ್ಪಿಸುತ್ತಾನೆ. ಚಂದ್ರಯ್ಯನನ್ನು ವಿವಾಹವಾಗಲು ತವರಿನಲ್ಲಿದ್ದ ಭಾಗಿರತಿ ಬಯಸಿ ಅವನ ಸ್ನೇಹ ಗಳಿಸುತ್ತಾಳೆ ಆದರೆ ಕಾರಣಾಂತರದಿಂದ ಅದು ಕಾರ್ಯರೂಪಕ್ಕೆ ಬರುವುದಿಲ್ಲ ಚಂದ್ರಯಾನ ಸ್ವಭಾವ ತುಂಬಾ ಸರಳ ಅವನ ಮನಸ್ಸಿನ ವಿಚಾರವನ್ನು ತಿಳಿಯಲು ಅಸಾಧ್ಯವೇ ಈ ಕಾರಣದಿಂದ ಅವನ ಬಗ್ಗೆ ಕೆಟ್ಟ ಅಭಿಪ್ರಾಯವಿರುತ್ತದೆ ರಾಮಣ್ಣಯ್ಯ ತನ್ನ ಮಗಳು ಜಲಜಾಕ್ಷಿಯನ್ನು ಚಂದ್ರಯನಿಗೆ ಮದುವೆ ಮಾಡಿ ಕೊಡಲು ಪ್ರಯತ್ನಿಸುತ್ತಾನೆ ಅವರಿಗೂ ಚಂದ್ರಯ್ಯ ಮಾತು ಕೊಡುವುದಿಲ್ಲ ಅವನ ಅಭಿಪ್ರಾಯದಂತೆ ವಿವಾಹ ಒಂದು ರೀತಿಯ ಬಂಧನ ಪ್ರೇತ ಬೆಳ್ಳಕ್ಕ ಸಿಕ್ಕಲ್ಲಿ ವಿವಾಹವಾಗದಂತೆ ಮಾಡಬೇಕೆಂದು ಬೇಡಿಕೊಳ್ಳಲು ಯೋಚಿಸುತ್ತಾನೆ.

ISBN Number : 978-93-342-6884-3

ಅವಳನ್ನು ಕಾಣುವ ಸಲುವಾಗಿ ರಾತ್ರಿ ಹೊತ್ತಿನಲ್ಲಿ ಸರಸಮ್ಮನ ಗುಡಿಗೆ ತೆರಳುತ್ತಾನೆ ಅವನಿಗೆ ಈ ಬಾರಿ ಬೆಳ್ಳಕ್ಕನ ಪ್ರೇತ ಕಾಣಿ ಸಿಗುತ್ತದೆ ಬೆಳ್ಳಕ್ಕ ತನ್ನನ್ನು ವಿವಾಹ ಬೇಕೆಂದು ಕೇಳಿಕೊಳ್ಳುತ್ತಾನೆ ಆದರೆ ಆ ಶರೀರದ ಅವಳನ್ನು ವಿವಾಹವಾಗಿ ತಾನೇನು ಸುಖ ಪಡೆಯಬಲ್ಲನೆಂಬ ವಿಚಾರ ಉಂಟಾಗಿ ಅದನ್ನು ಅವಳಿಗೂ ತಿಳಿಸುತ್ತಾನೆ ಆಗ ಆ ಪ್ರೇತ ತಾನು ಶಶಿಧರಳಾಗಿದ್ದಾಗ ನಡೆದ ವೃತ್ತಾಂತವನ್ನು ತಿಳಿಸುತ್ತದೆ, ತನ್ನ ಗಂಡ ನೀಲಾ ಚಲಯ್ಯನ ಕಾಯಿಲೆಯಿಂದ ಸತ್ತಾಗ ಜನ ಬಲವಂತವಾಗಿ ತನ್ನನ್ನು ಅವನ ಹೆಣದೊಂದಿಗೆ ಸುಟ್ಟು ಸತಿ ಸಹಗಮನ ಪದ್ಧತಿ ಸಮಾಜ ಅನುಸರಿಸಿಕೊಂಡ ಪದ್ಧತಿ ತನ್ನನ್ನು ಅಭಿಪ್ರಾಯಕ್ಕೂ ಒಳಪಡಿಸದ ಸಂಪೂರ್ಣ ಸಮಾಜ ನಿಗ್ರಹಕ್ಕೆ ಆಗ ಬೆಳ್ಳಕ್ಕ ಒಳಗಾಗಿ ಚಿತೆಗೆ ತಳ್ಳಲ್ಪಟ್ಟಿದ್ದಳು ಇದು ಸಾಮಾಜಿಕ ಹೇರಲ್ಪಡುವಿಕೆ ಆಗಿತ್ತು.

ಮಹಾಸತಿ ಎಂದಾದ ಬಗೆಯನ್ನು ತನ್ನ ವ್ಯಥೆಯನ್ನು ಸಜೀವವಾದ ಚಂದ್ರಯ್ಯ ಬೆಳ್ಳಕ್ಕ ಪ್ರೇತ ಹೇಳುವಾಗ ಸಮಾಜದ ಕಟು ವಾಸ್ತವತೆ ಹಿಡಿದ ಕೈಗನ್ನಡಿ ಎಂತಿರುತ್ತದೆ ನಿಜಕ್ಕೂ ದೇಹದ ಬಯಕೆಯಿಂದ ಅಪ್ರಾಪ್ತಳಾದ ಪ್ರೇಮಿ ಮಹಾಸತಿ ಸರಸಮ್ಮ ಶರಣಾಗಿದ್ದೇನೆ ಎನ್ನುವ ಭಾವವಿದೆ.

ಸುನಾಲಿನಿ ಓದಿಕೊಂಡವಳು ಮುಖ್ಯವಾದದು ಹಣ ಪತಿ ಬಾರದೆ ಊಟ ಮಾಡುವಂತಿಲ್ಲ ಅತ್ತೆ ರಾಜೀವಿಗೆ ಹೊಸ ಸೊಸೆ ಪತ್ರಿಕೆ ಓದಿದರೆ ಕೋಪ ಕಂತಿಯವರಿಗೆ ವ್ಯಾಪಾರದ ಬಗ್ಗೆ ಹೆಂಡತಿಗೆ ಸಮಯ ಕೊಡಲು ಮನಸ್ಸು ಮತ್ತು ಸಮಯವಿಲ್ಲ ಇದರ ನಿರೀಕ್ಷೆ ಇರುವ ಸುನಾಲಿನಿ ಹೊಸದಾಗಿ ಮದುವೆ ಆದ ಸಂಭ್ರಮದಲ್ಲಿ ಗಂಡನಿಂದ ನಿರೀಕ್ಷಿಸಿದ ಪ್ರೀತಿ ಸಿಗದೇ ಹೋಗುತ್ತದೆ ವಿಚಾರವಂತಳದ ಸುನಾಲಿನಿ ಸಾಮಾಜಿಕ ಕಟ್ಟುಪಾಡುಗಳಿಗೆ ಒಗ್ಗಿಕೊಳ್ಳದಾಗುತ್ತಾಳೆ

ಮರಳಿ ಮಣ್ಣಿಗೆ ವಿವಾಹ ಮತ್ತು ಪರಸ್ಪರ ಸಂಬಂಧ ಕುರಿತು ಹೆಚ್ಚು ಹೊತ್ತು ಕೊಟ್ಟು ರಚಿತವಾದ ಒಂದೇ ಕುಟುಂಬದ ಮೂರು ತಲೆಮಾರುಗಳ ಸಾಮಾಜಿಕ ಚಿತ್ರಣ ಹಳ್ಳಿಯ ಒಂದು ಕುಟುಂಬದಲ್ಲಿ ಸ್ತ್ರೀಯ ಶೋಷಣೆ ಅದರಲ್ಲೂ ಮುಖ್ಯವಾಗಿ ಪತ್ನಿಯರ ಶೋಷಣೆ ಹಾಗಾಗುತ್ತಿದೆ ಎನ್ನುವ ಅಂಶವನ್ನು ಪ್ರತಿಪಾದಿಸುತ್ತದೆ ಕಾರಂತರು ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿನ ಸಹಕಾರ ಅತಿ ಅವಶ್ಯಕ ಕೇವಲ ಗಂಡಿನಿಂದ ಏನು ಸಾಧ್ಯವಿಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ ಆದರೆ ಸಮಾಜದ ಪ್ರತಿರೋಧದೊಂದಿಗೆ ಬಂಡಾಯವಿದ್ದು ಬದುಕುವುದು ಅಸಹಜ ಎಂಬ ನಿಲುವು ಕಾಣುತ್ತದೆ.

ಹೀಗೆ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟದ ನೆಲೆಗಳು ಹಾಸು ಹೊಕ್ಕಾಗಿರುವುದನ್ನು ನೋಡಬಹುದು.

ISBN Number : 978-93-342-6884-3

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟದ ನೆಲೆಗಳು

ಪ್ರಭಾವತಿ ಜೆ
ಸಂಶೋಧನಾ ವಿದ್ಯಾರ್ಥಿ
ಶ್ರೀನಿವಾಸ ವಿಶ್ವವಿದ್ಯಾಲಯ
ಹಂಪನ ಕಟ್ಟೆ, ಮಂಗಳೂರು.

ಡಾ. ರಾಜೇಶ್ ಬೆಜ್ಜಂಗಳ
ಸಂಶೋಧನಾ ಮಾರ್ಗದರ್ಶಕರು
ಶ್ರೀನಿವಾಸ ವಿಶ್ವವಿದ್ಯಾಲಯ
ಹಂಪನ ಕಟ್ಟೆ, ಮಂಗಳೂರು.

ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ನೆಲೆಗಳನ್ನು ಹುಡುಕುವಾಗ ತಮ್ಮ ಇಡೀ ವಿಚಾರಗಳ ಅಭಿವ್ಯಕ್ತಿಯ ನೆಲೆಯೇ ಹೋರಾಟದ ವಸ್ತುವಾಗಿರುವುದನ್ನು ನೋಡಬಹುದು ಆಗಿದೆ ಸಾಮಾಜಿಕ ನ್ಯಾಯ ವ್ಯವಸ್ಥೆಯ ಲೋಪ ದೋಷಗಳ ವಿರುದ್ಧ ಪಾತ್ರಗಳ ಮುಖಾಂತರ ದನಿ ಎತ್ತುತ್ತ ಓದುಗನಲ್ಲೂ ಸಹ ಅರಿವನ್ನು ಮೂಡಿಸುವ ಸಮಸ್ತೆ ಪ್ರಜ್ಞೆಯ ಜಾಗೃತ ಚಿಂತನೆಗಳನ್ನು ಮೂಡಿಸುತ್ತದೆ.

ಸಾಮಾಜಿಕ ಅಸಮಾನತೆ ಸಾಮಾಜಿಕ ನ್ಯಾಯ ಸಾಮಾಜಿಕ ಸಮಸ್ಯೆಗಳು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಸಂಘರ್ಷವನ್ನು ಉಂಟುಮಾಡುವ ವಿಚಾರಗಳ ಬಗ್ಗೆ ವಿವರಿಸಲಾಗುತ್ತದೆ ಒಂದು ಸಮಸ್ಟಿ ಪ್ರಜ್ಞೆಯಲ್ಲಿ ಉತ್ತಮವಾದ ಭವಿಷ್ಯ ರೂಪಿಸುವಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಲಾಗದ ಅಂಶಗಳನ್ನು ಶೋಧಿಸಲಾಗಿದೆ ಪಟ್ಟ ಭದ್ರ ಹಿತಾಸಕ್ತಿಗಳ ಉನ್ನಾರ ಮತ್ತು ತಳ ಮೂಲ ಸಮುದಾಯಗಳನ್ನು ತುಳಿಯುವ ಬದುಕನ್ನು ಚಿತ್ರಗೆಒಳಿಸುವ ದೋರಣೆಯು ಸಮಾಜದ ಮೇಲೆ ಬೀರಿದ ಪರಿಣಾಮ ಕಾರಂತರ ಕಾದಂಬರಿಗಳಲ್ಲಿ ವ್ಯಕ್ತವಾದ ರೀತಿಯನ್ನು ನೋಡ ಲಾಗಿದೆ ಇಲ್ಲಿ ಮರಳಿ ಮಣ್ಣಿಗೆ ಅಳಿದ ಮೇಲೆ ಚಿಗುರಿದ ಕನಸು ಚೋಮನ ದುಡಿ ಕಾದಂಬರಿಗಳ ಪ್ರಭಾವ ಹೆಚ್ಚಾಗಿ ಬೀರುತ್ತದೆ.

ಕಾರಂತರ ಕಾದಂಬರಿಗಳಲ್ಲಿ ರಾಜಕಾರಣ ಮತ್ತು ದಲಿತ ಜಾತಿ ಸಂಘರ್ಷದ ನೆಲೆಗಳನ್ನು ಶೋಧಿಸಿ ನೋಡುವಾಗ ಭಾರತದಂತಹ ಭಾವೈಕ್ಯತೆಯ ರಾಷ್ಟದಲ್ಲಿ ಪರಿಹರಿಸಲು ಅಸಾಧ್ಯವಾದಂತಹ ಸಾಮಾಜಿಕ ಸಮಸ್ಯೆಯಾದ ಜಾತೀಯತೆಯ ಪರಿಕಲ್ಪನೆ ಕಾದಂಬರಿಗಳಲ್ಲಿ ಅನಾವರಣಗೊಂಡಿರುವ ಸ್ವರೂಪ ಕರಾಳತೆಯ ದಿಗ್ದರ್ಶನ ವನ್ನೇ ನೀಡುತ್ತದೆ ಗ್ರಾಮೀಣ ಭಾಗಗಳಲ್ಲಿನ ದಲಿತ ಸಮುದಾಯವನ್ನು ತಳ ಸಮುದಾಯಗಳ ಸ್ಥಿತಿಯ ಹೋರಾಟದ ಬದುಕು ಅಸ್ತಿತ್ವದ ಅಳಿವಿನ ದಾರಿಯನ್ನೇ ತೋರಿಸುತ್ತದೆ.

ISBN Number : 978-93-342-6884-3

ಕಾರಂತರ ಕಾದಂಬರಿಗಳಲ್ಲಿ ರಾಜಕಾರಣ ರಾಜಕೀಯ ಬೀರಿದ ಪರಿಣಾಮಗಳ ಮತ್ತು ಅದರ ಉದ್ದೇಶವನ್ನು ಶೋಧಿಸುವಾಗ ಚೋಮನ ದುಡಿಯ ಜಾತಿ ರಾಜಕಾರಣದಿಂದಾಗಿ ಆತ ತನ್ನ ಮಹತ್ವಾಕಾಂಕ್ಷೆಯಾದ ಭೂಮಿಯ ಒಕ್ಕಲುತನವನ್ನು ಕೈ ಬಿಡಬೇಕಾಗುವ ದುಃಖ ಸ್ಥಿತಿಯನ್ನು ನೆನೆದು ತಾನು ಈ ಜಾತಿಯಲ್ಲಿ ಹುಟ್ಟಿದ್ದೇ ಶಾಪ ಎನ್ನುವಂತಹ ಕೀಳರಿಮೆ ಆತನಲ್ಲಿ ಮಾಡುವಂತೆ ಮಾಡುತ್ತದೆ.

ಸಾಮಾಜಿಕ ಸಮಸ್ಯೆಗಳಾಗಿ ಕಾಣುವ ಜಾತೀಯತೆ ಅಂತರ್ಜಾತೀಯ ವಿವಾಹಗಳನ್ನು ಅದನ್ನು ಪ್ರಶ್ನಿಸುವ ಮಾತುಗಳು ಕಾರಂತರ ಕಾದಂಬರಿಗಳಲ್ಲಿ ಸದಾ ಎಚ್ಚರವಾಗಿಯೇ ಇರುತ್ತದೆ ಅದರಲ್ಲಿ ಸಮಾಜದಿಂದ ಪಿಡುಗಾಗಿ ಪರಿಣಮಿಸಿದ್ದ ಅಥವಾ ವಿಧವಾ ವಿವಾಹವನ್ನು ವ್ಯವಸ್ಥೆಯ ವಿರೋಧದ ನಡುವೆಯೂ ಸಹ ಚಾಲನೆಗೆ ತಂದವರು ಸ್ವತಃ ಕಾರಂತರು ಈ ದೃಷ್ಟಿಯಿಂದ ಕನ್ಯಾ ಬಲಿ ಕಾದಂಬರಿ ಸಾಂಸ್ಕೃತಿಕವಾಗಿ ಮಹತ್ವದ್ದಾಗುತ್ತದೆ ಕಲಾತ್ಮಕ ಯಶಸ್ಸಿನ ದೃಷ್ಟಿಯಿಂದ ಗಮನಿಸಿದಾಗ ರೂಢಿಗತ ಹಿಂದೂ ಸಂಸ್ಕೃತಿಯನ್ನು ಕಟುವಾಗಿ ಪ್ರಶ್ನಿಸುವ ಎಲ್ಲಾ ಹಳೆಯ ಶಾಸ್ತ್ರ ಪುರಾತನ ನಂಬಿಕೆಗಳನ್ನು ಧಿಕ್ಕರಿಸಿ ವಿರೋಧಿಸುವ ಆಚರಣೆ ನಂಬಿಕೆಗಳ ಹಿಂದಿನ ಸ್ವಯಂ ವಿರೋಧ ವ್ಯಂಗ್ಯಗಳನ್ನು ಬಯಲು ಈ ಕಾದಂಬರಿ ಮಾಡುತ್ತದೆ ಹೆಣ್ಣು ಒಬ್ಬಳ ಮೇಲೆ ವಿಧವೆಯಾದ ನಂತರ ವೈವಿಧ್ಯವನ್ನು ಧರಣಿಯನ್ನು ಹೇರುವ ಮೂಲಕ ಅವಳಿಗೆ ಬದುಕನ್ನು ನಿರಾಕರಿಸುವ ಸಂಪ್ರದಾಯಬದ್ಧ ಸಮಾಜ ಆಕೆಯ ದುರಂತಕ್ಕೆ ತಾನೇ ಕಾರಣವಾಗುವ ಕ್ರೌರ್ಯವನ್ನು ಬಯಲು ಮಾಡುತ್ತದೆ. ತನ್ನ ಅಣ್ಣನ ಮದುವೆ ಸಡಗರ ಸಂಭ್ರಮದ ಹಿನ್ನೆಲೆಯಲ್ಲಿ ಬಾಲ್ಯ ವಿಧವೆ ಮಾಲತಿ ಅನುಭವಿಸುವ ಮಾನಸಿಕ ಯಾತನೆಯಿಂದ ಪ್ರಾರಂಭವಾಗುವ ಕನ್ಯಾ ಬಲಿ ಕ್ರಮೇಣ ಆಕೆ ಪ್ರಬಲನೆಂಬ ತರುಣನನ್ನು ಮದುವೆಯಾಗುವ ವಿಫಲ ಪ್ರಯತ್ನಗಳನ್ನು ದಾಟಿ ಆಕೆ ಅನಿವಾರ್ಯ ಎಂಬಂತೆ ವೇಶ್ಯವೃತ್ತಿಗೆ ತನ್ನನ್ನು ತಾನು ಕೊಳ್ಳುವವರಿಗೆ ಬೆಳೆಯುತ್ತದೆ.

ಮಾಲತಿಯ ತಂದೆ ತಾಯಿಯರು ಸಂಪ್ರದಾಯನಿಷ್ಠರು, ತಂದೆ ಮಧುಕರು ಹೇಳುವುದು ನೀನು ವಿಧವಾ ಕುಲ ಶಿಲೆ ಕುಲತೆ ಎಲ್ಲಾ ಸೂಳೇ ಎಲ್ಲಾ ಆದರೆ ಈ ಶೀಲದ ಹಿಂದೆ ಇರುವ ಬಲವಂತ ಲೈಂಗಿಕ ನಿರ್ಬಂಧಗಳು ಕರಾಳ ಅಮಾನವೀಯ ಧೋರಣೆಗಳು ಜೀವ ವಿರೋಧಿ ಪ್ರವೃತ್ತಿಗಳು ಅವನಿಗೆ ಅರ್ಥವಾಗುವುದೇ ಇಲ್ಲ ಶೀಲದ ಹೆಸರಿನಲ್ಲಿ ನಡೆಯುವ ಜೀವ ವಂಚನೆಗಿಂತ ಜೀವವಿರುವ ವೇಶ್ಯಾವೃತ್ತಿಯ ಮೇಲೂ ಕಾರಂತರು ಭಾವಿಸಿದ ಹಾಗಿದೆ.

ಮೈ ಮನಗಳ ಸುಳಿಯಲ್ಲಿ ಧರ್ಮರಾಯನ ಸಂಸಾರ ಚೋಮನ ದುಡಿಯಲ್ಲಿ ಪ್ರಶ್ನೆಗಳು ಹೇಳುವಂತೆ ಮಾಲತಿಯ ತಾಯಿ ಶಾರದೆಗೆ ಕೇಳುವ ಮುಂಡೆಗೆ ಮದುವೆ ಆಗಬೇಕೆನ್ನುತ್ತೀಯಾ ಎಂಬ ಪ್ರಶ್ನೆಗೆ ಪುರುಷ

ISBN Number : 978-93-342-6884-3

ಪ್ರಧಾನ ವ್ಯವಸ್ಥೆಯ ಹಿಂದಿನ ಹುನ್ನಾರವೇ ಆಗಿರುತ್ತದೆ ಚೋಮನ ದುಡಿಯ ಬೆಳ್ಳಿಯು ಸಹ ತನ್ನ ಆಸೆಗಳನ್ನು ಹತ್ತಿಕ್ಕಲಾಗದ ವಯೋ ಸಹಜವಾದ ಭಾವನೆಗಳಿಗೆ ಒಳಗಾಗಿ ಮನ್ವೇಲನ ಪ್ರೀತಿಯ ಬಲೆಯಲ್ಲಿ ಬಿದ್ದು ಸಮಾಜದ ವಿರುದ್ಧವಾಗಿ ಸಂಬಂಧ ಬೆಳೆಸಿಕೊಂಡು ಹೋಗುವುದು ತಾನು ಸಮಾಜದ ಒಪ್ಪಂದವಾದ ಮದುವೆ ವಿವಾಹವಾಗಿ ಬಂದವಳಲ್ಲ ಎಂಬ ಪ್ರಜ್ಞೆ ಇದ್ದರೂ ಮುಂದುವರೆದು ಮನ್ವೇಲ ಗುಡಿಸಲ ಬಳಿ ಒಂದಾಗಲು ಸಮಾಜದ ವ್ಯವಸ್ಥೆಗೆ ಮುಖಾಮುಖಿಯಾಗಲಾರದ ಅದೇ ವಾಸ್ತವ್ಯಕ್ಕೆ ಕಟ್ಟು ಬೆಳೆಯಬೇಕಾದ ಹೋರಾಟವನ್ನು ಕಾಣುತ್ತೇವೆ.

ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟಗಳನ್ನು ಮುನ್ನಡೆದಂತೆ ಚೋಮನ ದುಡಿಯ ಚೋಮ ಸಂಕಪ್ಪಯ್ಯ ದಣಿಗಳಲ್ಲಿ ಕೇಳುವ ತನಗೆ ಸ್ವಂತ ಹೊಲ ಹೊಂದುವ ಮಾತೆ ಆಶ್ರಯ ಮತ್ತು ಭಯಾನಕತೆ ಹುಟ್ಟಿಸುವಂತಾಗುತ್ತದೆ ಸಾಮಾಜಿಕ ತಾರತಮ್ಯಗಳು ಬುಡ ಮೇಲಾಗಿ ಸಮಾನತೆ ಹೊಂದುವ ದಿಕ್ಕು ಎಂಬಂತೆ ಭಾವಿಸುವ ದಣಿಗಳು ತನ್ನ ತಾಯಿಯನ್ನು ಕೇಳಿ ಹೇಳುತ್ತೇನೆ ಅದಕ್ಕೆ ಮುದ್ರೆ ಇರಬೇಕು ಎನ್ನುವಾಗ ಚೋಮನ ಆಸೆ ನಿರಾಸೆಯಾಗುತ್ತದೆ ಕಾರಣ ಪೂರ್ವ ಪರಂಪರೆ ಸಂಕಪ್ಪಯ್ಯ ದಣಿಗಳ ತಾಯಿ ಹೊಲೆಯವರು ಸ್ವಂತ ಬೇಸಾಯವಾದರೆ ನೇಗಿಲು ಹಿಡಿದರೆ ಪ್ರಳಯವೇ ಸಂಭವಿಸುತ್ತದೆ ಎಂಬ ಯಜಮಾನದ ಮಾತುಗಳನ್ನು ಕೇಳಿ ಸಾಮಾಜಿಕ ಅಸಮಾನತೆಗೆ ಚೋಮನ ಶ್ರಮದ ಬದುಕು ನಿರರ್ಥಕವಾಗುತ್ತದೆ.

ಸಮಾಜ ಚೋಮನ ಮಾನವ ಸಹಜ ಅಭಿಪಯೇಯೊಂದನ್ನು ಈಡೇರಿಸುವಷ್ಟು ಬದಲಾಗಿಲ್ಲ, ಪ್ರತುಭಟನೆಯ ಮೂಲಕ ತನ್ನ ಆಸೆಯನ್ನು ಪೂರೈಸಿಕೊಳ್ಳುವಷ್ಟು ರಾಜಕೀಯ ಸಾಮರ್ಥ್ಯವನ್ನು ಚೋಮನ ವರ್ಗ ಪಡೆದುಕೊಂಡಿಲ್ಲ ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲೇ ದಲಿತರ ಸಮಸ್ಯೆಗಳು ಬಗೆಹರಿಯುವಷ್ಟು ಸಮಾಜ ಬೆಳೆದಿಲ್ಲ ಚೋಮನ ಸಮಸ್ತೆ ಅವನ ವರ್ಗದ ಸಮಸ್ಯೆಯು ಹೌದು ವರ್ಣ ಸಮಸ್ಯೆಯು ಹೌದು ಚೋಮನ ಸಮಸ್ಯೆಯ ಮೂಲ ಅವನು ಅನುಭವಿಸುವ ಜಾತೀಯತೆಯ ಅಂಶ ಅದು ತನ್ನ ವರ್ಗದ ರಕ್ತದಲ್ಲಿ ಹರಿದು ಬಂದಿದೆ ಅದೆಂದು ಬದಲಾಗಲು ಸಾಧ್ಯವಿಲ್ಲ ಎಂಬಂತೆ ತಾನು ನೋವನ್ನು ಅನುಭವಿಸುತ್ತಾನೆ ಜಾತೀಯತೆಯ ರಾಜಕೀಯ ಹಿಂದೆ ಮುಂದೆ ಈ ಸಂಸ್ಕೃತಿಯಲ್ಲಿ ಬದಲಾಗದ ನಿರಾಶಾವಾದಿಯಾಗುತ್ತಾನೆ.

ಚೋಮನ ಸಮಸ್ಯೆ ಅವನ ವರ್ಗದ ಸಮಸ್ಯೆಯು ಆಗಿದೆ ವರ್ಣದ ಸಮಸ್ಯೆ ಸಹ ಆಗಿದೆ ದಲಿತರ ಸಮಸ್ಯೆಗಳು ಸಮಾಜದ ಚೌಕಟ್ಟಿನಲ್ಲಿ ಬಗೆಹರಿಯುವಷ್ಟು ಇನ್ನು ಮುಂದುವರೆದಿಲ್ಲವೆಂಬ ಕಹಿ ಸತ್ಯ ಬೆಳ್ಳಿಗೆ ತಿಳಿದಿರುತ್ತದೆ ಇದು ಶತ ಶತಮಾನಗಳ ವಾಸ್ತವ

 ISBN Number : 978-93-342-6884-3

ಚೋಮನ ದುಡಿಯ ಕಾಲ ದೇಶಗಳ ಸಂದರ್ಭದಲ್ಲಿ ಭಾರತೀಯ ಸಮಾಜ ಒಂದು ಹೊಸ ಮೌಲ್ಯ ವ್ಯವಸ್ಥೆಯ ಪ್ರವೇಶವನ್ನು ಎದುರುಗೊಂಡಿದೆ ಮತಾಂತರ ಚಟುವಟಿಕೆಗಳಲ್ಲಿ ತೊಡಗಿದ್ದರೆ ಮುಖ್ಯವಾಗಿ ದಲಿತರು ಕ್ರೈಸ್ತ ಮತಕ್ಕೆ ಸೇರಲಾರಂಭಿಸಿದ್ದರು ಈ ಮತಾಂತರದ ಹಿಂದಿನ ಒಂದು ಮುಖ್ಯ ಪ್ರೇರಣೆಯೆಂದರೆ ಸಾಮಾಜಿಕ ವರ್ಣ ಸಮಸ್ಯೆ ವರ್ಣ ಸಮಸ್ಯೆ ಮಿಷನರಿಗಳು ನೀಡುವ ಆರ್ಥಿಕ ಪ್ರಲೋಚನೆ ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದರೆ ಆರ್ಥಿಕವಾಗಿ ಸಿಗುವ ಅನುಕೂಲ ಆಕರ್ಷಿತರನ್ನಾಗಿ ಮಾಡುತ್ತದೆ ಅಂತೆಯೇ ಮಿಷನರಿಗಳು ಉಳಲು ಭೂಮಿ ಯನ್ನು ಕೊಡುತ್ತಿದ್ದಾರೆ ಸ್ವಂತ ಭೂಮಿ ಹೊಂದುವ ಆಸೆ ಈ ರೀತಿಯಾಗಿ ನನಸಾಗುತ್ತಿದ್ದ ಸಂದರ್ಭ ಈ ಆಸೆಯನ್ನು ಇದೆ ಜಾತಿಯಲ್ಲಿದ್ದುಕೊಂಡು ಪೂರೈಸುವುದು ಸಾಧ್ಯವಾಗಲಿಲ್ಲ.

ಮತಾಂತರವನ್ನು ದಲಿತ ವಿಮೋಚನೆಯ ಒಂದು ಸಾಧ್ಯತೆಯನ್ನಾಗಿ ಗಮನಿಸುತ್ತಿರುವ ಕಾದಂಬರಿ ಅಸಾಧ್ಯತೆಯನ್ನು ಪರ ಎಂಬಂತೆ ನೋಡುತ್ತಿಲ್ಲ ಮತಾಂತರದ ಚಟುವಟಿಕೆಗಳ ಹಿಂದಿನ ಸಾಮ್ರಾಜ್ಯ ಶಾಹಿ ವಸಾಹತುಶಾಹಿ ರಾಜಕಾರಣವನ್ನ ಕಾದಂಬರಿ ಚೋಮನ ದುಡಿಯು ಬಿಂಬಿಸುತ್ತದೆ ಭೂಮಿಯ ಕಾರಣಕ್ಕೆ ಮತಾಂತರವಾಗಿ ಪಡೆಯಬೇಕೆಂದು ಹೋರಾಟ ಚೋಮನ ದುಡಿಯ ಮಾರ್ಗ ಮಧ್ಯದಲ್ಲಿ ಸಿಗುವ ಪಂಜುರ್ಲಿ ದೈವದ ಆದೇಶದಂತೆ ಮರಳಿ ತನ್ನ ಸಂಸ್ಕೃತಿಗೆ ತೆರಳುತ್ತಾನೆ ಇದು ಒಂದು ವಾಸ್ತವವಾಗಿ ಕಾದಂಬರಿಯಾಗುವುದಿಲ್ಲ ಹೊಸ ೧೦ಶಾಹಿ ವಿರೋಧಿಯ ಕಾದಂಬರಿಯು ಆಗುತ್ತದೆ ಒಂದು ಸಮಾಜದ ಆಳ ಅಗಲವನ್ನು ನೋಡುತ್ತಾ ಹೋದಂತೆ ಅಲ್ಲಿನ ಹುಳುಕುಗಳು ಬೇರೆ ಬೇರೆ ರೀತಿಯಾಗಿ ಕಾಣುವಂತೆ ಚೋಮನ ದುಡಿಯಲ್ಲೂ ಸಹ ಸಾಮಾಜಿಕ ನ್ಯಾಯದ ಮುಂದುವರೆದಂತೆ ಸರಸಮ್ಮನ ಸಮಾಧಿಯಲ್ಲಿ ಸರಸಮ್ಮ ಸತಿ ಸಹಗಮನ ಪದ್ಧತಿಯನ್ನು ಹಲವು ಆಯಾಮಗಳಲ್ಲಿ ಅಂದರೆ ಅಂದಿನ ಸಾಮಾಜಿಕ ವ್ಯವಸ್ಥೆಯ ರೂಪದಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ ಇಲ್ಲಿ ದಾಂಪತ್ಯ ಜೀವನದ ವಿರಸಗಳ ವಿವಿಧ ಚಿತ್ರಗಳನ್ನು ಸಚಿತ್ರವಾಗಿ ನೀಡುತ್ತದೆ ಪ್ರತಿಯೊಬ್ಬಳು ಪತಿಯಾದವನು ಮಡಿದಾಗ ಅವನ ಚಿಂತೆಗೆ ಬಲವಂತವಾಗಿ ನೂಕಲ್ಪಟ್ಟ ಅದೇ ಜನರಿಂದ ಗುಡಿ ಕಟ್ಟಿಸಿಕೊಂಡು ಮಹಾಸತಿ ಎನಿಸಿಕೊಂಡರು ದೇಹದ ಬಯಕೆಗಳಿಂದ ಅತೃಪ್ತಿಗೊಂಡು ಪ್ರೇತ ಸ್ವರೂಪಿಯಾಗಿ ಅಲೆಯುತ್ತಾಳೆ ಅತೃಪ್ತ ದಾಂಪತ್ಯ ಜೀವನದಿಂದ ನೋಂದವರೆಲ್ಲರೂ ಈ ಮಹಾಸತಿಯ ಗುಂಪಿಗೆ ಸುತ್ತು ಬಂದು ತಮ್ಮ ದಾಂಪತ್ಯ ಜೀವನ ಸುಗಮವಾಗಲೆಂದು ಹರಕೆ ಹೇಳಿಕೊಳ್ಳುವ ವಿಪರ್ಯಾಸ ಸಮಾಜದ ಅಂದ ಆಚರಣೆಗಳ ಪ್ರತಿ ರೂಪದಂತಿದೆ.

ಸತಿ ಪದ್ಧತಿಯ ಸಾಮಾಜಿಕ ಅನ್ಯಾಯವನ್ನು ಕಥೆಯ ಸೂಚ್ಯವಾಗಿ ತಿಳಿಸುತ್ತದೆ ಅಲ್ಲದೆ ನಮ್ಮ ಜನರ ಧಾರ್ಮಿಕ ಮೂಢನಂಬಿಕೆಯನ್ನು ಅನಾವರಣಗೊಳಿಸುವ ಸನ್ನಿವೇಶವನ್ನು ಸೃಷ್ಟಿಸಿದೆ ಕಥೆಯ ಅಂತ್ಯವು

ISBN Number : 978-93-342-6884-3

ಅವಾಸ್ತವಿಕ ನಾಟಕೀಯ ಸನ್ನಿವೇಶಗಳು ಇದ್ದರೂ ಮೂಢನಂಬಿಕೆಯ ಜಿಡ್ಡುಗಟ್ಟಿದ ಮನಸ್ಸನ್ನು ಬಡಿದೆಬ್ಬಿಸುವ ನಿಟ್ಟಿನಲ್ಲಿ ಕಾದಂಬರಿ ಪ್ರಸ್ತುತ ಸಮಾಜವನ್ನು ಜಾಗುತಗೊಳಿಸುತ್ತದೆ.

ಕಾರಂತರ ಸರಸಮ್ಮನ ಸಮಾಧಿಯಲ್ಲಿನ ಚಂದ್ರಯ್ಯ ನನ್ನು ಹಂಬಲಿಸುವುದು ತಾನು ಮೊದಲೇ ವಿವಾಹಿತವಾದರೂ ತನ್ನ ಗಂಡನಿಂದ ಹೊರಬಂದು ತಂದೆಯ ಮನೆಯಲ್ಲಿ ವಾಸಿಸುವಾಗ ಸಮಾಜದ ದೃಷ್ಟಿಯಿಂದ ಗಂಡ ಬಿಟ್ಟವಳು ಎನಿಸಿಕೊಂಡ ಹಾಗೆ ಹೆಂಡತಿ ಬಿಟ್ಟವಳು ಎನಿಸಿಕೊಳ್ಳುತ್ತಾನೆ ಎಂದು ಹೇಳುವಲ್ಲಿ ಸಮಾಜದಲ್ಲಿ ಗಂಡು ಹೆಣ್ಣಿನ ಹಗಲುವಿಗೆ ಸಮಾಜ ದೃಷ್ಟಿಯ ಕಂದಕಗಳನ್ನೇ ನಿರ್ಮಿಸುತ್ತದೆ.

ಕಾರಂತರು ಸಮಾಜದ ಎಲ್ಲಾ ತರದ ಜನರನ್ನು ಕುರಿತು ತಮ್ಮ ಚಿಂತನೆಯನ್ನು ವಿಸ್ತರಿಸಿದವರು ಸಮಾಜದ ಮುಖ್ಯ ಅಂಗವಾಗಿದ್ದರು ಬೇರೆ ಬೇರೆ ಕಾರಣಗಳಿಂದ ಮುಖ್ಯ ವಾಹಿನಿಯಿಂದ ದೂರವಾದ ವೇಷಯರ ಬದುಕನ್ನು ಕಾರಂತರಷ್ಟು ವ್ಯಾಪಕವಾಗಿ ನೋಡಿದ ಮತ್ತೊಬ್ಬ ಕನ್ನಡದ ಲೇಖಕರು ವಿರಳ ವೇಷಯೊಬ್ಬಳ ಅಂತರಂಗವನ್ನು ಪಾಪ ಪುಣ್ಯಗಳ ಪರದೆಯಿಂದ ಬಿಡಿಸಿ ಅವರನ್ನು ಕೇವಲ ಮನುಷ್ಯರಾಗಿ ನೋಡುವ ಅದ್ಭುತ ಪ್ರಯತ್ನ ಮೈಮನಗಳ ಸುಳಿಯಲ್ಲಿ ಕಾದಂಬರಿಯಲ್ಲಿದೆ ತಾಯಿತನದ ಬಯಕೆ ಪ್ರತಿಯೊಬ್ಬ ಹೆಣ್ಣಿನ ಜೀವನದ ಉನ್ನತ ಆಕಾಂಕ್ಷೆ ಯಾಗಿರುವಂತೆ ವೇಶ್ಯೆಯೊಬ್ಬಳು ಮಗುವಿಗಾಗಿ ಹಂಬಲಿಸುವ ಬರಿಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಈ ಕಾದಂಬರಿಯಲ್ಲಿ ವೈಚಾರಿಕ ಚಿಂತನೆಗಳ ಸಂಘರ್ಷವಾಗಿ ಕಾಣುತ್ತದೆ.

ಸಮಾಜದಲ್ಲಿ ಕುಟುಂಬ ಕೇಂದ್ರೀತ ವ್ಯವಸ್ಥೆಯಲ್ಲಿ ಕೌಟುಂಬಿಕ ಸಮಸ್ಯೆಯ ದಾಂಪತ್ಯದ ರೂಪುರೇಷೆಗಳು ಕಟ್ಟುಪಾಡುಗಳಿಗೆ ಒಳಗಾಗಿ ಅನೇಕ ಸಮಸ್ಯೆ ಸವಾಲುಗಳ ನಡುವೆಯೂ ಸಹ ದಿಗ್ಬಂಧನಗಳ ನಡುವೆ ಸಮಾಜದಲ್ಲಿ ಸರಿತೂಗಿಸಿಕೊಂಡು ಹೋಗುವ ಸನ್ನಿವೇಶ ನೂಡಬಹುದು ದಾಂಪತ್ಯ ವಿರಸದಿಂದ ಕೆರೆಗೆ ಹಾರಿದ ಸುನಾಲಿಯನ್ನ ಭೇಟಿಯಾಗಿ ಅವಳನ್ನು ಸಾವಿನಿಂದ ತಪ್ಪಿಸುತ್ತಾನೆ. ಚಂದ್ರಯ್ಯನನ್ನು ವಿವಾಹವಾಗಲು ತವರಿನಲ್ಲಿದ್ದ ಭಾಗಿರತಿ ಬಯಸಿ ಅವನ ಸ್ನೇಹ ಗಳಿಸುತ್ತಾಳೆ ಆದರೆ ಕಾರಣಾಂತರದಿಂದ ಅದು ಕಾರ್ಯರೂಪಕ್ಕೆ ಬರುವುದಿಲ್ಲ ಚಂದ್ರಯಾನ ಸ್ವಭಾವ ತುಂಬಾ ಸರಳ ಅವನ ಮನಸ್ಸಿನ ವಿಚಾರವನ್ನು ತಿಳಿಯಲು ಅಸಾಧ್ಯವೇ ಈ ಕಾರಣದಿಂದ ಅವನ ಬಗ್ಗೆ ಕೆಟ್ಟ ಅಭಿಪ್ರಾಯವಿರುತ್ತದೆ ರಾಮಣ್ಣಯ್ಯ ತನ್ನ ಮಗಳು ಜಲಜಾಕ್ಷಿಯನ್ನು ಚಂದ್ರಯನಿಗೆ ಮದುವೆ ಮಾಡಿ ಕೊಡಲು ಪ್ರಯತ್ನಿಸುತ್ತಾನೆ ಅವರಿಗೂ ಚಂದ್ರಯ್ಯ ಮಾತು ಕೊಡುವುದಿಲ್ಲ ಅವನ ಅಭಿಪ್ರಾಯದಂತೆ ವಿವಾಹ ಒಂದು ರೀತಿಯ ಬಂಧನ ಪ್ರೇತ ಬೆಳ್ಳಕ್ಕ ಸಿಕ್ಕಲ್ಲಿ ವಿವಾಹವಾಗದಂತೆ ಮಾಡಬೇಕೆಂದು ಬೇಡಿಕೊಳ್ಳಲು ಯೋಚಿಸುತ್ತಾನೆ.

ISBN Number : 978-93-342-6884-3

ಅವಳನ್ನು ಕಾಣುವ ಸಲುವಾಗಿ ರಾತ್ರಿ ಹೊತ್ತಿನಲ್ಲಿ ಸರಸಮ್ಮನ ಗುಡಿಗೆ ತೆರಳುತ್ತಾನೆ ಅವನಿಗೆ ಈ ಬಾರಿ ಬೆಳ್ಳಕ್ಕನ ಪ್ರೇತ ಕಾಣಿ ಸಿಗುತ್ತದೆ ಬೆಳ್ಳಕ್ಕ ತನ್ನನ್ನು ವಿವಾಹ ಬೇಕೆಂದು ಕೇಳಿಕೊಳ್ಳುತ್ತಾನೆ ಆದರೆ ಆ ಶರೀರದ ಅವಳನ್ನು ವಿವಾಹವಾಗಿ ತಾನೇನು ಸುಖ ಪಡೆಯಬಲ್ಲನೆಂಬ ವಿಚಾರ ಉಂಟಾಗಿ ಅದನ್ನು ಅವಳಿಗೂ ತಿಳಿಸುತ್ತಾನೆ ಆಗ ಆ ಪ್ರೇತ ತಾನು ಶಶಿಧರಳಾಗಿದ್ದಾಗ ನಡೆದ ವೃತ್ತಾಂತವನ್ನು ತಿಳಿಸುತ್ತದೆ, ತನ್ನ ಗಂಡ ನೀಲಾ ಚಲಯ್ಯನ ಕಾಯಿಲೆಯಿಂದ ಸತ್ತಾಗ ಜನ ಬಲವಂತವಾಗಿ ತನ್ನನ್ನು ಅವನ ಹೆಣದೊಂದಿಗೆ ಸುಟ್ಟು ಸತಿ ಸಹಗಮನ ಪದ್ಧತಿ ಸಮಾಜ ಅನುಸರಿಸಿಕೊಂಡ ಪದ್ಧತಿ ತನ್ನನ್ನು ಅಭಿಪ್ರಾಯಕ್ಕೂ ಒಳಪಡಿಸದ ಸಂಪೂರ್ಣ ಸಮಾಜ ನಿಗ್ರಹಕ್ಕೆ ಆಗ ಬೆಳ್ಳಕ್ಕ ಒಳಗಾಗಿ ಚಿತೆಗೆ ತಳ್ಳಲ್ಪಟ್ಟಿದ್ದಳು ಇದು ಸಾಮಾಜಿಕ ಹೇರಲ್ಪಡುವಿಕೆ ಆಗಿತ್ತು.

ಮಹಾಸತಿ ಎಂದಾದ ಬಗೆಯನ್ನು ತನ್ನ ವ್ಯಥೆಯನ್ನು ಸಜೀವವಾದ ಚಂದ್ರಯ್ಯ ಬೆಳ್ಳಕ್ಕ ಪ್ರೇತ ಹೇಳುವಾಗ ಸಮಾಜದ ಕಟು ವಾಸ್ತವತೆ ಹಿಡಿದ ಕೈಗನ್ನಡಿ ಎಂತಿರುತ್ತದೆ ನಿಜಕ್ಕೂ ದೇಹದ ಬಯಕೆಯಿಂದ ಅಪ್ರಾಪ್ತಳಾದ ಪ್ರೇಮಿ ಮಹಾಸತಿ ಸರಸಮ್ಮ ಶರಣಾಗಿದ್ದೇನೆ ಎನ್ನುವ ಭಾವವಿದೆ.

ಸುನಾಲಿನಿ ಓದಿಕೊಂಡವಳು ಮುಖ್ಯವಾದದು ಹಣ ಪತಿ ಬಾರದೆ ಊಟ ಮಾಡುವಂತಿಲ್ಲ ಅತ್ತೆ ರಾಜೀವಿಗೆ ಹೊಸ ಸೊಸೆ ಪತ್ರಿಕೆ ಓದಿದರೆ ಕೋಪ ಕಂತಿಯವರಿಗೆ ವ್ಯಾಪಾರದ ಬಗ್ಗೆ ಹೆಂಡತಿಗೆ ಸಮಯ ಕೊಡಲು ಮನಸ್ಸು ಮತ್ತು ಸಮಯವಿಲ್ಲ ಇದರ ನಿರೀಕ್ಷೆ ಇರುವ ಸುನಾಲಿನಿ ಹೊಸದಾಗಿ ಮದುವೆ ಆದ ಸಂಭ್ರಮದಲ್ಲಿ ಗಂಡನಿಂದ ನಿರೀಕ್ಷಿಸಿದ ಪ್ರೀತಿ ಸಿಗದೇ ಹೋಗುತ್ತದೆ ವಿಚಾರವಂತಳದ ಸುನಾಲಿನಿ ಸಾಮಾಜಿಕ ಕಟ್ಟುಪಾಡುಗಳಿಗೆ ಒಗ್ಗಿಕೊಳ್ಳದಾಗುತ್ತಾಳೆ

ಮರಳಿ ಮಣ್ಣಿಗೆ ವಿವಾಹ ಮತ್ತು ಪರಸ್ಪರ ಸಂಬಂಧ ಕುರಿತು ಹೆಚ್ಚು ಹೊತ್ತು ಕೊಟ್ಟು ರಚಿತವಾದ ಒಂದೇ ಕುಟುಂಬದ ಮೂರು ತಲೆಮಾರುಗಳ ಸಾಮಾಜಿಕ ಚಿತ್ರಣ ಹಳ್ಳಿಯ ಒಂದು ಕುಟುಂಬದಲ್ಲಿ ಸ್ತ್ರೀಯ ಶೋಷಣೆ ಅದರಲ್ಲೂ ಮುಖ್ಯವಾಗಿ ಪತ್ನಿಯರ ಶೋಷಣೆ ಹಾಗಾಗುತ್ತಿದೆ ಎನ್ನುವ ಅಂಶವನ್ನು ಪ್ರತಿಪಾದಿಸುತ್ತದೆ ಕಾರಂತರು ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿನ ಸಹಕಾರ ಅತಿ ಅವಶ್ಯಕ ಕೇವಲ ಗಂಡಿನಿಂದ ಏನು ಸಾಧ್ಯವಿಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ ಆದರೆ ಸಮಾಜದ ಪ್ರತಿರೋಧದೊಂದಿಗೆ ಬಂಡಾಯವಿದ್ದು ಬದುಕುವುದು ಅಸಹಜ ಎಂಬ ನಿಲುವು ಕಾಣುತ್ತದೆ.

ಹೀಗೆ ಕಾರಂತರ ಕಾದಂಬರಿಗಳಲ್ಲಿ ಸಾಮಾಜಿಕ ಹೋರಾಟದ ನೆಲೆಗಳು ಹಾಸು ಹೊಕ್ಕಾಗಿರುವುದನ್ನು ನೋಡಬಹುದು.

ISBN Number : 978-93-342-6884-3

ಸರ್ವಜ್ಞನ ವಚನಗಳಲ್ಲಿ ಸಾಮಾಜಿಕ ಸಮಾನತೆ

ಡಾ.ಸೈಯದ್ ಮುಯಿನ್

ಕನ್ನಡ ಸಹಾಯಕ ಪ್ರಾಧ್ಯಾಪಕ

ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ

ಬೆಂಗಳೂರು–77

ಸರ್ವಜ್ಞನೆಂಬುವನು ಗರ್ವದಿಂದಾದವನೆ?

ಸರ್ವರೊಳಗೊಂದು ನುಡಿಗಲಿತು ವಿದ್ಯೆಯ

ಪರ್ವತವೇ ಆದ ಸರ್ವಜ್ಞ (ನ, ಸಾ. ೬೫)

ಸರ್ವಜ್ಞ ಎಂಬ ವ್ಯಕ್ತಿ ಗರ್ವದಿಂದಾದವನಲ್ಲ. ಪ್ರತಿಯೊಬ್ಬರಿಂದ ಒಂದೊಂದು ನುಡಿ ಕಲಿತು ಎಲ್ಲವನ್ನು ಬಲ್ಲವನಾದನು ಎಂಬುದೇ ಈ ಮೇಲಿನ ವಚನದ ತಾತ್ಪರ್ಯ. ಸಮಾಜ ಹಾಗು ಜನಜೀವನವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದ ಜನಪ್ರಿಯ ವಚನಕಾರನೆಂದರೆ ಅದು ಸರ್ವಜ್ಞ, ಸತ್ಯವನ್ನು ತನ್ನ ಉಸಿರಾಗಿಸಿಕೊಂಡಿದ್ದ, ವಿಶಾಲ ಮನಸ್ಸಿನ ವ್ಯಕ್ತಿಯಾಗಿದ್ದ ಸರ್ವಜ್ಞನು ಅನುಭವಿ ಮತ್ತು ವಿವೇಕಿಯೂ ಆಗಿದ್ದನು. ಈತನು ೧೬–೧೭ನೇ ಶತಮಾನದಲ್ಲಿ ಪ್ರಖ್ಯಾತಿ ಗಳಿಸಿದ್ದ ವಚನಕಾರನಾಗಿದ್ದನು. ಇವನ ಹುಟ್ಟೂರು ಧಾರವಾಡ ಜಿಲ್ಲೆಯ ಅಬ್ಬಲೂರು. ಸರ್ವಜ್ಞನ ಜೀವನವನ್ನು ಕುರಿತ ಮಾಹಿತಿಗಳು ಲಭ್ಯವಿಲ್ಲ. ಆತನ ಬಗೆಗಿನ ಮಾಹಿತಿಗಳು ಇತರ ವಚನಕಾರರ ವಚನಗಳಿಂದ ತಿಳಿದುಬಂದಿದೆ.

ಸರ್ವಜ್ಞನು ಒಬ್ಬ ಅನುಭವಿ ವಚನಕಾರನಾಗಿದ್ದನು. ಇವನ ವಚನಗಳಲ್ಲಿ ಸತ್ಯ, ಜೀವನ ಪ್ರೀತಿ, ವಿರಕ್ತಿ, ವಿವೇಕ, ಸಾಮಾಜಿಕ ಕಾಳಜಿಗಳು ವ್ಯಕ್ತವಾಗಿವೆ.

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ

ರಸಿಕನಲ್ಲದವನ ಬರಿಮಾತು ಕಿವಿಯೊಳು

ಕೂರ್ದೆಸೆಯ ಬಡಿದಂತೆ ಸರ್ವಜ್ಞ (ಕ,.ಸಾ, ಕೋಶ ೫೧)

ISBN Number : 978-93-342-6884-3

ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆ

ರಸಿಕರು ಆಡುವ ಮಾತು ಚಂದ್ರನು ಉದಯಿಸಿ ಬಂದಂತೆ ಮನಸ್ಸಿಗೆ ಆಹ್ಲಾದಕರವಾಗಿರುತ್ತದೆ. ಸಂತೋಷದಾಯಕವಾಗಿರುತ್ತದೆ. ರಸಿಕರಲ್ಲದವರ ಬರಿಮಾತನ್ನು ಕೇಳಲು ಅಹಿತಕರವಾಗಿರುತ್ತದೆ ಎಂಬುದು ಸತ್ಯವಾದ ಮಾತು.

ಕಣ್ಣು, ನಾಲಗೆ, ಮನವು ತನ್ನವೆಂದೆನಬೇಡ

ಅನ್ಯರು ಕೊಂದರೆನಬೇಡ ಇವು ಮೂರು

ನಿನ್ನ ಕೊಂದವು ಸರ್ವಜ್ಞ (ಕ.ಸಾ.ಕೋ.೫೧)

ಸರ್ವಜ್ಞ ಕವಿಯು ಕಣ್ಣು, ನಾಲಗೆ ಮತ್ತು ಮನಸ್ಸುಗಳು ತನ್ನವೆಂದು ಅಭಿಮಾನ ಪಡಬೇಡ, ಬೇರೆಯವರ ಮೇಲೆ ಅಪವಾದ ಮಾಡಿದರೆ ಅವು ನಿಮಗೇ ತೊಂದರೆ ಎನ್ನುತ್ತಾನೆ.

ತ್ರಿವಳಿಗಳ ತ್ರಿವಿಕ್ರಮ ಎಂಬುದು ಆತನ ಅನ್ವರ್ಥಕ ನಾಮ

ಸಮಾಜದಲ್ಲಿನ ಎಲ್ಲ ಪಟ್ಟ ಭಧ್ರಹಿತಾಸಕ್ತಿಗಳ

ಗುಟ್ಟನ್ನುರಟ್ಟು ಮಾಡಿದವನು ಸರ್ವಜ್ಞ (ಕ, ಸಾ ಕೋಶ. ೫೧)

ಸಮಾಜದ ಎಲ್ಲ ಪಟ್ಟಭದ್ರಹಿತಾಸಕ್ತಿಗಳನ್ನು ವಿರೋಧಿಸುತ್ತಾ, ಸಮಾಜಕ್ಕೆ ಒಳಿತನ್ನು ಬಯಸುವ ಮನಸ್ಸು ಸರ್ವಜ್ಞನದಾಗಿತ್ತು. ಯಾವ ವಿಚಾರಗಳನ್ನು ಮುಚ್ಚಿಡುತ್ತಿರಲಿಲ್ಲ, ನೇರವಾಗಿ ನಿಷ್ಠುರವಾಗಿ ಎಲ್ಲ ಕಹಿ ಸತ್ಯಗಳನ್ನು ರಟ್ಟು ಮಾಡುವ ಗುಣ ಸರ್ವಜ್ಞನದಾಗಿತ್ತು.

ನಾಲಿಗೆಯ ಸವಿಸುಖಕೆ ಚೀಲವನು ತುಂಬಿದರೆ

ಶೂಲೆಗಳು ಹಲವು ತೆರನಾಗಿ ರುಜೆಗಳಿಂ

ಕಾಲವಶನಕ್ಕು ಸರ್ವಜ್ಞ (ನಡು.ಸಾ. ೬೫)

ಎಲ್ಲದಕ್ಕಿಂತಲೂ ದೇಹದ ಆರೋಗ್ಯ ಬಹಳ ಮುಖ್ಯ ಎನ್ನುವುದನ್ನು ಸೊಗಸಾಗಿ ಸರ್ವಜ್ಞ ಹೇಳಿದ್ದಾನೆ. ನಾಲಿಗೆಯ ರುಚಿಕೆ ಸಿಕ್ಕಸಿಕ್ಕದ್ದನ್ನು ತಿನ್ನುತ್ತಾ ಹೋದರೆ ಮುಂದೆ ರೋಗರುಜಿನಗಳಿಗೆ

ISBN Number : 978-93-342-6884-3

ಬಲಿಯಾಗಬೇಕಾಗುತ್ತದೆ.ದೇಹ ರೋಗದ ಗೂಡಾಗುತ್ತದೆ. ಸಾತ್ವಿಕ ಆಹಾರವನ್ನು ಸೇವಿಸಬೇಕೆಂಬುದೇ ಈ ತ್ರಿಪದಿಯ ತಾತ್ಪರ್ಯ.

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ?

ಜಾತಂಗೆ ಜಾತನೆನರ್ಲೇಕೆ ? ಅರುವಿಡಿ

ದಾತನೇ ಜಾತ ಸರ್ವಜ್ಞ (ನಡು ಸಾ.೬೬)

ಸರ್ವಜ್ಞನು ಜಾತಿಯನ್ನು ಕುರಿತು ಹೇಳುವ ಮಾತು ಸರ್ವಕಾಲಕ್ಕೂ ಅನ್ವಯವಾಗುವಂತಹದ್ದಾಗಿದೆ. ಕೆಳವರ್ಗದವರ ಮನೆಯ ದೀಪವು ಕೆಳಮಟದ್ದು ಎಂದು ಯಾವಾಗಲೂ ಭಾವಿಸಲಾಗುವುದಿಲ್ಲ. ಆ ಜಾತಿ, ಈ ಜಾತಿ ಎಂದು ಭೇಧ ಮಾಡಬಾರದು.ಭಗವಂತನನ್ನು ಯಾರು ಒಲಿಸಿಕೊಳ್ಳುತ್ತಾರೋ ಅವರೇ ನಿಜವಾದ ಶ್ರೇಷ್ಠವ್ಯಕ್ತಿ ಎಂಬುದು ಸರ್ವಜ್ಞನ ವಿಶಾಲವಾದ ಚಿಂತನೆಯಾಗಿದೆ.

ಅನ್ನದಾನಗಳಿಗಿಂತ ಇನ್ನು ದಾನಗಳಿಲ್ಲ

ಅನ್ನಕ್ಕೆ ಮೇಲು ಹಿರಿದಿಲ್ಲ ಲೋಕಕ್ಕೆ

ಅನ್ನವೇ ಪ್ರಾಣ ಸರ್ವಜ್ಞ (ನಡು ಸಾ. ೬೫)

ಸರ್ವಜ್ಞನು ದಾನ ಹಾಗು ಜೀವನದಲ್ಲಿ ಇರುವ ಮಹತ್ವದ ವಿಚಾರಗಳನ್ನು ಜನರಿಗೆ ತಿಳಿಹೇಳಿದ್ದಾನೆ. ಮನುಷ್ಯನಿಗೆ ಎಲ್ಲ ಅವಶ್ಯಕತೆಗಳಿಗಿಂತ ಅನ್ನದ ಅವಶ್ಯಕತೆಯಿದೆ. ಹಸಿದವರಿಗೆ ಅನ್ನವನ್ನು ನೀಡಿ, ಯಾವುದನ್ನು ದಾನ ಮಾಡಿದರು ಅನ್ನವನ್ನು ದಾನ ಮಾಡಿದಷ್ಟು ಪುಣ್ಯ ಲಭಿಸುವುದಿಲ್ಲ.ಲೋಕದಲ್ಲಿ ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದ ದಾನ ಅನ್ನದಾನ ಎನ್ನುತ್ತಾನೆ.

ಬಲ್ಲವರ ಒಡನಾಡೆ ಬೆಲ್ಲವನು ಸವಿದಂತೆ

ಅಲ್ಲದ ಜ್ಞಾನಿಯೊಡನಾಡೆ ಮೊಳಕೈಗೆ

ಕಲ್ಲು ಹೊಡೆದಂತೆ ಸರ್ವಜ್ಞ (ನಡು ಸಾ. ೬೫)

ISBN Number : 978-93-342-6884-3

ಕೆಲವು ವಿತಂಡವಾದಿಗಳು ತಮ್ಮದೇ ವಿಚಾರಗಳು ಸರಿ ಎಂದು ವಾದ ಮಾಡುತ್ತಾರೆ. ದಡ್ಡರಾಗಿದ್ದರೂ ತಾವೇ ಬುದ್ಧಜೀವಿಗಳೆಂದು ವರ್ತಿಸುತ್ತಾರೆ. ಅಂತಹ ಅಜ್ಞಾನಿಗಳ ಬಗೆಗೆ ಸರ್ವಜ್ಞನಾಡುವ ಮಾತು ಈ ರೀತಿ ಇದೆ. ಬಲ್ಲವರೊಂದಿಗೆ ಸಹವಾಸ ಮಾಡಿದರೆ ಸವಿಯಾದ ಬೆಲ್ಲವನ್ನು ಸವಿದಂತೆ, ಅದೇ ಅಜ್ಞಾನಿಗಳೊಡನೆ ಜೊತೆಗೂಡಿ ಮಾತನಾಡಿದರೆ ಮೊಳಕೈಗೆ ಕಲ್ಲನ್ನು ಹೊಡೆದಾಗ ಎಷ್ಟು ಅಸಹನೀಯ ನೋವಾಗುತ್ತದೆಯೋ ಹಾಗೆ ಜೀವನದಲ್ಲಿ ಅಷ್ಟೇ ನೋವನ್ನು ಅನುಭವಿಸಬೇಕಾಗುತ್ತದೆ ಎಂದು ಸರ್ವಜ್ಞ ಎಚ್ಚರಿಕೆಯ ಮಾತುಗಳನ್ನಾಡಿದ್ದಾನೆ.

ಸರ್ವಜ್ಞನ ಹೆಸರನ್ನು ಕುರಿತು ಹಲವಾರು ಜಿಜ್ಞಾಸೆಗಳಿವೆ. ಸರ್ವಜ್ಞ ಎಂಬುದು ಹೆಸರೋ, ಆತನಿಗೆ ಸಿಕ್ಕಿರುವ ಬಿರುದೋ, ಇಷ್ಟದೈವವೋ, ಇಲ್ಲ ಆತನ ವಚನಗಳ ಅಂಕಿತವೋ ಎಂಬುದಾಗಿ ವಿದ್ವಾಂಸರುಗಳು ಹಲವಾರು ಚರ್ಚೆಗಳನ್ನು ಮಾಡಿದ್ದಾರೆ. ಈತನ ಬಗೆಗಿನ ಚರ್ಚೆಗಳು ಏನೇ ಇದ್ದರು ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞನ ತ್ರಿಪದಿಗಳು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಆತನ ತ್ರಿಪದಿಗಳಿಗೆ ಇಂತಹದ್ದೇ ವಸ್ತು, ಇಂತಹದ್ದೇ ವಿಷಯ ಎಂಬುದಿಲ್ಲ. ಯಾವುದೇ ಹಂಗಿಗೂ ಒಳಪಡದೇ, ಯಾರು ಬೇಕಾದರೂ ಓದಬಹುದಾಗಿದೆ.

ಸರ್ವಜ್ಞನ ವಚನಗಳು ಜೀವನ ವಿಮರ್ಶೆಗೆ ಒಳಪಡುತ್ತವೆ. ಅವನನ್ನು ಇತರ ಕವಿಗಳಿಂದ ಬೇರ್ಪಡಿಸಲು ಕಾರಣ ಆತನ ವಚನಗಳ ಉದ್ದೇಶ. ಅವನ ವಚನಗಳು ಓದುಗರ ಮನಸ್ಸನ್ನು ರಂಜಿಸುತ್ತವೆ. ಓದುಗರ ಮನಸ್ಸನ್ನು ಕೆದುಕುವ ಹಾಗು ಪ್ರಶ್ನಿಸುವ ವಿಧಾನವಾಗಿದೆ.

ಉಣ್ಣದೊಡವೆಯ ಗಳಿಸಿ ಮಣ್ಣಿನೊಳು ಬಚ್ಚಿಟ್ಟು

ಚೆನ್ನಾಗಿ ನೆಲನ ಸಾರಿಸಿದವನ ಬಾಯೊಳಗೆ

ಮಣ್ಣು ಕಾಣಯ್ಯ ಸರ್ವಜ್ಞ (ಶರಣ, ಸಾ.೧೧೧)

ಎಂಬ ಉಕ್ತಿಯಲ್ಲಿ ಮನಸ್ಸನ್ನು ಬಡಿದೆಬ್ಬಿಸುವ ವಿಚಾರವಿದೆ. ಜೀವನದಲ್ಲಿ ಬಚ್ಚಿಟ್ಟು ಏನು ಪ್ರಯೋಜನವಿಲ್ಲ. ತಾನು ಕಷ್ಟಪಟ್ಟು ದುಡಿದ ಹಣವನ್ನು ಅನುಭವಿಸದೆ ಇದ್ದರೆ ಜೀವನದಲ್ಲಿ ಎಲ್ಲವನ್ನೂ ಕಳೆದುಕೊಂಡಂತೆ. ತಾನು ಅನುಭವಿಸಿ, ಇತರರಿಗೂ ದಾನ ಮಾಡಿದರೆ ಆಗ ಮನುಷ್ಯನ ಜೀವನ ಸಾರ್ಥಕವಾಗುತ್ತದೆ ಎಂಬುದು ಸರ್ವಜ್ಞನ ಜೀವನ ಪ್ರೀತಿಯ ಮಾತುಗಳಾಗಿವೆ.

ISBN Number : 978-93-342-6884-3

ಸರ್ವಜ್ಞನು ತನ್ನ ವಚನಗಳನ್ನು ತ್ರಿಪದಿಗೆ ತಿರುಗಿಸಿ ಪ್ರಚಾರ ಮಾಡಿದವನು. ಈತ ವಚನಕಾರರಂತೆ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದಲ್ಲಿ ತನ್ನನ್ನು ನೇರವಾಗಿ ತೊಡಗಿಸಿಕೊಳ್ಳದಿದ್ದರೂ, ವಚನಗಳ ಮೂಲಕ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸಿದ್ದಾನೆ. ವಚನಕಾರರಂತೆ ಧರ್ಮಪ್ರಸಾರದ ಉದ್ದೇಶಕ್ಕೆ ಬದ್ಧನಾಗದೇ, ಸ್ವತಂತ್ರವಾಗಿ ಊರೂರು ಅಲೆದವನು. ಇವನ ತ್ರಿಪದಿಗಳಿಂದ ವೀರಶೈವ ಧರ್ಮದವನು ಎಂದು ಊಹಿಸಬಹುದಾದರೂ ಎಲ್ಲ ಚೌಕಟ್ಟನ್ನು ಮೀರಿ ನಿಂತವನು.

ಪ್ರಖ್ಯಾತ ಸಾಹಿತಿ ಆರ್.ಸಿ.ಹಿರೇಮಠ ಅವರು ವಚನಕಾರರ ಪ್ರಭಾವ ಸರ್ವಜ್ಞನ ಮೇಲೆ ಬಹಳ ಆಗಿದೆ ಎಂಬ ವಿಚಾರಗಳನ್ನು ಕುರಿತು ಮಾರ್ಮಿಕವಾಗಿ ಹೀಗೆ ವಿವರಿಸಿದ್ದಾರೆ. "ವಚನಕಾರರಂತೆ ಸರ್ವಜ್ಞ ವಿಚಾರವಾದಿ, ಅನುಭಾವಿ:, ಸಮಾಜ–ವಿಮರ್ಶಕ ಮತ್ತು ಕ್ರಾಂತಿಕಾರಕ,ಜನಸಾಮಾನ್ಯರ ಜೀವನವನ್ನು ತಿದ್ದಿ ತೀಡುವುದೇ ಅವನ ಉದ್ದೇಶವಾಗಿದ್ದಿತು. ದಯೆ ಆತನ ಧರ್ಮವಾಯಿತು. ಕಾಯಕ ವೃತ್ತಿಯಾಯಿತು.ಸಮಾಜದಲ್ಲಿದ್ದ ಜಾತಿ–ಮತಗಳ ವೈಷಮ್ಯ ಕಿತ್ತು ಬಿಸುಟಲು ಆತ ನಿರಂತರ ಹೋರಾಡಿದವನು. ಸದಾಚಾರ ಸನ್ಮಾರ್ಗಗಳೇ ಜೀವನದ ಮೌಲ್ಯಗಳೆಂದು ಸ್ಪಷ್ಟಪಡಿಸಿದವನು. ಶಿವಶರಣರ ಷಟ್ಸ್ಥಲ, ಅಷ್ಟಾವರಣ ಪಂಚಾಚಾರಗಳನ್ನು ಸರ್ವಜ್ಞನು ತನ್ನ ವಚನಗಳಲ್ಲಿ ಪ್ರತಿಪಾದಿಸಿದಂತೆ ಅವರ ಜೀವನ ಮೌಲ್ಯಗಳನ್ನು ಧಾರಾಳವಾಗಿ ಪ್ರತಿಪಾದಿಸಿದ್ದಾನೆ." (ಶ. ಸಾ.೧೧೨)

ಸರ್ವಜ್ಞನ ವಚನಗಳಿಗೆ ಇಂತಹದ್ದೇ ವಸ್ತುವಿಲ್ಲ. ಆದರೆ ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ. ಸಮಾಜದಲ್ಲಿ ಇದ್ದ ಅಧರ್ಮ, ಅನೀತಿ, ತೋರಿಕೆಯ ಭಕ್ತಿ, ಮೂಢನಂಬಿಕೆ, ಪಕ್ಷಪಾತ, ಬೂಟಾಟಿಕೆ, ಮೋಸ, ವಂಚನೆ, ಸುಳ್ಳು, ಕಳ್ಳತನ. ದುರ್ನಡತೆ, ವ್ಯಭಿಚಾರ ಮುಂತಾದ ಕೆಟ್ಟ ವಿಚಾರಗಳ ವಿರುದ್ಧ ಸರ್ವಜ್ಞ ಸಿಡಿದೆದ್ದು ತನ್ನ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾನೆ. ಸಮಾಜದಲ್ಲಿ ಆಚರಣೆಯಲ್ಲಿದ್ದ ಅನಿಷ್ಟ ಪದ್ಧತಿ, ಸಮಾಜ ವಿರೋಧಿ ಆಚರಣೆಗಳನ್ನು ಖಂಡಿಸಿದ್ದಾನೆ. ಸಮಾಜದ ಜೀವನವನ್ನು ಸೂಕ್ಷ್ಮವಾಗಿ ವೀಕ್ಷಿಸಿ, ಜೀವನ ಮೌಲ್ಯಗಳನ್ನು ತನ್ನ ವಚನಗಳ ಮೂಖಾಂತರ ಜನರಿಗೆ ಅರುಹುವ ಪ್ರಯತ್ನ ಮಾಡಿದ್ದಾನೆ. ಕಾಯಕದ ಬಗೆಗೆ, ಜೀವನ ಶ್ರದ್ಧೆಯ ಬಗೆಗೆ, ಆಷಾಢಭೂತಿಗಳ ಬಗೆಗೆ ಸರ್ವಜ್ಞ ಬಹಳ ಸೊಗಸಾಗಿ ನುಡಿದಿದ್ದಾನೆ.

ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ

ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಿಲ್ಲ

ದಿಲ್ಲ ಕಾಣಯ್ಯ ಸರ್ವಜ್ಞ

ISBN Number : 978-93-342-6884-3

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಲೇಸು, ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ಎಂಬ ಸರ್ವಜ್ಞನ ವಚನಗಳು ಮನುಷ್ಯನ ವೃತ್ತಿ ಮತ್ತು ಬದುಕಿನ ಶೈಲಿಯನ್ನು ಹೇಳುವುದಾಗಿದೆ. ಇಂತಹ ವಚನಗಳಿಂದಲೇ ಸರ್ವಜ್ಞ ಕನ್ನಡ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಗಳಿಸಿಕೊಂಡಿದ್ದಾನೆ.ಸ ಪ್ರತಿಯೊಬ್ಬರಿಗೂ ಈತನ ವಚನಗಳು ದಾರಿದೀಪವಾಗಿವೆ. ಈ ಕಾರಣದಿಂದಾಗಿಯೇ ಸಮಾಜದ ಬಗೆಗೆ ಅಪಾರ ಕಳಕಳಿಯನ್ನು ಹೊಂದಿದ್ದ ಸರ್ವಜ್ಞ ಇಂದಿಗೂ ಸಹೃದಯರ ಮನದಾಳದಲ್ಲಿ ಅಜರಾಮರನಾಗಿದ್ದಾನೆ.

ಪರಾಮರ್ಶನ ಗ್ರಂಥ

೧. ನಡುಗನ್ನಡ ಸಾಹಿತ್ಯ ಸಂಗಮ– ಸಂ. ಡಾ.ರಾಮಲಿಂಗಪ್ಪ ಟಿ. ಬೇಗೂರು,೨೦೧೮, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨.ಸರ್ವಜ್ಞನ ವಚನಗಳು– ಡಾ.ಎಲ್. ಬಸವರಾಜು, ೧೯೭೨, ಬುಕ್ ಇಂಟರ್ ನ್ಯಾಷನಲ್, ಬೆಂಗಳೂರು

೩.ಶರಣ ಸಾಹಿತ್ಯ–ಸಂಸ್ಕೃತಿ ಕವಳಿಗೆ– ಡಾ.ಸಿ.ನಾಗಭೂಷಣ,೨೦೧೮,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪.ಸರ್ವಜ್ಞನ ಸಮಗ್ರ ತ್ರಿಪದಿಗಳು– ಸಂ. ಡಾ.ರಾಗೌ,೨೦೧೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ– ಡಾ.ಚಿ.ಸಿ.ನಿಂಗಣ್ಣ,೨೦೦೮, ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ.

 ISBN Number : 978-93-342-6884-3